ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 28 ಭಾನುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 73 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕುಕ್ಕರಹಳ್ಳಿ ಕೆರೆ ಹಬ್ಬ; ಕೆರೆಯ ಜೀವ ವೈವಿಧ್ಯತೆ, ಸಂರಕ್ಷಣೆಯ ಕುರಿತು ಅರ್ಥಪೂರ್ಣ ಅರಿವು



ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಶನಿವಾರ ನಡೆದ 'ಕುಕ್ಕರಹಳ್ಳಿ ಕೆರೆ ಹಬ್ಬ' ಅಂಗವಾಗಿ ಆಯೋಜಿಸಿದ್ದ ಪಕ್ಷಿ, ಪೂರ್ಣಯ್ಯ ನಾಲೆ ಕುರಿತ ಛಾಯಾಚಿತ್ರ ಪ್ರದರ್ಶನ ವೀಕ್ಷಿಸುತ್ತಿರುವ ಪರಿಸರ ಪ್ರೇಮಿಗಳು.

ಮೈಸೂರು,ಜೂ.27(ಎಂಟಿವೈ)–ಮೈಸೂರಿನ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ವಿವಿಧ ಸಂಸ್ಥೆಗಳು ಆಯೋಜಿಸಿದ್ದ 'ಕುಕ್ಕರಹಳ್ಳಿ ಕೆರೆ ಹಬ್ಬ' ಕಾರ್ಯಕ್ರಮದಲ್ಲಿ ನೂರಾರು ಪರಿಸರ ಪ್ರೇಮಿಗಳು ಪಾಲ್ಗೊಂಡು ಜೀವ ವೈವಿಧ್ಯತೆ, ಕೆರೆ ಪರಿಸರ ಹಾಗೂ ಪೂರ್ಣಯ್ಯ ನಾಲೆ ಸಂರಕ್ಷಣೆಯ ಮಹತ್ವದ ಬಗ್ಗೆ ಮಾಹಿತಿ ಪಡೆದರು.

ಮೈಸೂರು ವಾಟರ್ ಫೋರಮ್, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್, ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು ಸಸ್ಟೇನಬಲ್ ಫೋರಮ್, ಅರಣ್ಯ ಔಟ್ ರೀಚ್ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಿಗೆ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಎರಡು ದಿನಗಳ 'ಕುಕ್ಕರಹಳ್ಳಿ ಕೆರೆ ಹಬ್ಬ' ಆಯೋಜಿಸಿದ್ದು, ಮೊದಲ ದಿನವಾದ ಇಂದು ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಪಕ್ಷಿ ವೀಕ್ಷಣೆ, ಕೆರೆ ವೀಕ್ಷಣೆ, ಗಿಡ–ಮರಗಳ ವೀಕ್ಷಣೆ, ಪೂರ್ಣಯ್ಯ ನಾಲೆ, ಪಕ್ಷಗಳ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಕುಕ್ಕರಹಳ್ಳಿ ಕೆರೆ ಆವರಣದಲ್ಲಿರುವ ಪರ್ಗೋಲಾದಲ್ಲಿ ಆಯೋಜಿಸಿದ್ದ ಕೆರೆಯಲ್ಲಿನ ವಿವಿಧ ಪ್ರಬೇಧದ ಪಕ್ಷಿಗಳ ಛಾಯಾಚಿತ್ರ, ಕೆರೆಗೆ ಮಳೆ ನೀರು ಹರಿಯುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ ಪೂರ್ಣಯ್ಯ ನಾಲೆಗೆ ಸಂಬಂಧಿಸಿದ ಚಿತ್ರ ಹಾಗೂ ವಿವಿಧ ಪತ್ರಿಕೆಗಳಲ್ಲಿ ಬಂದ ವರದಿ ಚಿತ್ರಣಗಳ ಪ್ರದರ್ಶನವನ್ನು ವಾಯು ವಿಹಾರಿಗಳು ಸೇರಿದಂತೆ ಕೆರೆ ಹಬ್ಬಕ್ಕೆ ಬಂದಿದ್ದ ಪರಿಸರ ಪ್ರೇಮಿಗಳು ವೀಕ್ಷಿಸಿ ಸಂಭ್ರಮಿಸಿದರು.

ಕೆರೆ ವೈವಿಧ್ಯತೆ: ಕೆರೆ ಹಬ್ಬದಲ್ಲಿ ಜಲತಜ್ಞ ಪ್ರೊ.ಎನ್. ರವಿಕುಮಾರ್ ಮಾತನಾಡಿ, ಮೈಸೂರಿನ ಹೃದಯ ಭಾಗದಲ್ಲಿರುವ ಕುಕ್ಕರಹಳ್ಳಿ ಕೆರೆ ನೈಸರ್ಗಿಕ ಪರಿಸರ ಹೊಂದಿದ್ದು, ಮೈಸೂರಿನ ತಾಪಮಾನ ನಿಯಂತ್ರಣಕ್ಕೆ ಪ್ರಮುಖ ಪಾತ್ರ ವಹಿಸಲಿದೆ. ಈ ಹಿಂದೆ ಅತ್ಯುತ್ತಮವಾಗಿದ್ದ ಈ ಕೆರೆಗೆ ವಲಸೆ ಪಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದವು. ಅಲ್ಲದೆ, ಪೂರ್ಣಯ್ಯ ನಾಲೆ ಮೂಲಕ ಮಳೆ ನೀರು ಕುಕ್ಕರಹಳ್ಳಿ ಕೆರೆಗೆ ಸೇರುತ್ತಿತ್ತು. ಆದರೆ, ಇದೀಗ ಪೂರ್ಣಯ್ಯ ನಾಲೆ ಒತ್ತುವರಿಯಾಗಿದ್ದು, ಮಳೆ ನೀರಿನ ಬದಲು ಒಳಚರಂಡಿ ನೀರು ಕೆರೆ ಸೇರುತ್ತಿದೆ. ಇದರಿಂದ ಕೆರೆ ಪರಿಸರ ಮಲಿನಗೊಳ್ಳುತ್ತಿದೆ. ಕೆರೆ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ವಾತಾವರಣ ಬದಲಾಗುತ್ತಿದೆ: ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಡೀನ್ ಅಂಡ್ ಡೈರೆಕ್ಟರ್ ಡಾ.ಹೆಚ್.ಎಸ್. ಚಂಪಾ ಮಾತನಾಡಿ. ಕುಕ್ಕರಹಳ್ಳಿ ಕೆರೆಗೆ ಶುದ್ಧ ಮಳೆ ನೀರು ಪೂರೈಸುತ್ತಿದ್ದ ಪೂರ್ಣಯ್ಯ ನಾಲೆ 25 ಕಿ.ಮಿ ವಿಸ್ತೀರ್ಣ ಹೊಂದಿದ್ದು, ಹಲವು ಕಡೆ ನಾಲೆ ಒತ್ತುವರಿಯಾಗಿದೆ. ಹಲವೆಡೆ ಕಟ್ಟಡ ತ್ಯಾಜ್ಯ ಸುರಿಯಲಾಗಿದೆ. ಈಗ ಇರುವ ನಾಲೆಯನ್ನಾದರೂ ಸಂರಕ್ಷಿಸುವ ಅನಿವಾರ್ಯತೆ ಇದೆ. ಇದರಿಂದ ಮಳೆ ನೀರು ನಾಲೆ ಮೂಲಕ ಹರಿದು ಕುಕ್ಕರಹಳ್ಳಿ ಕೆರೆ ಸೇರುವುದರಿಂದ ಕೆರೆ ಪರಿಸರ ಸಂರಕ್ಷಿಸಬಹುದಾಗಿದೆ. ದೇಶ–ವಿದೇಶದಲ್ಲಿ ಮಳೆ ನೀರು ಕೆರೆಗೆ ಹರಿದು ಬರಲು ನಾಲೆಗಳನ್ನು ಕಾಂಕ್ರೀಟ್‌ನಿಂದ ನಿರ್ಮಿಸಿರುವ ನಿರ್ದೇಶನವಿದೆ. ಆದರೆ ನಮ್ಮಲ್ಲಿ ನೈಸರ್ಗಿಕ ನಾಲೆಗಳಿವೆ. ಇದರಿಂದ ನೀರು ಹರಿದು ಬರುವಾಗ ಮಾರ್ಗದುದ್ದಕ್ಕೂ ಸಾಕಷ್ಟು ಪ್ರಮಾಣದಲ್ಲಿ ನೀರು ಇಂಗುತ್ತದೆ. ಈ ಪ್ರಕ್ರಿಯೆಯಿಂದ ಅಂತರ್ಜಲದ ಪ್ರಮಾಣ ಹೆಚ್ಚಾಗುವುದರೊಂದಿಗೆ ಸ್ಥಳೀಯ ವಾತಾವರಣ ತಂಪಾಗಿರುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ತಾಪಮಾನ ಹೆಚ್ಚಾಗುತ್ತಿದೆ. ಅದನ್ನು ನಿಯಂತ್ರಿಸಬೇಕಾದರೆ ಕೆರೆಗಳ ಸಂರಕ್ಷಣೆ ಅಗತ್ಯ. ಈ ಹಿನ್ನೆಲೆಯಲ್ಲಿ ಕುಕ್ಕರಹಳ್ಳಿ ಕೆರೆ ಹಬ್ಬ ಆಯೋಜಿಸಿ, ವಾಯುವಿಹಾರಿಗಳಿಗೆ, ಪರಿಸರ ಪ್ರೇಮಿಗಳಿಗೆ, ಆಸಕ್ತರಿಗೆ ಕುಕ್ಕರಹಳ್ಳಿ ಕೆರೆ ಜೀವವೈವಿಧ್ಯತೆ, ಜೀವಸಂಕುಲ, ಪಕ್ಷಿ ಸಂಕುಲ, ಜಲಚರಗಳು, ಗಿಡ–ಮರ, ಪೂರ್ಣಯ್ಯ ನಾಲೆ ಸೇರಿದಂತೆ ಇನ್ನಿತರ ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಪಕ್ಷಿ ವೀಕ್ಷಣೆ: ಇದೇ ವೇಳೆ 100ಕ್ಕೂ ಹೆಚ್ಚು ಮಂದಿಯನ್ನು ಐದು ತಂಡಗಳಾಗಿ ವಿಂಗಡಿಸಿ, ಪಕ್ಷಿ ವೀಕ್ಷಣೆಗೆ ಕರೆದೊಯ್ಯಲಾಯಿತು. ಪಕ್ಷಿ ತಜ್ಞರಾದ ಸಪ್ತಗಿರೀಶ್, ಯೋಗೇಶ್, ಎಸ್.ಎಸ್.ಸುನೀಲ್, ಸಹನಾ, ಸಂಜಯ್ ದತ್ತಾತ್ರೇಯ, ಕಶ್ಯಪ್, ಮರಗಳ ತಜ್ಞ ಶ್ರೀಹಾ ಹಾಗೂ ಇನ್ನಿತರರು ಪಕ್ಷಿ ಮತ್ತು ಮರಗಳ ಬಗ್ಗೆ ಮಾಹಿತಿ ನೀಡಿದರು. ಪಕ್ಷಿ ವೀಕ್ಷಣೆ ವೇಳೆ 40ಕ್ಕೂ ಹೆಚ್ಚು ಬಗೆಯ ಪಕ್ಷಿಗಳನ್ನು ವೀಕ್ಷಿಸಿದರು. ಇದೇ ವೇಳೆ ಛಾಯಾಚಿತ್ರ ಪ್ರದರ್ಶನದ ಕುರಿತು ಶೈಲಜೇಶ್ ಮಾಹಿತಿ ನೀಡಿದರು. ಕಾರ್ಯಕ್ರಮದ ಅಂಗವಾಗಿ ಪಕ್ಷಿ ವೀಕ್ಷಣೆಗೆ ಬೈನಾಕ್ಯುಲರ್ ಇಡಲಾಗಿತ್ತು. ಹಲವು ಮಂದಿ ಬೈನಾಕ್ಯುಲರ್‌ನಿಂದ ಪಕ್ಷಿ ವೀಕ್ಷಿಸಿದರು. ಕೆರೆ ಮತ್ತು ಪೂರ್ಣಯ್ಯ ನಾಲೆ ಸಂರಕ್ಷಣೆಗೆ ಒತ್ತಾಯಿಸಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು. ಈ ವೇಳೆ ರಮೇಶ್ ಹೆಬ್ಬಾಲೆ, ಸುಜೀತ್, ಚಿನ್ಮಯಿ, ಸಜ್ಜಿತ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಪಕ್ಷಿ ವೀಕ್ಷಣೆ ಮಾಡುತ್ತಿರುವ ಪರಿಸರ ಪ್ರೇಮಿಗಳು.

ಔಷಧೀಯ ಗಿಡಗಳನ್ನು ಬೆಳೆಸುವ ಮೂಲಕ ಮೈಸೂರು ವಿಮಾನ ನಿಲ್ದಾಣ ಹಸಿರೀಕರಣ



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶನಿವಾರ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆ ವತಿಯಿಂದ ಆಯೋಜಿಸಲಾಗಿದ್ದ ಮೈಗ್ರೀನ್ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ವಿಮಾನ ನಿಲ್ದಾಣ ನಿರ್ದೇಶಕಿ ಪಿ.ವಿ.ಉಷಾಕುಮಾರಿ ಮಾಹಿತಿ

ಮೈಸೂರು, ಜೂ.27(ಜಿಎ)–ವಿಮಾನ ನಿಲ್ದಾಣದಲ್ಲಿ ಖಾಲಿ ಇರುವ ಪ್ರದೇಶ ಗಳಲ್ಲಿ ಔಷಧೀಯ ಗಿಡ–ಮರಗಳನ್ನು ಬೆಳೆಸುವ ಮೂಲಕ ಆವರಣವನ್ನು ಹಸಿರುಮಯಗೊಳಿಸಲಾಗುವುದು ಎಂದು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ನಿರ್ದೇಶಕಿ ಪಿ.ವಿ.ಉಷಾ ಕುಮಾರಿ ತಿಳಿಸಿದರು.

ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಶನಿವಾರ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಶಾಖೆ ವತಿಯಿಂದ ಆಯೋಜಿಸಲಾಗಿದ್ದ ಮೈಗ್ರೀನ್ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಪರಿಸರ ಸ್ನೇಹಿ ವಿಮಾನ ನಿಲ್ದಾಣವನ್ನಾಗಿ ಪರಿವರ್ತಿಸಲಾಗುತ್ತಿದ್ದು, ಈಗಾಗಲೇ ಪರಿಸರ ಸ್ನೇಹಿ ಕಾರ್ಯ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಬ್ಯಾಟರಿ ಚಾಲಿತ ವಾಹನಗಳ ಸೇವೆಯನ್ನು ನೀಡಲು ಉದ್ದೇಶಿಸಲಾಗಿದೆ ಎಂದರು.

ಮೈಸೂರಿನ ವಿಮಾನ ನಿಲ್ದಾಣದಲ್ಲಿ ರನ್‌ವೇ ವಿಸ್ತರಣೆ ಯೋಜನೆ ಚುರುಕುಗೊಂಡಿದ್ದು, ಇನ್ನೆರಡು ವರ್ಷಗಳಲ್ಲಿ ಅಂತಾರಾಷ್ಟ್ರೀಯ ವಿಮಾನಗಳ ಸೇವೆಯೊಂದಿಗೆ ಪ್ರಾದೇಶಿಕವಾಗಿ ನೆರೆ ರಾಜ್ಯಗಳ ನಗರಗಳಿಗೆ ನಿರಂತರವಾಗಿ ವಿಮಾನಯಾನ ಸೇವೆ ಕಲ್ಪಿಸಲಾಗುವುದು ಎಂದರು.

ಪರಿಸರ ಸ್ನೇಹಿಯಾಗಿ ಕಟ್ಟಡ ನಿರ್ಮಿಸಲು ಅಗತ್ಯವಿರುವ ವಸ್ತುಗಳ ಬಗ್ಗೆ ಪರಿಚಯ ಮಾಡಿಕೊಡುವ ಪ್ರಯತ್ನ ಈ ಪ್ರದರ್ಶನದಲ್ಲಿ ಇದೆ. 24 ಮಳಿಗೆಗಳಲ್ಲಿ ವಸ್ತುಪ್ರದರ್ಶನದಲ್ಲಿದ್ದು, ಪರಿಸರ ಸ್ನೇಹಿಯಾಗಿ ಕಟ್ಟಡ ನಿರ್ಮಿಸಲು ಅಗತ್ಯವಾದ ವಸ್ತುಗಳನ್ನು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಜೂ.28ರವರೆಗೆ ಈ ಪ್ರದರ್ಶನ ನಡೆಯಲಿದೆ ಎಂದು ಪ್ರದರ್ಶನ ಸಮಿತಿಯ ಅಧ್ಯಕ್ಷ ಎಂ.ಡಿ.ಪ್ರವೀಣ್ ಪಾಲ್ ಮಾಹಿತಿ ನೀಡಿದರು.


ಕಾರ್ಯಕ್ರಮದಲ್ಲಿ ಬಿಎಐ ಮೈಸೂರು ಶಾಖೆ ಅಧ್ಯಕ್ಷ ಕೆ.ಆರ್.ಪ್ರಭಾಕರ್‌ರಾವ್, ಕಾರ್ಯದರ್ಶಿ ಎಂ.ಡಿ.ಪ್ರವೀಣ್‌ಪಾಲ್, ಕಾರ್ಯದರ್ಶಿ ಜೆ.ಆರೋಕ್, ಖಜಾಂಚಿ ಎಸ್.ಶಶಿರಾಜ್, ಪರಿಸರ ಮಾಸಾಚರಣೆ ಸಮಿತಿ ಅಧ್ಯಕ್ಷ ಸಿ.ಡಿ.ಕೃಷ್ಣ, ಕಾರ್ಯದರ್ಶಿ ಎಸ್.ವಾಸುದೇವನ್, ಸಲಹೆಗಾರ ಆರ್.ರಘುನಾಥ್ ಉಪಸ್ಥಿತರಿದ್ದರು.

ಹರ್ಷವರ್ಧನ್‌ಗೆ ಹುಟ್ಟುಹಬ್ಬದ ಶುಭಾಶಯ...



ಶನಿವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಅವರ ಪುತ್ರ ಹರ್ಷವರ್ಧನ್ ಅವರನ್ನು ಉಪಾಧ್ಯಕ್ಷ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಚಿಕ್ಕಣ್ಣ, ಕಾರ್ಯದರ್ಶಿ ಸುಶೀಲ, ಪ್ರಧಾನ ಕಾರ್ಯದರ್ಶಿ ಶಶಿಕುಮಾರ್, ರಂಗಸ್ವಾಮಿ, ಸರಸ್ವತಿ ವಿನೋದ, ಕುಮಾರ್, ಪಶುಪತಿ ಇನ್ನಿತರರು ಅಭಿನಂದಿಸಿ, ಶುಭಾಶಯ ಕೋರಿದರು.

ಬಿ.ಕೆ.ಹರಿಪ್ರಸಾದ್‌ಗೆ ಅಭಿನಂದನೆ...



ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ನೂತನ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರನ್ನು ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿ. ಅಧ್ಯಕ್ಷ ಹೆಚ್‌ಡಿ.ಗಣೇಶ್, ಕೆಎಸ್‌ಆರ್‌ಟಿಸಿ ಕನಕ ನೌಕರರ ಸಂಘದ ಅಧ್ಯಕ್ಷ ಜವರೇಗೌಡ, ಹಳ್ಳಿಕೆರೆಹುಂಡಿ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷ ಶಿವಕುಮಾರ್, ನಂಜನಗೂಡು ಟಿಎಪಿಸಿಎಂ ನಿರ್ದೇಶಕ ಎಂ.ಬಿ.ಆನಂದ್, ಕೋಟೆ ತಾಲೂಕು ಕುರುಬ ಸಂಘದ ಅಧ್ಯಕ್ಷರು ಉಪಸ್ಥಿತರಿದ್ದರು.

ಖ್ಯಾತ ನಿರ್ದೇಶಕ, ನಟ ಕೆ.ಭಾಗ್ಯರಾಜ್ ನಿಧನ

ಚೆನ್ನೈ: ತಮಿಳು ಚಿತ್ರರಂಗದ ಹಿರಿಯ ನಿರ್ದೇಶಕ, ನಟ, ಕಥೆಗಾರ ಹಾಗೂ ಚಿತ್ರಕಥೆಗಾರ ಕೆ.ಭಾಗ್ಯರಾಜ್(73) ಅವರು ಶನಿವಾರ ಚೆನ್ನೈನಲ್ಲಿ ಹೃದಯಾಘಾತದಿಂದ ನಿಧನರಾದರು.




ಇವರು ಪತ್ನಿ ನಟಿ ಪೂರ್ಣಿಮಾ ಭಾಗ್ಯರಾಜ್, ಪುತ್ರ ನಟ ಶಾಂತನು ಭಾಗ್ಯರಾಜ್ ಹಾಗೂ ಪುತ್ರಿ ಸಾರಣ್ಯಾ ಭಾಗ್ಯರಾಜ್ ಅವರನ್ನು ಅಗಲಿದ್ದಾರೆ.

ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸಕ್ರಿಯರಾಗಿದ್ದ ಭಾಗ್ಯರಾಜ್, ಕೆಲವೇ ದಿನಗಳ ಹಿಂದೆ ನಟಿ–ರಾಜಕಾರಣಿ ಖುಷ್ಬು ಸುಂದರ್ ಅವರ ಪುತ್ರಿಯ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.

ತಮಿಳುನಾಡಿನ ಈರೋಡ್ ಜಿಲ್ಲೆಯಲ್ಲಿ ಕೃಷ್ಣಸ್ವಾಮಿ ಭಾಗ್ಯರಾಜ್ ಎಂಬ ಹೆಸರಿನಲ್ಲಿ ಜನಿಸಿದ ಅವರು, ಖ್ಯಾತ ನಿರ್ದೇಶಕ ಭಾರಥಿರಾಜಾ ಅವರ ಸಹಾಯಕರಾಗಿ ಚಿತ್ರರಂಗ ಪ್ರವೇಶಿಸಿದರು. ಬಳಿಕ ತಮ್ಮದೇ ವಿಶಿಷ್ಟ ಕಥೆ, ನಿರ್ದೇಶನ ಮತ್ತು ಅಭಿನಯದ ಮೂಲಕ ತಮಿಳು ಚಿತ್ರರಂಗದ ಪ್ರಮುಖ ಸೃಜನಶೀಲ ನಿರ್ದೇಶಕರಾಗಿ ಗುರುತಿಸಿಕೊಂಡರು. 1980 ಮತ್ತು 1990ರ ದಶಕಗಳಲ್ಲಿ ಹಾಸ್ಯ, ಭಾವನಾತ್ಮಕತೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಒಳಗೊಂಡ ಕಥೆಗಳ ಮೂಲಕ ಅಪಾರ ಜನಪ್ರಿಯತೆ ಗಳಿಸಿದರು. ತಮ್ಮ ವೃತ್ತಿಜೀವನದಲ್ಲಿ 25ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿ, 75ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ.

ನಿಧನ


ಎಂ.ಜಿ.ನರಸಿಂಹ



ಮೈಸೂರು, ಜೂ. 27– ಮೈಸೂರಿನ ಜಗನ್ಮೋಹನ ಅರಮನೆ ಆರ್ಟ್ ಗ್ಯಾಲರಿ ಸೂಪರಿಂಟೆಂಡೆಂಟ್ ಹಾಗೂ ಕೃಷ್ಣವಿಲಾಸ ರಸ್ತೆ ನಿವಾಸಿ ಎಂ.ಜಿ. ನರಸಿಂಹ (75) ಜೂನ್ 21 ರಂದು ನಿಧನರಾದರು. ಮೃತರು ಪತ್ನಿ ಡಾ. ಎಂ.ಎ. ಜಯಶ್ರೀ, ಪುತ್ರ ಹರ್ಷ, ಸೊಸೆ ರಮ್ಯಾ, ಪುತ್ರಿ ಲಕ್ಷ್ಮಿ, ಅಳಿಯ ವಿಕ್ರಮ್, ಮೊಮ್ಮಕ್ಕಳಾದ ಧೃತಿ, ಪ್ರಜ್ಞಾ, ಸಾತ್ವಿಕ್, ವರ್ಚಸ್ ಮತ್ತು ನಿಧಿ ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಅದೇ ದಿನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಹಜರತ್ ಮೌಲಾನಾ ಸೈಯದ್ ಮುಖ್ತಾರ್ ಅಹಮದ್ ಶಾ ಲಿಯಾಕತಿ

ಮೈಸೂರಿನ ಶಾಂತಿನಗರದ ನಿವಾಸಿ ಸೂಫಿ ಸಂತ ಹಜರತ್ ಮೌಲಾನಾ ಸೈಯದ್ ಮುಖ್ತಾರ್ ಅಹಮದ್ ಶಾ ಲಿಯಾಕತಿ(ನೂರಿ ಬಾಬಾ–61) ಅವರು ಶುಕ್ರವಾರ(ಜೂ.26) ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಇಬ್ಬರು ಪುತ್ರರು, ಮೊಮ್ಮಕ್ಕಳು, ಭಕ್ತಾದಿಗಳು ಹಾಗೂ ಅಪಾರ ಸಂಖ್ಯೆಯ ಹಿತೈಷಿಗಳು, ಬಂಧುಗಳು ಮತ್ತು ಸ್ನೇಹಿತರನ್ನು ಅಗಲಿದ್ದಾರೆ.



ಶನಿವಾರ ಮಧ್ಯಾಹ್ನ ಜೊಹರ್ ನಮಾಜ್ ನಂತರ ಮಧ್ಯಾಹ್ನ 1.30 ಗಂಟೆಗೆ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಸೀದಿ–ಎ–ಆಜಮ್ ಮರ್ಕಾಜ್ ಅಹ್ಲೆ ಸುನ್ನತ್–ವಲ್–ಜಮಾತ್‌ನಲ್ಲಿನಮಾಜ್–ಎ–ಜನಾಜಾ ನೆರವೇರಿದ ಬಳಿಕ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ದೊರೆಸ್ವಾಮಿ



ಮೈಸೂರಿನ ಆಲನಹಳ್ಳಿ ಬಡಾವಣೆ ನಿವಾಸಿ ಕೆ.ದೊರೆಸ್ವಾಮಿ (65) ಅವರು ಶುಕ್ರವಾರ ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ಇವರು ಪತ್ನಿ ಸಮಿತ್ರ, ಪುತ್ರರಾದ ಕನ್ನಡಪ್ರಭ ಪತ್ರಿಕೆ ಪ್ರಸರಣ ವಿಭಾಗದ ಉಪವ್ಯವಸ್ಥಾಪಕ ಡಿ.ಶ್ರೀಧರ್, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಪ್ರಸರಣಾಧಿಕಾರಿ ಡಿ.ಮಹೇಶ್ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಶನಿವಾರ ಮಧ್ಯಾಹ್ನ ಆಲನಹಳ್ಳಿಯ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.06.2026 ಭಾನುವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಮೈಸೂರು ಕರಾಟೆ ಅಸೋಸಿಯೇಷನ್** :ವಿಶ್ವ ಕರಾಟೆ ದಿನ, ಉದ್ಘಾಟನೆ : ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ, ಅಧ್ಯಕ್ಷತೆ : ಶಾಸಕ ದರ್ಶನ್ ಧ್ರುವನಾರಾಯಣ್, ಮುಖ್ಯ ಅತಿಥಿಗಳು : ಎಸ್ಪಿ ಮಲ್ಲಿಕಾರ್ಜುನ ಬಾಳದಂಡಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಯುವಜನ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಅಸೋಸಿಯೇಷನ್ ಅಧ್ಯಕ್ಷ ಎನ್. ಶಂಕರ, ಕಾರ್ಯದರ್ಶಿ ಎಂ.ಬಿ. ಚಿದಾನಂದ, ಸ್ಥಳ: ಅಥ್ಲೆಟಿಕ್ ಮೈದಾನ, ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಬೆಳಗ್ಗೆ 8ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಕುತ್ತಿಗೆ ನೋವು, ಸ್ಪಾಂಡಿಲೋಸಿಸ್, ಭುಜನೋವು, ಬೆನ್ನು ನೋವಿಗೆ ಯೋಗ ಚಿಕಿತ್ಸಾ ಶಿಬಿರ, ಅರ್ಥೈಟಿಸ್, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟ:** ರಾಜ್ಯ ಮಟ್ಟದ ತೃತೀಯ ಯೋಗ ಸಮ್ಮೇಳನ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸಾನ್ನಿಧ್ಯ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದಜೀ, ಸಮ್ಮೇಳನದ ಸರ್ವಾಧ್ಯಕ್ಷ: ಶ್ರೀ ಪಾತಂಜಲ ಯೋಗಶಾಲೆ ಸಂಸ್ಥಾಪಕ ಡಾ. ಬಿ.ಎನ್.ಎಸ್. ಐಯ್ಯಂಗಾರ್, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮಹರ್ಷಿ ಪತಂಜಲಿಗೆ ಪುಷ್ಪಾರ್ಚನೆ : ಕರ್ನಾಟಕ ರಾಜ್ಯ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ, ಅಧ್ಯಕ್ಷತೆ: ವೇದ ವಿಜ್ಞಾನ ಸಂಸ್ಥಾನಂ ಅಧ್ಯಕ್ಷ ಪ್ರೊ. ರಾಮಚಂದ್ರ ಜಿ.ಭಟ್, ಉಪಸ್ಥಿತರು :ಕಲಾವಿದರಾದ ಶ್ರೀಮತಿ ಜಮುನಾರಾಣಿ ಮಿರ್ಲೆ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಶಾಸಕರಾದ ಟಿ.ಎಸ್. ಶ್ರೀವತ್ಸ, ಜಿ.ಟಿ.ದೇವೇಗೌಡ, ಡಾ.ಡಿ.ತಿಮ್ಮಯ್ಯ, ದರ್ಶನ್ ಧ್ರುವನಾರಾಯಣ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಜೆಎಸ್‌ಎಸ್ ಯೋಗ ಸಂಸ್ಥಾಪಕ ಶ್ರೀಹರಿ ದ್ವಾರಕಾನಾಥ್, ಡಾ.ಪಿ.ಎನ್.ಗಣೇಶ್‌ಕುಮಾರ್, ಹೆಚ್.ವಿ.ರಾಜೀವ್, ಒಕ್ಕೂಟದ ಅಧ್ಯಕ್ಷ ಕೆ.ಜಿ. ದೇವರಾಜ್, ಸ್ಥಳ :ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ** : ಭಗಂದರ (ಫಿಸ್ತೂಲ), ಚರ್ಮದ ಕಾಯಿಲೆ, ಮೂಗು ಸೋರುವಿಕೆ, ಕಟ್ಟಿದ ಮೂಗು, ಸೀನುವುದು, ಗಂಟಲು ನೋವು, ತಲೆ ನೋವು ಸಮಸ್ಯೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಸ್ಪಂದನ ಆರ್ಟ್ ಗ್ಯಾಲರಿ, ಇನಿದನಿ ಮಣ್ಣ ಮಕ್ಕಳ ಹೊನ್ನ ಪದಗಳ ಬಳಗ:** ಲಿಂಗಾಂಬುಧಿ ಕೆರೆ ಪ್ರಕೃತಿ ಜಾಗೃತಿ ಹಬ್ಬ, ಉದ್ಘಾಟನೆ: ಉಪ ಅರಣ್ಯ ಸಂರಕ್ಷಣಾಧಿಕಾರಿ ಪರಮೇಶ್, ಮುಖ್ಯ ಅತಿಥಿಗಳು: ಮಾಜಿ ಉಪಕುಲಪತಿ ಡಾ. ಎಸ್.ಆರ್. ನಿರಂಜನ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗಿರೀಶ್, ನಮ್ಮನೆ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ವ್ಯವಸ್ಥಾಪಕ ನಿರ್ದೇಶಕ ಪಿ.ಶ್ರೀನಿವಾಸ್, ಅಧ್ಯಕ್ಷತೆ: ಮೈಸೂರು ವಿವಿ ಪ್ರಾಧ್ಯಾಪಕ ಡಾ.ಬಸಪ್ಪ, ಸ್ಥಳ: ಲಿಂಗಾಂಬುದಿ ಉದ್ಯಾನದ ನಿಸರ್ಗ ವೇದಿಕೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಸಿರಿಗನ್ನಡ ವೇದಿಕೆ, ಮೈಸೂರು ನಗರ ಘಟಕ, ಋಷಿ ಪ್ರಕಾಶನ:** ಆದಿಲ್ ಪಾಷ ಅವರ ನೀ ನನ್ನ ಚೈತ್ರ, ಹರ್ಷೋತ್ಸವ, ಆದಿ ರಾಗ ಕವನ ಸಂಕಲನಗಳ ಬಿಡುಗಡೆ ಸಮಾರಂಭ, ಕೃತಿಗಳ ಲೋಕಾರ್ಪಣೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ: ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ.ಸಂತೋಷ್, ಮುಖ್ಯ ಅತಿಥಿಗಳು: ಉಪನ್ಯಾಸಕರಾದ ಶ್ರೀಮತಿ ಅಲ್ ಹುಸ್ನ, ಕೃತಿಕಾರ ಅದಿಲ್ ಪಾಷ, ಸಾಹಿತಿ ಸಿ.ಎಸ್.ರಾಘವೇಂದ್ರ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ ಒಂದನೇ ಹಂತ, ಬೆಳಗ್ಗೆ 10ಕ್ಕೆ.

■ **ರಂಗವಾಹಿನಿ, ಚಾಮರಾಜನಗರ, ನೆಲೆ–ಹಿನ್ನೆಲೆ, ಡಾ.ರಾಮಮನೋಹರ ಲೋಹಿಯಾ ಟ್ರಸ್ಟ್ :** ಮುಳ್ಳೂರು ನಾಗರಾಜ ರಾಜ್ಯ ಮಟ್ಟದ 15ನೇ ವರ್ಷದ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ರಾಜಶೇಖರ ಕೋಟಿ ನೆನಪು ಕಾರ್ಯಕ್ರಮ, ಉದ್ಘಾಟನೆ : ಹಿರಿಯ ಕವಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಅಧ್ಯಕ್ಷತೆ: ಸಂಸ್ಕೃತಿ ಚಿಂತಕ ಸುಬ್ಬು ಹೊಲೆಯಾರ್, ಪ್ರಶಸ್ತಿ ಪ್ರದಾನ: ಸಹಾಯಕ ಪೊಲೀಸ್ ಆಯುಕ್ತ ಹೆಚ್.ಕೆ. ಮಹಾನಂದ, ಮುಳ್ಳೂರು ಮತ್ತು ಕೋಟಿ ಕುರಿತು: ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ, ಪ್ರಶಸ್ತಿ ಪುರಸ್ಕೃತರ ಕುರಿತು: ಪ್ರಾಧ್ಯಾಪಕರಾದ ಡಾ.ತ್ರಿವೇಣಿ, ಪ್ರಾಸ್ತಾವಿಕ ನುಡಿ: ರಂಗವಾಹಿನಿ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಮುಖ್ಯ ಅತಿಥಿಗಳು: ಪತ್ರಕರ್ತ ರವಿಕೋಟಿ, ರಂಗಕರ್ಮಿ ಕೆ.ಆರ್.ಗೋಪಾಲಕೃಷ್ಣ, ಎಸ್.ನಂಜುಂಡಯ್ಯ, ಸ್ಥಳ: ಕಿರುರಂಗ ಮಂದಿರ, ಬೆಳಗ್ಗೆ 10.30ಕ್ಕೆ.

■ **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್:** ಪ್ರೊ.ಕೆ.ರಾಮದಾಸ್ ನೆನಪಿನಲಿ... ಸಂವಾದ, ಪುಸ್ತಕ ಬಿಡುಗಡೆ, ಲೇಖಿನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಪುಸ್ತಕ ಬಿಡುಗಡೆ : ಚಿಂತಕ ಪ್ರೊ.ಚ.ಸರ್ವಮಂಗಳ, ಪ್ರಶಸ್ತಿ ಪ್ರದಾನ: ಚಿಂತಕ ಡಾ.ರಾಜಪ್ಪ ದಳವಾಯಿ, ಮುಖ್ಯ ಅತಿಥಿಗಳು: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಕಸ್ತೂರಿ ಮಾತ್ರೆ ವಾರಕ್ಕೊಂದು–ನಾ.ಕಸ್ತೂರಿಯವರ ಹಾಸ್ಯ ಬರಹಗಳ ಬಾನುಲಿ ಲಾಸ್ಯ, ರಚನೆ: ಬಿ.ವಿ.ರಾಜಾರಾಂ, ಪ್ರಸ್ತುತಿ: ಉಮೇಶ್ ಎಸ್.ಎಸ್., 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತಕುಮಾರ್, 8.35 ಘನತೆವೆತ್ತ ಉಪರಾಷ್ಟ್ರಪತಿಗಳಾದ ಶ್ರೀ.ಸಿ.ಪಿ.ರಾಧಾಕೃಷ್ಣನ್ ನವರು ಬೆಂಗಳೂರಿನಲ್ಲಿ ಭಾಗವಹಿಸಲಿರುವ ನಾಡಪ್ರಭು ಶ್ರೀ ಕೆಂಪೇಗೌಡರ 517ನೇ ಜನ್ಮ ವರ್ಷಾಚರಣೆ ಸಮಾರಂಭದ ಬಾನುಲಿ ವರದಿ, 8.50 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ವಿಟಿಲಿಗೋ ಅಂದರೆ ತೊನ್ನು–ಕಾರಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಚರ್ಮ ವೈದ್ಯರಾದ ಡಾ.ಸಂದೀಪ್.ಎಂ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಡಾ.ಕುಲದೀಪ್.ಎನ್, 10.00 ಕೇಳಿಗಿಳಿಗಳೇ–ಮೈಸೂರಿನ ವಿಜಯನಗರದ ಸದ್ವಿದ್ಯಾ ಪ್ರೀ ಪ್ರೈಮರಿ ಶಾಲೆಯ ಪುಟ್ಟಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ– 'ಚಿಣ್ಣರ ಚಿಲಿಪಿಲಿ' ಶಿಶುಗೀತೆಗಳ ಕಾರ್ಯಕ್ರಮ, ಪ್ರಸ್ತುತಿ–ಬಿ.ಜಿ.ಕವಿತಾ, 10.55 MANN KI BAAT – ಭಾರತದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು,

ಮಧ್ಯಾಹ್ನ : 12.05 ವನಿತಾ ವಿಹಾರ–ಮಹಿಳಾ ಸಬಲೀಕರಣದ ಧ್ವನಿ: ಡಾ. ಮನಸಾ ನಾಗಭೂಷಣಂ, 12.35 ಭಕ್ತಿಗೀತೆಗಳು : ಬಿ.ಎನ್.ಮಂಜುಳಾ, 12.45 ಜನಪದ ಸಂಗೀತ –ನಾಗಮಂಗಲ ತಾಲೂಕು, ಎಲೆಕೊಪ್ಪದ ರುಕ್ಮಿಣಿ ಹಾಗೂ ಸಂಗಡಿಗರಿಂದ ಸೋಬಾನೆ ಪದ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನ ಮಂತ್ರಿ ಸ್ವನಿಧಿ ಯೋಜನೆ ಕುರಿತು ಮಾತನಾಡುತ್ತಾರೆ ನಿವೃತ ಅಧಿಕಾರಿ ಮಹಾಬಲೇಶ್ವರ ಶಾಸ್ತ್ರೀ, 1.20 ಭಾವಗೀತೆಗಳು– ಆರ್.ವಿ.ಅನುಪಮಾ, 1.30 ಮತ್ತು ಸಂಜೆ 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಖ್ಯಾತನಟ ಮಂಡ್ಯ ರಮೇಶ್ ಅವರೊಂದಿಗಿನ ಸಂದರ್ಶನದ ಮರುಪ್ರಸಾರ, ಪ್ರಸ್ತುತಿ–ಜಿ.ಶಾಂತಕುಮಾರ್ ಹಾಗೂ ಶ್ರೀಮಾನ್.ಎಸ್, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರ ಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ –ಸಂದೀಪ್ ನಾರಾಯಣ್ ಅವರ ಹಾಡುಗಾರಿಕೆ, 4.45 ಚಿತ್ರಗೀತೆಗಳು, 5.30 ಘನತೆವೆತ್ತ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ನವರು ಬೆಂಗಳೂರಿನಲ್ಲಿ ಭಾಗವಹಿಸಲಿರುವ ವಿವಿಧ ಸಮಾರಂಭಗಳ ಬಾನುಲಿ ವರದಿ, 6.30 ವಿಜ್ಞಾನದ ಮುನ್ನಡೆ, 6.51 Running commentary of ICC Women's T20 World cup cricket match between India and Australia being played at Lord's Cricket Ground, London.

■ **ಆಯುರ್ವೇದ ಆರೋಗ್ಯ ಗ್ರಾಮ:** ಆಯುರ್ ಮಟಂ ಆಯುರ್ವೇದ ಆರೋಗ್ಯ ಗ್ರಾಮ ಉದ್ಘಾಟನಾ ಸಮಾರಂಭ, ಅತಿಥಿಗಳು, ಗಣ್ಯರ ಸಮ್ಮುಖದಲ್ಲಿ ಆರೋಗ್ಯ ಲೋಕಾರ್ಪಣಾ ಸಮಾರಂಭ, ಸ್ಥಳ: ಆಯುರ್ ಮಟಂ ಆವರಣ, ಬೆಳಗ್ಗೆ 11ರಿಂದ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ:** ಮೈಸೂರು ವಿಭಾಗೀಯ ಎಸ್‌ಐಆರ್ ಜಾಗೃತ ಸಮಾವೇಶ, ಉಪಸ್ಥಿತರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಶಾಸಕ ತನ್ವೀರ್ ಸೇಠ್, ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಪುಟ್ಟರಂಗಶೆಟ್ಟಿ, ಸ್ಥಳ: ಜೆ.ಕೆ. ಮೈದಾನ, ಬೆಳಗ್ಗೆ 11ಕ್ಕೆ.

■ **ಮೂಕ ಮಿತ್ರ** : ವಾರ್ಷಿಕೋತ್ಸವ, ಅಧ್ಯಕ್ಷತೆ: ಸಮಗ್ರ ಕರ್ನಾಟಕ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಎನ್. ವೇಣುಗೋಪಾಲ್, ಮುಖ್ಯ ಅತಿಥಿಗಳು: ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ಎಂ.ರಾಮಚಂದ್ರ, ಉದ್ದನೂರು ಮಹಾದೇವ ನಾಯಕ, ಡಾ.ಬಸವಣ್ಣ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ:** 73ನೇ ಅಂತರ ರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ಮುಖ್ಯ ಅತಿಥಿಗಳು: ಇಂಡಿಯನ್ ಆರ್ಮಿಯ ಕಿಶೋರ್ ಕದಂ, ಮೈಸೂರಿನ ವಿಸ್ಮಯ ಸ್ಕೂಲ್ ಆಫ್ ಲರ್ನಿಂಗ್ ಇದರ ಸ್ಥಾಪಕರು ಹಾಗೂ ನಿರ್ದೇಶಕರಾದ ವಿದುಷಿ ಶ್ರೀಮತಿ ಸ್ಮೃತಿ ರಮೇಶ್ ಕೌಶಿಕ್ ಮತ್ತು ಶಿಷ್ಯ ವೃಂದದವರಿಂದ ಭರತನಾಟ್ಯ, ಬೆಂಗಳೂರಿನ ದೈವಕಲಾ ಗೃಹಂ ಆರ್ಟ್ ಹೌಸ್ ನಿರ್ದೇಶಕರು ಮತ್ತು ಸ್ಥಾಪಕರಾದ ವಿದ್ವಾನ್ ಅಲೆಕ್ಸ್ ರಾಫಲ್ ಮತ್ತು ಅವರ ಶಿಷ್ಯರ ವೃಂದದವರಿಂದ ಭರತನಾಟ್ಯ ನೃತ್ಯ, ಬೆಂಗಳೂರಿನ ವೈಷ್ಣವಿ ನಾಟ್ಯಶಾಲಾ, ಸ್ಥಾಪಕರು ಹಾಗೂ ನಿರ್ದೇಶಕರಾದ ವಿದ್ವಾನ್ ಮಿಥುನ್ ಶ್ಯಾಮ್ ಅವರ ಹಿರಿಯ ವಿದ್ಯಾರ್ಥಿಗಳಾದ ಕುಮಾರಿ ಸಾಕ್ಷಿ ಅಶೋಕ್ ಮತ್ತು ವೃಂದದವರಿಂದ ಭರತನಾಟ್ಯ ನೃತ್ಯ, ಸ್ಥಳ: ಕಲೆಮನೆ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ:** ಚಾರುಮಂಜೂಷಾ–13 ಪೋಷಕರೊಂದಿಗೆ ಆಪ್ತಸಮಾಲೋಚನೆ, ಉಪಸ್ಥಿತರು: ನಿವೃತ್ತ ಮನಶಾಸ್ತ್ರ ಸಹ ಪ್ರಾಧ್ಯಾಪಕರಾದ ಡಾ.ವಿ.ಮಾಲತಿ, ಸ್ಥಳ: 208, ಎಸ್‌ಬಿಎಂ ಬಡಾವಣೆ, ಸಂಜೆ 4.30ಕ್ಕೆ.

■ **ಗಾನಭಾರತೀ:** ವಿದುಷಿ ಎಸ್.ಸುರಭಿ ಅವರಿಂದ ಗಾಯನ, ವಿದ್ವಾನ್ ಕಾರ್ತಿಕೇಯ–ವಯೋಲಿನ್, ವಿದ್ವಾನ್ ಬಿ.ಜೆ.ಶ್ರೀನಿವಾಸ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ, ಸಂಜೆ 6ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.

■ **ಕರ್ನಾಟಕ ಏಕೀಕರಣ ಟ್ರಸ್ಟ್** : ಕರ್ನಾಟಕ ಏಕೀಕರಣ ಹೋರಾಟಗಾರರಾದ ಡಾ. ಸಿದ್ಧನಾಥ ಬಳ್ಳಾರಿ ಸ್ಮರಣಾರ್ಥ ಡಾ. ಸುಜಾತ ಅಕ್ಕಿಯವರ ಮೂರು ಏಕವ್ಯಕ್ತಿ ಪ್ರದರ್ಶನ ನಾಟಕೋತ್ಸವ, ಡಾ.ಸುಮಾ ರವಿಕುಮಾರ್ ಅವರಿಂದ ಅಘಲೆ ಏಕವ್ಯಕ್ತಿ ನಾಟಕ ಪ್ರದರ್ಶನ, ನಿರ್ದೇಶನ: ಡಾ.ಸುಜಾತ ಅಕ್ಕಿ, ಸಹ ನಿರ್ದೇಶನ : ಅರಸೀಕೆರೆ ಯೋಗಾನಂದ ರಂಗಾಯಣ, ಸ್ಥಳ: ಕಿರುರಂಗ ಮಂದಿರ ಆವರಣ, ಸಂಜೆ 6ಕ್ಕೆ.

■ **ರಾಗ ವೈಭವ ಚಾರಿಟಬಲ್ ಟ್ರಸ್ಟ್** : ಡಾ.ಸಂಗೀತ ಕಟ್ಟಿ ಕುಲಕರ್ಣಿ ಅವರಿಂದ ಹಿಂದೂಸ್ಥಾನಿ ಗಾಯನ ಕಾರ್ಯಕ್ರಮ, ಪಂಡಿತ್ ರಾಜೇಂದ್ರ ನಾಕೋಡ್–ತಬಲ, ಪಂಡಿತ್ ಸತೀಶ್ ಕೊಲ್ಲಿ–ಹಾರ್ಮೋನಿಯಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ರಿಂದ.

■ **ರಂಗಾಯಣ:** ರಂಗಾಯಣದ ರೆಪರ್ಟರಿ ಕಲಾವಿದರಿಂದ ಅಗ್ನಿ ಮತ್ತು ಮಳೆ ನಾಟಕ ಪ್ರದರ್ಶನ, ನಿರ್ದೇಶನ: ಸಾಲಿಯಾನ ಉಮೇಶ್ ನಾರಾಯಣ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಜೂನ್ 28 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ- ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 73 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ಈಗ

ರಾಜ್ಯಕ್ಕೆ ಹೃದಯ!

● ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೃತಜ್ಞತೆ ● ರೈತರ ಸಂಕಷ್ಟಕ್ಕೆ ನೆರವಾಗುವಂತೆ ಮನವಿ



ಬೆಂಗಳೂರಿನ ನಿರ್ಮಾತೃ, ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಪ್ರಯುಕ್ತ ವಿಧಾನಸೌಧದ ಮುಂಭಾಗದಲ್ಲಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಶನಿವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುಷ್ಪ ನಮನ ಸಲ್ಲಿಸಿದರು.

ಬೆಂಗಳೂರು, ಜೂ.27(ಕೆಎಂಶಿ)– ನಾಡಪ್ರಭು ಕೆಂಪೇಗೌಡ ನಿರ್ಮಾಣ ಮಾಡಿದ ಬೆಂಗಳೂರು ಈಗ ರಾಜ್ಯಕ್ಕೆ ಹೃದಯವಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ವಿಧಾನಸೌಧದ ಆವರಣದಲ್ಲಿನ ಕೆಂಪೇ ಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರನ್ನು ಪುನಃ ಉದ್ಯಾನ ನಗರಿ ಸ್ಥಾನಕ್ಕೆ ಕೊಂಡೊಯ್ಯಲು 15 ಲಕ್ಷ ಸಸಿಗಳನ್ನು ನೆಡಲಾಗುತ್ತಿದೆ. ಬೆಂಗಳೂರು ಹಾಗೂ ಸುತ್ತಮುತ್ತಲಿನ ಅರಣ್ಯ ಇಲಾಖೆ ಜಾಗಗಳಲ್ಲಿ ಉದ್ಯಾನ ನಿರ್ಮಿಸಲು ತೀರ್ಮಾನಿಸಲಾಗಿದೆ. ಆ ಮೂಲಕ ಹಸಿರು ಉಳಿಸಿಕೊಳ್ಳಲಾಗುವುದು ಎಂದರು.

ಕೆಂಪೇಗೌಡರು ವಿಶ್ವಮಾನವ: ಬೆಂಗಳೂರು ಉತ್ತರ ತಾಲೂಕು ಒಕ್ಕಲಿಗರ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೆಂಪೇಗೌಡ ಜಯಂತಿ ಅಂಗವಾಗಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗನಾಗಿ, ಬೆಳೆದಿದ್ದು ವಿಶ್ವ ಮಾನವನಾಗಿ ಎಂಬುದನ್ನು ಮರೆಯ ಬಾರದು, ನಾವೆಲ್ಲರೂ ಇದೇ ಹಾದಿಯಲ್ಲಿ ನಡೆಯಬೇಕು ಎಂದರು.

ಬೆಂಗಳೂರಿನಲ್ಲಿ ವಿದ್ಯೆ, ಆರೋಗ್ಯ, ವೃತ್ತಿ ದೊರೆ ಯುತ್ತದೆ. ಇಲ್ಲಿ ಬದುಕು ಕಟ್ಟಿಕೊಳ್ಳಲು ಅನೇಕ ಮಂದಿ ನಗರಕ್ಕೆ ಬರುತ್ತಾರೆ. ರಾಜ್ಯ ರಾಜಧಾನಿ ದಿನದಿಂದ ದಿನಕ್ಕೆ ಬೆಳೆಯು ತ್ತಿದೆ. ವಿಸ್ತರಣೆ ಆಗುತ್ತಲೇ ಇದೆ. ಬದುಕು ಅರಸಿ ನಗರಕ್ಕೆ ಬರುವವರನ್ನು ನಾವು ತಡೆಯಲು ಸಾಧ್ಯವಿಲ್ಲ, ಎಲ್ಲ ಧರ್ಮ, ಜಾತಿಗಳ ಜನರಿಗೆ ಬದುಕು ಕಟ್ಟಿಕೊಳ್ಳಲು ಅವಕಾಶ ನೀಡಬೇಕಿದೆ. ದೇಹಕ್ಕೆ ಹೃದಯ ಎಷ್ಟು ಮುಖ್ಯವೋ, ಅದೇ ರೀತಿ ರಾಜ್ಯಕ್ಕೆ ಬೆಂಗಳೂರು ಮುಖ್ಯ ಎಂದರು.

> “ ಇಡೀ ವಿಶ್ವ ಬೆಂಗಳೂರನ್ನು ನೋಡುತ್ತಿದೆ. ಇದಕ್ಕೆ ಕಾರಣ ನಾಡಪ್ರಭು ಕೆಂಪೇಗೌಡರು. 500 ವರ್ಷಗಳ ಹಿಂದೆ ನಗರ ನಿರ್ಮಾಣ ಮಾಡಿದರು. ಇದನ್ನು ಬೆಂಗಳೂರು ನಿವಾಸಿಗಳು ಮರೆಯಬಾರದು. ನಗರ ನಿರ್ಮಾಣ ಸಮಯದಲ್ಲಿ ಇದು ಇಷ್ಟು ದೊಡ್ಡ ಮಟ್ಟಕ್ಕೆ ಬೆಳೆಯುತ್ತದೆ ಎಂಬುದಾಗಿ ಯಾರೂ ಊಹಿಸಿರಲಿಲ್ಲ. ಕೆಂಪೇಗೌಡರ ದೂರದೃಷ್ಟಿ ಮೆಚ್ಚಬೇಕು. ನಾವ್ಯಾರೂ ಬೆಂಗಳೂರು ಕಟ್ಟಿದವರಲ್ಲ. ಆದರೆ, ನಾವಿರುವ ನಗರವನ್ನು ಉಳಿಸಿ, ಬೆಳೆಸಬೇಕು. ಮನೆ-ಮಠ ಹುಷಾರು ಎಂಬುದಾಗಿ ಹಿರಿಯರು ಹೇಳುತ್ತಾರೆ. ಅದರಂತೆ, ನಾವು ನಮ್ಮ ಪರಂಪರೆ ಉಳಿಸಬೇಕು. ಕೆಂಪೇಗೌಡರು ಹಾಕಿಕೊಟ್ಟ ಅಡಿಪಾಯ. ಸಂಪ್ರದಾಯದಂತೆ ನಾವೆಲ್ಲರೂ ನಡೆಯುತ್ತಿದ್ದೇವೆ. ಅನೇಕ ವೃತ್ತಿ ಉಳಿಸಲು ಮಾರ್ಗದರ್ಶನ ನೀಡಿದ್ದರು. **–ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ**

ರೈತರ ರಕ್ಷಣೆ ಹೊಣೆ: ಕಳೆದ ಮೂರು ವರ್ಷಗಳಿಂದ ಉತ್ತಮ ಮಳೆಯಾಗಿತ್ತು. ಆದರೆ, ಈ ವರ್ಷ ದೇಶದಲ್ಲಿ ಬರಗಾಲ ಎದುರಾಗುವ ಸಾಧ್ಯತೆ ಇದ್ದು, ಎಲ್ಲರೂ ಸೇರಿ ರೈತರನ್ನು ಉಳಿಸಬೇಕಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಜಲಶಕ್ತಿ ಸಚಿವರ ನೇತೃತ್ವದಲ್ಲಿ ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಹಾಗೂ ನಾನು ಸಭೆ ಸೇರಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ನೆಲ, ಜಲಕ್ಕಾಗಿ ನಮ್ಮ ನಡುವೆಯೇ ಸಂಘರ್ಷ ಮಾಡಿಕೊಳ್ಳುವುದು ಸರಿಯಲ್ಲ. ನಾವೆಲ್ಲರೂ ಭಾರತೀಯರು, ಮಣ್ಣಿನ ಮಕ್ಕಳು. ಅನ್ನದಾತರ ಬರಗಾಲದಂತಹ ಸಂಕಷ್ಟದ ವೇಳೆ ಕಾಪಾಡಿಕೊಳ್ಳಬೇಕಿದೆ ಎಂದರು.

ಸರಗೂರು ಬಳಿಯ ಬಾಳೆ ತೋಟದಲ್ಲಿ ರೈತನ ಮೇಲೆರಗಿದ ಹುಲಿ



ಸರಗೂರು ತಾಲೂಕಿನ ನುಗು ವನ್ಯಜೀವಿ ವಲಯ ಅರಣ್ಯ ವ್ಯಾಪ್ತಿಯ ಬೆಣ್ಣೆಗೆರೆ ಗ್ರಾಮದ ಕಿರಣ್ ಎಂಬುವರ ಮೇಲೆ ಹುಲಿ ದಾಳಿ ನಡೆಸಿದೆ.

ಸರಗೂರು: ಬಾಳೆ ತೋಟದಲ್ಲಿ ಕೆಲಸ ಮಾಡುತ್ತಿದ್ದ ಯುವ ರೈತನ ಮೇಲೆ ಹುಲಿ ದಾಳಿ ನಡೆಸಿದ್ದು, ಅದೃಷ್ಟವಶಾತ್ ಆತ ತೀವ್ರ ಗಾಯಗಳೊಂದಿಗೆ ಪಾರಾಗಿದ್ದಾರೆ. ಈ ಘಟನೆ ತಾಲೂಕಿನ ಮುಳ್ಳೂರು ಗ್ರಾಪಂ ವ್ಯಾಪ್ತಿಯ ಬೆಣ್ಣೆಗೆರೆ ಗ್ರಾಮದಲ್ಲಿ ನಡೆದಿದೆ. ಇದರಿಂದ ಆತಂಕಗೊಂಡ ಗ್ರಾಮಸ್ಥರು ಹುಲಿ ಸೆರೆಗೆ ಆಗ್ರಹಿಸಿದರಲ್ಲದೆ ತಡವಾಗಿ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾಲೂಕಿನ ಬೆಣ್ಣೆಗೆರೆ ಗ್ರಾಮದ ಲೇ.ಮಾದೇಗೌಡರ ಪುತ್ರ ಕಿರಣ್ ಹುಲಿ ದಾಳಿಯಿಂದ ತೀವ್ರವಾಗಿ ಗಾಯಗೊಂಡವರಾಗಿದ್ದು, ಸದ್ಯ ಮೈಸೂರಿನ ಅಪೋಲೋ ▶ 10ನೇ ಪುಟಕ್ಕೆ

ವಿಕ್ರಮ್ ಮುತ್ತಣ್ಣ ಅವರಿಗೆ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ



ಬೆಂಗಳೂರು ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ವತಿಯಿಂದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಕೆಂಪೇಗೌಡರ 517ನೇ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ. ವಿಕ್ರಮ್ ಮುತ್ತಣ್ಣ ಅವರಿಗೆ 'ನಾಡಪ್ರಭು ಕೆಂಪೇಗೌಡ ರಾಜ್ಯ ಪ್ರಶಸ್ತಿ'ಯನ್ನು ಭಾರತದ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಪ್ರದಾನ ಮಾಡಿದರು. ಈ ವೇಳೆ ಆದಿಚುಂಚನಗಿರಿ ಪೀಠಾಧಿಪತಿಗಳಾದ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಚಿತ್ರದುರ್ಗದ ಶ್ರೀ ಮಾದಾರ ಚೆನ್ನಯ್ಯ ಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಉಪ ಮುಖ್ಯಮಂತ್ರಿ ಹಾಗೂ ಹಾಲಿ ಶಾಸಕರಾದ ಡಾ. ಅಶ್ವತ್ಥ್ ನಾರಾಯಣ್, ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಉಪಸ್ಥಿತರಿದ್ದಾರೆ. ಇದೇ ವೇಳೆ ವಿವಿಧ ಕ್ಷೇತ್ರದ ಇನ್ನೂ 14 ಮಂದಿ ಮಹನೀಯರಿಗೆ ನಾಡಪ್ರಭು ಕೆಂಪೇಗೌಡ ರಾಜ್ಯ ಪುರಸ್ಕಾರ ನೀಡಿ, ಗೌರವಿಸಲಾಯಿತು.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಬಳಿಕ ಮೈಸೂರಿಗೆ ಮೊದಲ ಭೇಟಿ ನೀಡಿದ

ಸಿದ್ದರಾಮಯ್ಯನವರಿಗೆ ಅದ್ಧೂರಿ ಸ್ವಾಗತ

■ ಹೈವೇ ವೃತ್ತದಲ್ಲಿ ತೆರೆದ ವಾಹನದಲ್ಲಿ ಮೆರವಣಿಗೆ ■ ಬೃಹತ್ ಸೇಬಿನ ಹಾರದೊಂದಿಗೆ ಬೆಂಬಲಿಗರ ಸಂಭ್ರಮ



ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಮೊಟ್ಟ ಮೊದಲ ಬಾರಿಗೆ ತಮ್ಮ ತವರು ಮೈಸೂರು ಜಿಲ್ಲೆಗೆ ಆಗಮಿಸಿದ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ಧೂರಿಯಾಗಿ ಸ್ವಾಗತಿಸಿದರು.

ಮೈಸೂರು,ಜೂ.27(ಪಿಎಂ)– ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಮೊಟ್ಟ ಮೊದಲ ಬಾರಿಗೆ ತಮ್ಮ ತವರು ಮೈಸೂರು ಜಿಲ್ಲೆಗೆ ಆಗಮಿಸಿದ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ಧೂರಿಯಾಗಿ ಸ್ವಾಗತಿಸಿದರು.

ಶನಿವಾರ ಸಂಜೆ ಹೈವೇ ವೃತ್ತದಲ್ಲಿ ಆಗಮಿಸಿದ ಸಿದ್ದರಾಮಯ್ಯ ಅವರನ್ನು ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಅದ್ಧೂರಿಯಾಗಿ ಸ್ವಾಗತಿಸಲಾಯಿತು.

ಸ್ವಾಗತ ಸಮಾರಂಭದ ಹಿನ್ನೆಲೆಯಲ್ಲಿ ಹೈವೆ ವೃತ್ತದ ಎಲಿಫೆಂಟ್ ಫೌಂಟೇನ್ ಸುತ್ತಲು ಕಾಂಗ್ರೆಸ್ ಧ್ವಜಗಳನ್ನು ಅಳವಡಿಸಲಾಗಿತ್ತು. ಅಲ್ಲದೆ, ನೆಲ್ಸನ್ ಮಂಡೇಲಾ ರಸ್ತೆ ಹಾಗೂ ಸಯ್ಯಾಜಿ ರಾವ್ ರಸ್ತೆಯ ಸುಮಾರು 500 ಮೀಟರ್ ವರೆಗೆ ಕಾಂಗ್ರೆಸ್ ಪಕ್ಷದ ಬಂಟಿಂಗ್ಸ್‌ಗಳನ್ನು ರಸ್ತೆಬದಿಯಲ್ಲಿ ಅಳವಡಿಸಲಾಗಿತ್ತು. ಜೊತೆಗೆ ಹಲವೆಡೆ ಸಿದ್ದರಾಮಯ್ಯ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಮೊದಲಾದ ಕಾಂಗ್ರೆಸ್ ನಾಯಕರ ಬೃಹತ್ ಬ್ಯಾನರ್‌ಗಳು ರಾರಾಜಿಸುತ್ತಿದ್ದವು.

ಕಾಂಗ್ರೆಸ್‌ನ ಜನಪ್ರತಿನಿಧಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಮಾತ್ರವಲ್ಲದೆ, ಸಿದ್ದರಾಮಯ್ಯ ಅಭಿಮಾನಿಗಳು ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಹಿನ್ನೆಲೆಯಲ್ಲಿ ಭಾರೀ ಪೊಲೀಸ್ ಭದ್ರತೆ ಕೈಗೊಳ್ಳಲಾಗಿತ್ತು. ಸಿದ್ದರಾಮಯ್ಯನವರ ಆಗಮನದ ವೇಳೆಗೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿದ್ದು, ಜನದಟ್ಟಣೆ ಹಾಗೂ ವಾಹನ ಸಂಚಾರವನ್ನು ನಿಯಂತ್ರಿಸಿದರು.

ಸಂಜೆ 4 ಗಂಟೆಯಿಂದಲೇ ಹೈವೇ ವೃತ್ತದಲ್ಲಿ ಭಾರೀ ಜನ ಸೇರಿದ್ದರಿಂದ ವಾಹನ ಸಂಚಾರಕ್ಕೂ ತೊಡಕಾಗಿತ್ತು. ಅಲ್ಲದೆ, ಸಂಜೆ ಸುಮಾರು 6.15ಕ್ಕೆ ಸಿದ್ದರಾಮಯ್ಯನವರು ಆಗಮಿಸಿದರು. ಅವರು ಇಲ್ಲಿಂದ ನಿರ್ಗಮಿಸುವವರೆಗೂ ಅರ್ಧ ಗಂಟೆಗೂ ಹೆಚ್ಚು ಕಾಲ ಇಲ್ಲಿ ಸಾರ್ವಜನಿಕ ವಾಹನ ಸಂಚಾರ ಸಾಧ್ಯವಾಗಲಿಲ್ಲ.

ಹೈವೇ ವೃತ್ತದ ನೆಲ್ಸನ್ ಮಂಡೇಲಾ ರಸ್ತೆಗೆ ಆಗಮಿಸಿದ ಸಿದ್ದರಾಮಯ್ಯನವರು, ಕಾರಿನ ಬಾಗಿಲು ತೆರೆದು ನಿಂತು ಕೈ ಎತ್ತಿ ಭಾರೀ ಸಂಖ್ಯೆಯಲ್ಲಿದ್ದ ಮುಖಂಡರು, ಕಾರ್ಯಕರ್ತರತ್ತ ಕೈ ಬೀಸಿ ನಗೆ ಬೀರಿದರು. ಇದೇ ವೇಳೆ ಸಿದ್ದರಾಮಯ್ಯನವರ ಬಳಿ ಹೋಗಲು ಭಾರೀ ಸಂಖ್ಯೆಯಲ್ಲಿ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಮುಂದಾದರು. ▶ 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ರೀ ನಿಮಗೆ ಮರ್ಯಾದೆ ಇಲ್ವೇ ಇರೋ ಕಡೆ ಯಾವತ್ತೂ ಹೋಗಬೇಡಿ!

ಗಂಡ : ಅಂದ್ರೆ ನಾನು ಮನೆಗೆ ಬರೋದು ಬೇಡ ಅಂತಾನಾ?

ಮೈಸೂರು ಮಿತ್ರ

ಭಾನುವಾರ, ಜೂನ್ 28, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಹುಟ್ಟು ನಮ್ಮದಲ್ಲ, ಸಾವು ನಮ್ಮದಲ್ಲ, ಭೂಮಿ ನಮ್ಮದಲ್ಲ, ಈ ಪ್ರಕೃತಿ ನಮ್ಮದಲ್ಲ, ಆದರೆ ನಮ್ಮದು ಅಂತ ನಮ್ಮ ಜೊತೆ ಉಳಿಯೋದು ಕೇವಲ ನಂಬಿಕೆ–ಸ್ನೇಹ ಮಾತ್ರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಮಂತ್ರಕ್ಕಿಂತ ಉಗುಳೇ ಹೆಚ್ಚು

ನಿಮ್ಮ ಪತ್ರಗಳು

ಬೇಲಿಯೇ ಎದ್ದು ಹೊಲ ಮೇಯ್ದಂತೆ

ಮಾನ್ಯರೆ,

ಮೈಸೂರು ನಗರದ ದಟ್ಟಗಳ್ಳಿಯ "ಮಾರಾ ರೆಸ್ಟೋಬಾರ್" ನಲ್ಲಿ ಇತ್ತೀಚೆಗೆ ಅಗ್ನಿ ಅವಘಡ ಸಂಭವಿಸಿ ಇಬ್ಬರು ಸ್ಥಳದಲ್ಲೇ ಸಜೀವ ದಹನವಾದ ಹಿನ್ನೆಲೆಯಲ್ಲಿ ಈಗ ನಗರ ಪಾಲಿಕೆಯ ಅಧಿಕಾರಿಗಳು ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳು ಮೈಸೂರಿನ ಎಲ್ಲ ರೆಸ್ಟೋರೆಂಟ್ ಮತ್ತು ಬಾರ್‌ಗಳ ಲೈಸೆನ್ಸ್ ಹಾಗೂ ಸುರಕ್ಷತಾ ಮುನ್ನೆಚ್ಚರಿಕೆ ಮತ್ತು ಸ್ವಚ್ಛತೆಯನ್ನು ಕಾಪಾಡುವ ನಿಟ್ಟಿನಲ್ಲಿ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ಈ ಕೆಲಸವನ್ನು ಮೈಸೂರಿನ ನಗರಪಾಲಿಕೆ ಅಧಿಕಾರಿಗಳು ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳು ಮೊದಲೇ ಮಾಡಬೇಕಿತ್ತು. ಅಚ್ಚರಿ ಸಂಗತಿ ಎಂದರೆ, ಕಳೆದ ಹಲವಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದ್ದ ಮಾರಾ ರೆಸ್ಟೋಬಾರ್ ಪಾಲಿಕೆ ಮತ್ತು ಅಬಕಾರಿ ಇಲಾಖೆಯಿಂದ ಪರವಾನಗಿ ಇಲ್ಲದೆಯೇ ನಡೆಯುತ್ತಿದ್ದುದು ಈಗ ಇದು ಬೆಳಕಿಗೆ ಬಂದಿದೆ. ಈ ಕಾರಣದಿಂದಲೇ ಇಬ್ಬರು ನಗರ ಪಾಲಿಕೆಯ ಅಧಿಕಾರಿಗಳು ಮತ್ತು ನಾಲ್ವರು ಅಧಿಕಾರಿಗಳನ್ನು ಸರ್ಕಾರ ಅಮಾನತುಗೊಳಿಸಿದೆ. ಆತಂಕಕಾರಿ ಸಂಗತಿಯೆಂದರೆ ಮೈಸೂರಿನಲ್ಲಿರುವ ಹಲವಾರು ಬಾರ್ ಮತ್ತು ರೆಸ್ಟೋರೆಂಟ್‌ಗಳು ಅಧಿಕೃತ ಲೈಸೆನ್ಸ್ ಇಲ್ಲದೇ ನಡೆಯುತ್ತಿವೆ ಎಂದು ಹೇಳಲಾಗುತ್ತಿದೆ. ಕೆಲವು ಬಾರ್ ಮತ್ತು ರೆಸ್ಟೋರೆಂಟ್‌ಗಳು ನಿವೃತ್ತ ಪೊಲೀಸ್ ಅಧಿಕಾರಿಗಳ ಪಾಲುದಾರಿಕೆಯಲ್ಲಿ ನಡೆಯುತ್ತಿವೆ ಎಂದು ಹೇಳಲಾಗುತ್ತಿದೆ. ಇದು ಹೇಗಿದೆ ಎಂದರೆ "ಬೇಲಿಯೇ ಎದ್ದು ಹೊಲ ಮೇಯ್ದಂತೆ". – ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಯಕ್ಷಪ್ರಶ್ನೆ

ಮಾನ್ಯರೆ,

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ವೈ.ಮಂಜುನಾಥ್ ಮತ್ತು ಅವರ ಆಪ್ತರಿಗೆ ಸೇರಿದ ಹಲವು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಧಾಳಿ ನಡೆಸಿದ್ದಾರೆ.

ಈ ಧಾಳಿ ವರದಿಯಾಗುತ್ತಿದ್ದಂತೆಯೇ ನಮ್ಮ ರಾಜ್ಯದ ಗೃಹ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಪ್ರತಿಕ್ರಿಯೆ ನೀಡುತ್ತಾ, ಕೇಂದ್ರ ತನಿಖಾ ಸಂಸ್ಥೆಗಳಾದ ಇ.ಡಿ, ಐ.ಟಿ.ಹಾಗೂ ಸಿಬಿಐ ಕೇಂದ್ರ ಸರಕಾರದ ಕೈಗೊಂಬೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ ಎನ್ನುವ ಮೂಲಕ ಆರೋಪಿಗಳ ಪರವಾಗಿ ಬ್ಯಾಟ್ ಬೀಸಿದ್ದಾರೆ. ರಾಜ್ಯದ ಪರವಾಗಿ ಕೆಲಸ ಮಾಡಬೇಕಾಗಿರುವ ನಮ್ಮ ಗೃಹಮಂತ್ರಿಗಳು ಆರೋಪಿಗಳ ಪರವಾಗಿ ಬ್ಯಾಟಿಂಗ್ ಮಾಡಬಹುದೇ? ಇದು ಯಕ್ಷಪ್ರಶ್ನೆ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಕಪ್ಪು ಪ್ಲಾಸ್ಟಿಕ್ ಅನ್ನು ನಿಷೇಧಿಸಿ

ಮಾನ್ಯರೆ,

ಮೈಸೂರು ನಗರ ಸೇರಿದಂತೆ ಹಲವು ಕಡೆ ಶೇಕಡಾ 90 ಕ್ಕಿಂತ ಹೆಚ್ಚು ಆಹಾರ ಸರಬರಾಜಿಗೆ ಕಪ್ಪು ಪ್ಲಾಸ್ಟಿಕ್ ಡಬ್ಬಿ ಮತ್ತು ಕವರ್‌ಗಳನ್ನು ಬಳಸಲಾಗುತ್ತಿದೆ. ಆದರೆ ಇವುಗಳಲ್ಲಿ ಇ–ತ್ಯಾಜ್ಯದ ವಿಷಕಾರಿ ರಾಸಾಯನಿಕಗಳು ಮತ್ತು 'ಫ್ಲೇಮ್ ರಿಟಾರ್ಡೆಂಟ್ಸ್' ಇರುವುದು ಸಂಶೋಧನೆ ಗಳಿಂದ ಸಾಬೀತಾಗಿದೆ. ಬಿಸಿ ಆಹಾರವನ್ನು ಇವುಗಳಲ್ಲಿ ಪ್ಯಾಕ್ ಮಾಡಿದಾಗ ಈ ಕ್ಯಾನ್ಸರ್ ಕಾರಕ ರಾಸಾಯನಿಕಗಳು ಆಹಾರದೊಂದಿಗೆ ದೇಹ ಸೇರಿ ಹಾರ್ಮೋನ್ ಏರುಪೇರು ಮತ್ತು ನರ ದೌರ್ಬಲ್ಯಕ್ಕೆ ಕಾರಣವಾಗುತ್ತವೆ. ಪರಿಸರ ದೃಷ್ಟಿಯಿಂದಲೂ ಇವು ಅತ್ಯಂತ ಅಪಾಯಕಾರಿ. ಇವುಗಳ ಕಪ್ಪು ಬಣ್ಣವು ಇನ್‌ಫ್ರಾರೆಡ್ ಕಿರಣಗಳನ್ನು ಹೀರುವುದರಿಂದ ಶೇಕಡಾ 90 ರಷ್ಟು ಕಪ್ಪು ಪ್ಲಾಸ್ಟಿಕ್ ಮರುಬಳಕೆಯಾಗದೆ ಕಸದ ರಾಶಿಯನ್ನು ಸೇರುತ್ತಿದೆ. ಇದಕ್ಕೆ ಪರಿಹಾರವಾಗಿ ಸರ್ಕಾರವು ಆಹಾರ ಪ್ಯಾಕಿಂಗ್‌ನಲ್ಲಿ ಕಪ್ಪು ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣ ವಾಗಿ ನಿಷೇಧಿಸಬೇಕು. ಹೋಟೆಲ್‌ಗಳು ಮತ್ತು ಗ್ರಾಹಕರು ಪರಿಸರಸ್ನೇಹಿ ಸ್ಟೀಲ್, ಗಾಜು ಅಥವಾ ಎಲೆಗಳ ಪರ್ಯಾಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ. –ಡಾ.ಎಚ್.ಕೆ. ವಿಜಯಕುಮಾರ್, ಮೈಸೂರು.

ಬೀದಿ ನಾಯಿ ಕಾಟಕ್ಕೆ ಕೊನೆ ಎಂದು?

ಮಾನ್ಯರೆ,

ಮೈಸೂರಿನ ವಿಜಯನಗರ ರೈಲ್ವೆ ಬಡಾವಣೆಯ ಹತ್ತನೇ ಕ್ರಾಸಿನಲ್ಲಿ ಕೆಲ ತಿಂಗಳಿನಿಂದೀಚೆಗೆ ಬೀದಿ ನಾಯಿಗಳ ಉಪಟಳ ಮಿತಿ ಮೀರಿದೆ. ಸುಮಾರು ಮೂವತ್ತರಿಂದ ನಲವತ್ತು ನಾಯಿಗಳು ಹಗಲು ರಾತ್ರಿ ಎನ್ನದೇ ದಾರಿಹೋಕರಿಗೆ ಭೀತಿ ಉಂಟು ಮಾಡುತ್ತಾ ರಾತ್ರಿಯ ನೀರವದಲ್ಲಿ ಬೊಗಳುತ್ತಾ ಬಡಾವಣೆಯ ಶಾಂತತೆಯನ್ನು ಹಾಳುಗೆಡವುತ್ತಿವೆ. ಇದರಿಂದ ಬಡಾವಣೆಯ ನಿವಾಸಿಗಳು ಮತ್ತು ಪುಟ್ಟ ಮಕ್ಕಳು ರಸ್ತೆಯಲ್ಲಿ ನಡೆದು ಹೋಗಲು ಭಯಪಡಬೇಕಾದ ಪರಿಸ್ಥಿತಿ ಉಂಟಾಗಿದೆ. ದಯಮಾಡಿ ಪಾಲಿಕೆಯವರು ತಕ್ಷಣವೇ ನಾಯಿಗಳನ್ನು ಹಿಡಿದು ಅವುಗಳ ಉಪಟಳಕ್ಕೆ ಕಡಿವಾಣ ಹಾಕಬೇಕೆಂದು ಮನವಿ.

–ವಿಜಯ್ ಹೆಮ್ಮಿಗೆ, ಮೈಸೂರು

ಅರ್ಜಿ ಶುಲ್ಕ ಹೆಚ್ಚಳ

ಮಾನ್ಯರೆ,

ಅಂತೂ ಇಂತೂ ಹಲವಾರು ವರ್ಷಗಳಿಂದ ಪೊಲೀಸ್ ಪೇದೆ ಹುದ್ದೆಗೆ ರಣಹದ್ದಿನಂತೆ ಕಾದು ಕುಳಿತಿದ್ದ ಪರೀಕ್ಷಾರ್ಥಿಗಳಿಗೆ ರಾಜ್ಯ ಸರ್ಕಾರವು ನೇಮಕಾತಿಯ ಅಧಿಸೂಚನೆ ಹೊರಡಿಸುವುದರ ಜೊತೆಗೆ ವಯೋಮಿತಿ ಸಡಿಲಿಸಿ ಎಲ್ಲರಲ್ಲೂ ಮಂದಹಾಸ ಮೂಡಿಸಿತು. ಆದರೆ ಅರ್ಜಿ ಶುಲ್ಕವನ್ನು ಪ್ರಸ್ತುತ ಸಾಮಾನ್ಯ ವರ್ಗ ಮತ್ತು ಪ್ರವರ್ಗ 2ಎ, 2ಬಿ, 3ಎ ಹಾಗೂ 3ಬಿ ವರ್ಗದವರಿಗೆ 750/– ಎಸ್ಸಿ/ಎಸ್ಟಿ, ಪ್ರವರ್ಗ–1 ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ 500/–ಗೆ ಹೆಚ್ಚಿಸಿರುವುದು ಸರಿಯಲ್ಲ. ಹಾಗೆಯೇ ಸದರಿ ಪರೀಕ್ಷೆಯನ್ನು ತೆಗೆದುಕೊಳ್ಳುವ ಅನೇಕ ಅಭ್ಯರ್ಥಿಗಳು ದುಡಿಯುವ ವರ್ಗದವರಾಗಿದ್ದು ತಮ್ಮ ದೈನಂದಿನ ಕರ್ತವ್ಯವನ್ನು ನಿರ್ವಹಿಸುವುದರ ಜೊತೆಗೆ ಪರೀಕ್ಷೆಗೆ ತಯಾರಿ ನಡೆಸುತ್ತಿರುತ್ತಾರೆ. ಹಾಗಾಗಿ ರಾಜ್ಯ ಸರ್ಕಾರದ ಗೃಹ ಸಚಿವಾಲಯವು ಇದನ್ನು ಸೂಕ್ಷ್ಮವಾಗಿ ಗಮನಿಸಿ ಪ್ರಸ್ತುತ ಪರೀಕ್ಷೆಗೆ ನಿಗದಿಪಡಿಸಿರುವ ಅರ್ಜಿ ಶುಲ್ಕವನ್ನು ಕಡಿಮೆ ಮಾಡಬೇಕೆಂದು ಮನವಿ.

–ಪ್ರದೀಪ್, ಯರಗನಹಳ್ಳಿ ಮೈಸೂರು.




ನಮ್ಮೂರ ಆದರ್ಶಪ್ರಾಯರು...

ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತವರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

10. ರಾಜಸೇವಾಸಕ್ತ ವೈ.ಕೆ.ರಾಮಚಂದ್ರರಾವ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಸಂಪರ್ಕ ವ್ಯವಸ್ಥೆಗಳಲ್ಲಿ ಒಂದಾದ ರೈಲು ಮಾರ್ಗಗಳ ನಿರ್ಮಾಣದ ಅವಶ್ಯಕತೆಯನ್ನು ಮನಗಂಡ ಮೈಸೂರಿನ ಮಹಾರಾಜರು ಅವುಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡರು. ಪ್ರಾರಂಭದಲ್ಲಿ ಇಂಗ್ಲೆಂಡಿನ ಕಂಪನಿಗಳು ಇವುಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ಇಂತಿಷ್ಟು ಲಾಭದ ಭರವಸೆಯ ಆಧಾರದ ಮೇಲೆ ಪ್ರಾರಂಭಿಸಿದವು. 1853ರಲ್ಲಿ ಪ್ರಾರಂಭವಾಗಿದ್ದ ಮದ್ರಾಸ್ ರೈಲ್ವೆ ಕಂಪನಿ, 1882ರ ದಕ್ಷಿಣ ಮರಾಠ ರೈಲ್ವೆ ಕಂಪನಿ ಮತ್ತು 1891ರಲ್ಲಿ ರಚಿತವಾದ ದಕ್ಷಿಣ ಭಾರತೀಯ ರೈಲ್ವೆ ಮೈಸೂರು ರಾಜ್ಯದಲ್ಲಿ ರೈಲು ಮಾರ್ಗಗಳ ನಿರ್ಮಾಣವನ್ನು ರಾಜ್ಯದ ಪರವಾಗಿ ಕೈಗೊಂಡ ಕಂಪನಿಗಳಾಗಿದ್ದವು.

ಈ ದಿಕ್ಕಿನಲ್ಲಿ ಬೆಂಗಳೂರು ಮತ್ತು ಮೈಸೂರು ನಡುವೆ ರೈಲು ಮಾರ್ಗಕ್ಕೆ ಸರ್ವೆ ಕಾರ್ಯವನ್ನು 1871ರಲ್ಲಿಯೇ ಸಿದ್ಧಪಡಿಸಲಾಯಿತಾದರೂ ಬ್ರಿಟಿಷ್ ಇಂಡಿಯಾ ಸರ್ಕಾರ ಆರ್ಥಿಕ ಪರಿಸ್ಥಿತಿಯನ್ನು ಮುಂದೊಡ್ಡಿ ಅದಕ್ಕೆ ಅನುಮತಿ ಕೊಡದೆ ಹೋಯಿತು. 1876–77ರಲ್ಲಿ ರಾಜ್ಯದಲ್ಲಿ ಕ್ಷಾಮ ಕಾಣಿಸಿಕೊಂಡು, 1878ರ ಮೊದಲ ತಿಂಗಳುಗಳಲ್ಲಿಯೂ ಅದು ಮುಂದುವರಿದಿತ್ತು. ಆ ಕ್ಷಾಮದ ಪರಿಹಾರಕಾರ್ಯವೊಂದನ್ನಾಗಿ ಆ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಮೂಲ ಕೆಲಸಗಳು ಪ್ರಾರಂಭವಾಗಿತ್ತಾದರೂ ಕ್ಷಾಮ ಪರಿಹಾರ ಕಾರ್ಯಗಳನ್ನು 1878ರ ಅಕ್ಟೋಬರ್ ತಿಂಗಳಲ್ಲಿ ನಿಲ್ಲಿಸಿದಾಗ ಅದೂ ನಿಂತುಹೋಯಿತು. ನಂತರ ಈ ಯೋಜನೆ ಕಾರ್ಯಗಳನ್ನು ಮತ್ತೆ ಕೈಗೆ ತೆಗೆದುಕೊಂಡು ಮೊದಲಿಗೆ ಬೆಂಗಳೂರು–ಚನ್ನಪಟ್ಟಣ ಭಾಗದ ಕಾರ್ಯವನ್ನು 1879ರ ಫೆಬ್ರವರಿ ತಿಂಗಳಲ್ಲಿ ಪ್ರಾರಂಭಿಸಲಾಯಿತು. 1882ರಲ್ಲಿ ಈ ಕಾರ್ಯ ಪೂರ್ತಿಯಾಗಿ ಅದೇ ಫೆಬ್ರವರಿ ತಿಂಗಳಲ್ಲಿ ಈ ಒಂದು ಭಾಗವನ್ನು ಸಂಚಾರಕ್ಕೆ ತೆರೆಯಲಾಯಿತು.

ರಾಜ್ಯದ ಮೊದಲನೆಯದಾದ ಬೆಂಗಳೂರು–ಮೈಸೂರು ರೈಲು ಮಾರ್ಗದ ನಿರ್ಮಾಣ ಕಾರ್ಯ ಜರುಗಿದ್ದು ಕ್ಷಾಮದ ಸುಳಿಗೆ ಸಿಕ್ಕಿದ್ದ ಜನರಿಗೆ ಬದುಕು ಸಾಗಿಸಲು ನೆರವಾಯಿತು. ಹೆಚ್ಚಿನ ಉದ್ಯೋಗಗಳೂ ದೊರೆಯುವಂತಾಗಿ ರಾಜ್ಯ ಅಭಿವೃದ್ಧಿಯ ಹಾದಿ ಹಿಡಿಯುವಂತಾಯಿತು. ಈ ಯೋಜನೆಯ ನಂತರ ಮೈಸೂರು ಭಾಗದಲ್ಲಿ ಮೈಸೂರಿನಿಂದ ನಂಜನಗೂಡಿಗೆ ರೈಲು ಸಂಪರ್ಕ ರೂಪಿಸುವ ಕಾರ್ಯವನ್ನು ಪೂರ್ಣಗೊಳಿಸಿ 1891ರಲ್ಲಿ ಆ ಮಾರ್ಗವನ್ನು ಸಂಚಾರಕ್ಕೆ ತೆರೆಯಲಾಯಿತು.

ಇವುಗಳಲ್ಲದೆ ರಾಜ್ಯದ ಇತರ ಕಡೆಗಳಿಗೆ ಸಂಪರ್ಕ ಕಲ್ಪಿಸುವ ರೈಲು ಯೋಜನೆಗಳೂ ಪ್ರಾರಂಭವಾಗಿದ್ದರೂ ಅವು ಮಧ್ಯೆ ನಿಂತುಹೋಗಿದ್ದವು. ಸರ್ ಎಂ. ವಿಶ್ವೇಶ್ವರಯ್ಯನವರು 1912ರಲ್ಲಿ ದಿವಾನರಾದ ಮೇಲೆ ಅವುಗಳ ನಿರ್ಮಾಣವನ್ನು ಮತ್ತೆ ಪ್ರಾರಂಭಿಸಲಾಯಿತು. ಇದರಿಂದ ಮೈಸೂರಿನ ಅನೇಕರಿಗೆ ಉದ್ಯೋಗ ಲಭಿಸಿತು. 1926–27ರಲ್ಲಿ ಮೈಸೂರು ಸ್ಟೇಟ್ ರೈಲ್ವೆ 1,154 ಮಂದಿ ಉದ್ಯೋಗಿಗಳನ್ನು ಹೊಂದಿತ್ತು. ಅವರಲ್ಲಿ ಮೂವರು ಯೂರೋಪಿಯನ್ನರು, 28 ಮಂದಿ ಆಂಗ್ಲೋ ಇಂಡಿಯನ್ನರು, ಉಳಿದ 1,123 ಮಂದಿ ಭಾರತೀಯರು. ಅವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿನವರೇ ಆಗಿದ್ದರು.

ಹಾಗೆ ಉದ್ಯೋಗ ಪಡೆದು ಪ್ರಮುಖ ಸ್ಥಾನದಲ್ಲಿದ್ದವರ ಪೈಕಿ ವೈ.ಕೆ.ರಾಮಚಂದ್ರರಾವ್ ಒಬ್ಬರು. ಇವರು ರೈಲ್ವೆ ಇಲಾಖೆಯಲ್ಲಿ ಬಹಳಷ್ಟು ವರ್ಷ ಕಾಲ ಚೀಫ್ ಇಂಜಿನಿಯರ್ ಆಗಿದ್ದರು. ಜೊತೆಗೆ ಕನ್ನಡ ಸಾಹಿತ್ಯದ ಅಭಿರುಚಿ ಉಳ್ಳವರಾಗಿ 20ನೇ ಶತಮಾನದ ಆರಂಭದಲ್ಲಿ ಕನ್ನಡದ ಪ್ರಮುಖ ಬರಹಗಾರರಲ್ಲಿ ಒಬ್ಬರಾಗಿದ್ದರು. ಯಳಂದೂರಿನವರಾದ ಇವರು ರಾಜಪ್ರಭುತ್ವದ ರಾಜ್ಯವಾಗಿದ್ದ ಮೈಸೂರಿನಲ್ಲಿ ಮೂಲಭೂತ ಸೌಕರ್ಯಗಳನ್ನು ರೂಪಿಸುವಲ್ಲಿ ಹಾಗೂ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಪ್ರಮುಖರಲ್ಲೊಬ್ಬರಾಗಿದ್ದರು. ರಾಜ್ಯದ ಇಂಜಿನಿಯರಿಂಗ್ ಸೇವಾ ಕ್ಷೇತ್ರವನ್ನು ಪ್ರವೇಶಿಸಿ ಮೈಸೂರು ಸ್ಟೇಟ್ ರೈಲ್ವೆಯ (ಎಂ. ಎಸ್. ಆರ್) ಚೀಫ್ ಇಂಜಿನಿಯರ್ ಆಗಿ ನೇಮಕಗೊಂಡು ಅದರ ಬೆಳವಣಿಗೆಗೆ ಕಾರ್ಯಕರ್ತರಾದರು. 1900ರ ಪ್ರಾರಂಭಿಕ ವರ್ಷಗಳಲ್ಲಿ ಮದ್ರಾಸ್ ಮತ್ತು ದಕ್ಷಿಣ ಮರಾಠ ರೈಲ್ವೆಯನ್ನು (ಎಂ. ಅಂಡ್ ಎಸ್. ಎಂ.) ಮೈಸೂರಿನ ಮಹಾರಾಜರ ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಂಡಾಗ ಅದರ ರೈಲು ಮಾರ್ಗಗಳ ನಿರ್ವಹಣೆಯೂ ರಾಜ್ಯದ ಹೊಣೆಗಾರಿಕೆಯಾಯಿತು. ಆ ಪರಿವರ್ತನೆಯ ಕಾರ್ಯವನ್ನು ಯಶಸ್ವಿಯಾಗಿ ಸಾಧಿಸುವಲ್ಲಿ ರಾಮಚಂದ್ರರಾಯರು ಪ್ರಮುಖ ಪಾತ್ರ ವಹಿಸಿದ್ದರು. 20ನೆಯ ಶತಮಾನದ ಪ್ರಾರಂಭದಲ್ಲಿ ರಾಜ್ಯದ ಮೂಲಭೂತ ಸಂಪರ್ಕ ಸೃಷ್ಟಿಸುವ ಕಾರ್ಯದಲ್ಲಿ, ಅದರ ಸಾಂಸ್ಕೃತಿಕ ಬೆಳವಣಿಗೆಯಲ್ಲಿ 'ರಾಜಸೇವಾಸಕ್ತ' ರಾಮಚಂದ್ರರಾಯರ ಪಾತ್ರ ಗಣನೀಯದ್ದಾಗಿತ್ತು.

ರಾಜ್ಯದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ಜರುಗಿದ 1920ರ ಕೊನೆಯ ಭಾಗದಿಂದ 1940ರವರೆಗೆ ಸುಮಾರು ಇಪ್ಪತ್ತು ವರ್ಷಗಳು ಇವರು ರೈಲ್ವೆ ಇಲಾಖೆಯಲ್ಲಿ ಉನ್ನತ ಅಧಿಕಾರದಲ್ಲಿದ್ದರು. ರಾಜ್ಯದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಮಹತ್ತರ ಕಾರ್ಯವನ್ನು ಇವರು ಈ ಅವಧಿಯಲ್ಲಿ ನಡೆಸಿದರು. 1909ರಿಂದ 1912ರವರೆಗೆ ರಾಜ್ಯದ ಚೀಫ್ ಇಂಜಿನಿಯರ್ ಆಗಿದ್ದ ಸರ್ ಎಂ.ವಿಶ್ವೇಶ್ವರಯ್ಯನವರು ರಾಜ್ಯದ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಕಾರ್ಯವನ್ನು ಪ್ರಾರಂಭಿಸಿದ್ದರು. 1911–12ರಲ್ಲಿ ಸರ್ ಇ.ಎ.ಎಸ್.ಬೆಲ್ ಎಂಬಾತ ರಾಜ್ಯದ ರೈಲ್ವೆ ನಿರ್ಮಾಣ ಇಲಾಖೆಯನ್ನು ಸೃಷ್ಟಿಸಿದ್ದ. ಸೀತಾರಾಮರಾಯರಾದರೋ ಅವರ ಅವಧಿಯಾದರೋ ಈ ರೈಲು ಯೋಜನೆಗಳನ್ನು ಪ್ರಾಂತ್ಯಗಳಲ್ಲಿ ಅನುಷ್ಠಾನಕ್ಕೆ ತಂದು, ರೈಲು ಮಾರ್ಗಗಳ ನಿರ್ವಹಣೆಗೆ ಹೆಚ್ಚಿನ ಸ್ವಾಯತ್ತೆಯನ್ನು ತರುವ ದಿಕ್ಕಿನದ್ದಾಗಿ ಮಹತ್ವದ್ದಾಗಿತ್ತು.


ಈ ದಿಸೆಯಲ್ಲಿ ಕಾರ್ಯಾರಂಭ ಮಾಡಿದ ಸೀತಾರಾಮರಾವ್ ನಂಜನಗೂಡಿನಿಂದ ಚಾಮರಾಜನಗರಕ್ಕೆ ರೈಲು ಮಾರ್ಗದ ವಿಸ್ತರಣಾ ಕಾರ್ಯದ ಮುತುವರ್ಜಿ ವಹಿಸಿದ್ದರು. 22.29 ವಿಸ್ತರಣೆಯ ಈ ಯೋಜನೆ ಪೂರ್ತಿಗೊಂಡು 1926ರಲ್ಲಿ ಮಹಾರಾಜರಿಂದ ಸಂಚಾರಕ್ಕೆ ತೆರೆಯಲ್ಪಟ್ಟಿತು. ಈ ಮಾರ್ಗವಾದರೋ ವಿಶಿಷ್ಟವಾದ ರೈಲ್ವೆ ಯೋಜನೆಯಾಗಿತ್ತು. ಮೈಸೂರು ಜಿಲ್ಲಾ ಮಂಡಳಿಯ ಹಣವನ್ನು ಬಳಸಿಕೊಂಡು ಈ ಮಾರ್ಗವನ್ನು ನಿರ್ಮಾಣ ಮಾಡಲಾಯಿತು. ಇದರಿಂದಾಗಿ ಅದು ಜಿಲ್ಲಾ ಮಂಡಳಿಗಳ ರೈಲು ಕಾರ್ಯಗಳನ್ನು ಅನುಷ್ಠಾನಕ್ಕೆ ತರುವ ಪ್ರಮುಖ ಮತ್ತು ಮಹತ್ವದ ಯೋಜನೆಯಾಗಿತ್ತು. ಈ ರೈಲು ಕಾರ್ಯದಲ್ಲಿ ರಾಮಚಂದ್ರರಾಯರು ಗುರುತರ ಪಾತ್ರ ವಹಿಸಿದರು.

ಮೈಸೂರು–ನಂಜನಗೂಡಿನ ಭಾಗವಾಗಿ ನಂಜನಗೂಡಿನಿಂದ ಚಾಮರಾಜನಗರಕ್ಕೆ ಮೀಟರ್ ಗೇಜ್ ರೈಲು ಮಾರ್ಗವನ್ನು ವಿಸ್ತರಿಸುವ ಕಾರ್ಯ ಮಾಡುವಾಗ ರಾಮಚಂದ್ರರಾವ್ ಅನೇಕ ತಾಂತ್ರಿಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ನಂಜನಗೂಡು ಮಾರ್ಗದಲ್ಲಿ ನಿರ್ಮಿತವಾಗಿದ್ದ 'ದಳವಾಯಿ ಬ್ರಿಡ್ಜ್' ಎಂದೇ ಪ್ರಸಿದ್ಧಿಯಾದ ಕಪಿಲಾ ನದಿಯ ಮೇಲಿನ ಸೇತುವೆ ಪೂರ್ವದಲ್ಲಿ ಕೇವಲ ಪಾದಚಾರಿ ಮತ್ತು ಬಂಡಿಗಳ ಓಡಾಟಕ್ಕೆ ಮಾತ್ರ ನಿರ್ಮಾಣವಾಗಿದ್ದು ಅದನ್ನು ನಂತರ ಮೀಟರ್ ಗೇಜ್ ರೈಲು ಸಂಚಾರಕ್ಕೂ ಅನುಕೂಲವಾಗುವಂತೆ ಮಾರ್ಪಡಿಸಲಾಗಿತ್ತು. 1899ರಿಂದ ಮೈಸೂರು ಸ್ಟೇಟ್ ರೈಲ್ವೆ ಈ ಸೇತುವೆಯನ್ನು ರೈಲುಗಳ ಓಡಾಟಕ್ಕೆ ಬಳಸುತ್ತಿತ್ತು. ಆದರೆ ಈಗ ರೈಲು ಮಾರ್ಗ ಚಾಮರಾಜನಗರದವರೆಗೆ ವಿಸ್ತರಣೆಯಾಗಿ ಹೆಚ್ಚು ವಾಣಿಜ್ಯ ಸಂಚಾರಕ್ಕೆ ತೆರೆದುಕೊಳ್ಳುವುದರಿಂದ ಸೇತುವೆಯನ್ನು ಆಧುನಿಕ ರೀತಿಯ ರೈಲು ಸಂಚಾರಕ್ಕೆ ಸುಸಜ್ಜಿತವನ್ನಾಗಿ ಮಾಡಬೇಕಾಗಿತ್ತು. ನಿರ್ದಿಷ್ಟ ಪ್ರಮಾಣದ ಭಾರಕ್ಕಾಗಿ ಮಾತ್ರ ನಿರ್ಮಿಸಲಾಗಿದ್ದ ಮೈಸೂರು–ನಂಜನಗೂಡು ಮಾರ್ಗವನ್ನು ಹೆಚ್ಚು ಶಕ್ತಿಯ ಇಂಜಿನ್ ಮತ್ತು ರೈಲು ಓಡಾಟಕ್ಕಾಗಿ ಮಾರ್ಪಡಿಸಲು ಅಗತ್ಯ ಬದಲಾವಣೆ ತರುವುದು ಅತ್ಯಾವಶ್ಯಕವಾಗಿತ್ತು. ತಾಂತ್ರಿಕ ಪರಿಶ್ರಮದ ಈ ಕಾರ್ಯವನ್ನು ರಾಮಚಂದ್ರರಾವ್ ಬುದ್ಧಿವಂತಿಕೆಯಿಂದ ನಿರ್ವಹಿಸಿದರು. 1735ರಲ್ಲಿ ಕಟ್ಟಲಾಗಿದ್ದ ಈ ಐತಿಹಾಸಿಕ ಸೇತುವೆ ಆಧುನಿಕ ರೀತಿಯ ಮೀಟರ್ ಗೇಜ್ ರೈಲು ಓಡಾಟಕ್ಕೆ ಸರಿಹೊಂದುವಂತೆ ಮಾರ್ಪಾಡುಗಳನ್ನು ಮಾಡಿದರು. **(ಮುಂದುವರೆಯುವುದು)**

ಬದುಕಿನ ಪಾಠಗಳು....

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ ।
ಫಲ ಮಾಗುವಂದು ತುತ್ತೂರಿ ದನಿಯಿಲ್ಲ ॥
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ ।
ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ ॥

> ನಾವು ಮಾಡುವುದು ಸೇವೆ ಅಲ್ಲದೆ ಉಪಕಾರ ಅಲ್ಲ ಎಂದು. ಇದು ನಮ್ಮ ಅಹಂಕಾರವನ್ನು ಬಹಳಷ್ಟು ತಗ್ಗಿಸುವ ಮಾತು. ಉಪಕಾರ ಮಾಡುತ್ತೇನೆ ಎಂಬುದೂ ಅಹಂಕಾರ ಲೇಪಿತವೇ ಅಲ್ಲವೇ? ಭಗವಂತ ಈ ಸೇವೆಯನ್ನು ಮಾಡಲು ನಮಗೆ ಒಂದು ಅವಕಾಶವನ್ನು ನೀಡಿದ್ದಾನೆ ಎಂಬುದು ನಮ್ಮ ವಿನಯವನ್ನು ತೋರಿಸುತ್ತದೆ.



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಿಜ. ಈ ಜಗತ್ತಿನಲ್ಲಿ ಅದೆಷ್ಟು ಸೃಷ್ಟಿ ಕಾರ್ಯ, ಸತ್ಕಾರ್ಯಗಳು ನಡೆಯುತ್ತಿವೆ. ಯಾವುದೇ ಸದ್ದು–ಗದ್ದಲ ಇಲ್ಲದೆ. ಇಡೀ ಮನುಕುಲದ ಹೊಟ್ಟೆ ತುಂಬಿಸುವ ಸಸ್ಯಗಳು ಭೂಮಿಯಲ್ಲಿ ಮೊಳಕೆ ಒಡೆಯುವಾಗ ನಾನು ಜಗತ್ತಿನ ಎಲ್ಲರ ಹೊಟ್ಟೆ ತುಂಬಿಸಲಿಕ್ಕಾಗಿಯೇ ಅವತರಿಸುತ್ತಿದ್ದೇನೆ. ಎಂದು ಡಂಗುರ ಸಾರುತ್ತಾ ಹೊರ ಬರುತ್ತದೆಯೇ? ಹಣ್ಣು ಮಾಗುವಾಗ ತುತ್ತೂರಿಯ ದನಿಯಿಂದ ತನ್ನ ಸಾಧನೆಯನ್ನು ಸಾರುತ್ತದೆಯೇ? ಜಗತ್ತಿನ ಮೂಲೆಮೂಲೆಗೂ ಹಗಲೂ–ರಾತ್ರಿ ಬೆಳಕನ್ನು ನೀಡುವ ಸೂರ್ಯ–ಚಂದ್ರರು ಸ್ವಲ್ಪವಾದರೂ ಸದ್ದು ಮಾಡುತ್ತಾರೆಯೇ?

ಅದೇಕೆ ಮನುಷ್ಯರಿಗೆ ಮಾತ್ರ ತಾವು ಮಾಡುವ ಪ್ರತಿಯೊಂದು (ಒಳ್ಳೆಯ) ಕಾರ್ಯವೂ ಇತರರಿಗೆ ತಿಳಿಯಲಿ, ಅದರ ಫೋಟೋ ಪೇಪರಿನಲ್ಲಿ ಬರಲಿ, ತಾನು ಕೊಟ್ಟ ದಾನವು ಶಾಶ್ವತವಾಗಿ ಎಲ್ಲರಿಗೂ ತಿಳಿಯುವಂತಾಗಲೀ ಎನ್ನುವ ಹಂಬಲ. ಈ ಕೀರ್ತಿಯ, ಹೆಸರಿನ ಹಂಬಲವು ತನ್ನನ್ನು ವೈಭವೀಕರಿಸಿಕೊಳ್ಳುವ ಉದ್ದೇಶವಲ್ಲದೆ ಮತ್ತೇನೂ ಅಲ್ಲ. ಸ್ವಲ್ಪ ಯೋಚಿಸಿ, ಅದೆಷ್ಟೋ ವ್ಯಕ್ತಿಗಳು ನಮಗಿಂತ ಅತೀ ಉತ್ತಮ ಕಾರ್ಯಗಳನ್ನು, ಸೇವೆಯನ್ನು, ದಾನವನ್ನು ರಕ್ಷಣೆಯನ್ನು ಮಾಡಿಲ್ಲ? ಅವರುಗಳಿಗಿಂತ ದೊಡ್ಡದಾದುದನ್ನು, ಮಹತ್ತಾದುದನ್ನು ನಾವು ಮಾಡಿದ್ದೇವೆಯೇ? ನಾವು ಮಾಡಿರಬಹುದಾದ ಅಲ್ಪ ಕಾರ್ಯವನ್ನೇ ಬೃಹತ್ತಾಗಿ ಭಾವಿಸಿ, ಅದನ್ನು ಇತರರು ಹೊಗಳಲಿ ಎಂಬ ಈ ಕ್ಷುಲ್ಲಕ ಬಯಕೆ ನಮಗೆ ಏಕೆ ಬೇಕು? ಇತರರ ಹೊಗಳಿಕೆಗೆ ಮಾರುಹೋಗುವ ತವಕವೇಕೆ? ಅದರಿಂದ ನಮಗೆ ಸಿಗುವುದಾದರೂ ಏನು? ಎಂಬುದನ್ನು ಆಳವಾಗಿ ಆಲೋಚಿಸಲು ಆರಂಭಿಸಿದಾಗ, ಗುಪ್ತ ದಾನ ಅದೆಷ್ಟು ಶ್ರೇಷ್ಠ ಎಂಬುದು ತಿಳಿಯುತ್ತದೆ.

ಮಹಾಭಾರತದ ಕರ್ಣ ದಾನಶೂರ ಎಂದೇ ಪ್ರಸಿದ್ಧ. ಒಮ್ಮೆ ಅವನು ಸ್ನಾನ ಮಾಡಲೆಂದು ಮೈಗೆಲ್ಲ ಎಣ್ಣೆಯನ್ನು ಪೂಸಿ ಕೊಳ್ಳುತ್ತಲಿದ್ದ. ಆಗ ಅವನಲ್ಲಿಗೆ ಬಂದ ಬಡ ಬ್ರಾಹ್ಮಣನೊಬ್ಬ ತನ್ನ ಮಗನ ಉಪನಯನಕ್ಕಾಗಿ ಏನಾದರೂ ಸಹಾಯ ಮಾಡಿ ಎಂದು ಕೇಳಿದ. ಎಡಗೈಯಲ್ಲಿದ್ದ ಚಿನ್ನದ ಬಟ್ಟಲಲ್ಲಿನ ಎಣ್ಣೆಯನ್ನು ಬಲಗೈಯಿಂದ ಹಚ್ಚಿಕೊಳ್ಳುತ್ತಿದ್ದ ಕರ್ಣ ಕೂಡಲೇ ಎಡಗೈಯಿಂದಲೇ ಆ ಚಿನ್ನದ ಬಟ್ಟಲನ್ನು ಅವನಿಗೆ ನೀಡಿ ಕಳುಹಿಸಿದ. ಇದೇನು! ಎಡಗೈಯಿಂದ ದಾನ ಕೊಡಬಹುದೇ? ಎಂದು ಅವನನ್ನು ಅಲ್ಲಿದ್ದವರು ಕೇಳಿದಾಗ ಕರ್ಣ ಹೇಳಿದ, ಆ ಬಟ್ಟಲನ್ನು ಎಡಗೈಯಿಂದ ಬಲಗೈಗೆ ಹಸ್ತಾಂತರಿಸುವಷ್ಟರಲ್ಲಿ ನನ್ನ ಮನಸ್ಸು ಬದಲಾಗಬಹುದು. ಮತ್ತೊಂದು ವಿಷಯವೆಂದರೆ, ಎಡಗೈಯಲ್ಲಿ ನೀಡಿದ ದಾನ ಬಲಗೈಗೆ ತಿಳಿಯಬಾರದು. ಅದಕ್ಕಾಗಿ ಆ ಕೂಡಲೇ ಎಡಗೈಯಿಂದಲೇ ದಾನ ನೀಡಿದೆ ಎಂದ. ಅದೇ ದೃಶ್ಯವನ್ನು ಇಂದಿನ ರಾಜಕಾರಣಿಗಳೋ ಅಥವಾ ದಾನಶೂರರೋ ಇದ್ದಲ್ಲಿ, ಹೇಗಿದ್ದಿರಬಹುದು ಊಹಿಸಿ. ಕೂಡಲೇ ಕ್ಯಾಮರಾಮನ್ ಅನ್ನು ಕರೆಸಿ, ಕ್ಯಾಮರಾಗೆ ಪೋಸ್ ಕೊಡುತ್ತಾ, ಅದು ಪೇಪರಿನಲ್ಲಿ ಎಂದು ಬರುತ್ತದೆ ಎಂದು ವಿಚಾರಿಸುತ್ತಿದ್ದರು. ಅಲ್ಲವೇ?

ನಾವಿದ್ದ ಮಹಡಿ ಮನೆಯೊಂದರ ಮನೆ ಮಾಲೀಕರು ಕೆಳಗಿನ ಮನೆಯಲ್ಲಿ ಇರುತ್ತಿದ್ದರು. ಅವರ ಹಿರಿಯ ಮಗ ಸಿನಿಮಾಗಳಲ್ಲಿ ಸ್ಟಂಟ್ ಮನ್ ಆಗಿ ಕೆಲಸ ಮಾಡುತ್ತಿದ್ದ. ಚಿತ್ರೀಕರಣದ ವೇಳೆಯಲ್ಲಿ ಅಪಘಾತಕ್ಕೀಡಾಗಿ ಸಿಕ್ಕಿ ಆತ ಮರಣ ಹೊಂದಿದ. ತಂದೆ–ತಾಯಿಯರ, ಹೆಂಡತಿ, ಮಗು ವಿನ ಆಕ್ರಂದನ ಕರುಳು ಕರಗಿಸುವಂತಿತ್ತು. ಸಿನಿಮಾದ ಸಿಬ್ಬಂದಿ ಯವರೆಲ್ಲರೂ ಅಲ್ಲಿ ನೆರೆದಿದ್ದರು. ಅಲ್ಲಿಗೆ ಆಗಮಿಸಿದ ಆ ಚಿತ್ರದ ನಾಯಕ ರಾಜಕೀಯದಲ್ಲಿಯೂ ಇದ್ದಾತ. ಅವನು ಅಲ್ಲಿದ್ದ ಇತರರೊಡನೆ ಮಾತನಾಡುತ್ತಿದ್ದ. ಯಾವಾಗ ಕ್ಯಾಮರಾ ಅವನ ಕಡೆಗೆ ಹೊರಳಿತೋ ಕೂಡಲೇ ಆ ತಾಯಿಯನ್ನು ತಬ್ಬಿ ಹಿಡಿದು ಸಾಂತ್ವನ ಹೇಳುವ ರೀತಿಯಲ್ಲಿ ಪೋಸು ಕೊಟ್ಟ. ಕ್ಯಾಮರಾ ಅತ್ತ ಸರಿದೊಡನೆ ಆಕೆಯ ಕಡೆಗೆ ತಿರುಗಿಯೂ ನೋಡಲಿಲ್ಲ. ಇದು ಇಂಥವರ ದುಃಖ ಪ್ರಕಟಿಸುವ ರೀತಿ. ಜನಪ್ರಿಯತೆಗಾಗಿಯೇ ಬಾಯಿ ಬಿಟ್ಟುಕೊಂಡಿರುವವರ ರೀತಿ ಅದು.

ಇಂದಿಗೂ ಸದ್ದು ಗದ್ದಲವಿಲ್ಲದೆ ಇತರರಿಗೆ ಉಪಕಾರವನ್ನು ಮಾಡುತ್ತಾ ಬದುಕಿರುವ ಅನೇಕರು ನಮ್ಮ ನಡುವೆಯೇ ಇದ್ದಾರೆ. ಅಂತಹವರನ್ನು ನೋಡಿ ನಾವು ಕಲಿಯೋಣ. ಅವರಿಗೆ ಯಾವ ಪ್ರಚಾರವೂ ಬೇಕಿಲ್ಲ. ತಮ್ಮಿಂದ ನಾಕು ಜನರಿಗೆ ಉಪಕಾರ ವಾದರೆ ಸಾಕು. ಅದರಿಂದಲೇ ಅವರು ಧನ್ಯತಾ ಭಾವವನ್ನು ಹೊಂದುತ್ತಾರೆ. ಸ್ವಾಮಿ ವಿವೇಕಾನಂದರು ಒಂದು ಮಾತನ್ನು ಹೇಳುತ್ತಾರೆ. ನಾವು ಮಾಡುವುದು ಸೇವೆ ಅಲ್ಲದೆ ಉಪಕಾರ ಅಲ್ಲ ಎಂದು. ಇದು ನಮ್ಮ ಅಹಂಕಾರವನ್ನು ಬಹಳಷ್ಟು ತಗ್ಗಿಸುವ ಮಾತು. ಉಪಕಾರ ಮಾಡುತ್ತೇನೆ ಎಂಬುದೂ ಸಹ ಅಹಂಕಾರ ಲೇಪಿತವೇ ಅಲ್ಲವೇ? ಭಗವಂತ ಈ ಸೇವೆಯನ್ನು ಮಾಡಲು ನಮಗೆ ಒಂದು ಅವಕಾಶವನ್ನು ನೀಡಿದ್ದಾನೆ ಎಂಬುದು ನಮ್ಮ ವಿನಯವನ್ನು ತೋರಿಸುತ್ತದೆ. ಅದು ಬೇಕು. ಇಂತಹ ಮನೋಭಾವವನ್ನು ಬೆಳಸಿಕೊಂಡರೆ, ಮನೆಯಲ್ಲಿರುವ ಹಿರಿಯರನ್ನು, ವೃದ್ಧರನ್ನು ಪ್ರೀತಿಯಿಂದ ಕಾಣುವ, ಕಿರಿಕಿರಿಗೊಳ್ಳದೆ ಇರುವ ಮನೋಭಾವವು ಬೆಳೆಯುತ್ತದೆ. ಇತರರ ನೋವಿಗೆ ಸಾಂತ್ವನ ಹೇಳುವ, ಕೈಲಾದಷ್ಟು ಸಹಾಯ ಮಾಡುವ ಪ್ರವೃತ್ತಿ ಬೆಳೆಯುತ್ತದೆ. ಮನೆಯಲ್ಲಿ ಹಿರಿಯರು ಇದನ್ನು ಅಭ್ಯಾಸ ಮಾಡಿದರೆ, ಅದನ್ನು ನೋಡಿಯೇ ಮಕ್ಕಳಲ್ಲಿಯೂ ಪರೋಪಕಾರದ ಸದ್ಗುಣ ಮೊಳಕೆಯೊಡೆಯುತ್ತದೆ. ಇತರರ ಕಷ್ಟದಲ್ಲಿ ಸಹಾಯ ಮಾಡದವ, ಮಾನವೀಯತೆ ತೋರದವ, ಅದೆಂಥ ಮಾನವ?

ಪ್ರತಿನಿತ್ಯ ಪೇಪರಿನಲ್ಲಿ, ವಾಟ್ಸಾಪ್‌ಗಳಲ್ಲಿ ಬರೀ ಕೊಲೆ, ಅತ್ಯಾಚಾರ, ಕಳ್ಳತನ, ಮೋಸ ಇಂತಹುದೇ ಕೆಟ್ಟ ಸುದ್ದಿಗಳನ್ನು ಓದಿ ಓದಿ ತಲೆ ಚಿಟ್ಟು ಹಿಡಿದಿದೆಯೇ? ಬನ್ನಿ ನಮ್ಮ ದೇಶದಲ್ಲಿಯೇ ಇರುವ ಪುಣ್ಯಾತ್ಮರ ಪರಹಿತ ಕೆಲ ಕೆಲಸಗಳನ್ನು ಅರಿಯೋಣ. ಪುಣೆಯಲ್ಲಿ ಗಣೇಶ್‌ರಾಖ್ ಎನ್ನುವ ವೈದ್ಯರಿ ದ್ದಾರೆ. ಹೆಣ್ಣು ಮಗು ಎಂದಾಕ್ಷಣ ಮೂಗು ಮುರಿಯುವ, ಅದರ ಜೀವ ತೆಗೆಯುವವರ ಮಧ್ಯೆ ಇವರು ಹೆಣ್ಣು ಮಗುವಿನ ಹೆರಿಗೆಯನ್ನು ಉಚಿತವಾಗಿ ಮಾಡುತ್ತಾರೆ. ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ಸಮರ ಸಾರಿರುವ ಇವರು ಇದುವರೆಗೆ 2000ಕಿಂತಲೂ ಹೆಚ್ಚು ಹೆಣ್ಣುಮಕ್ಕಳ ಹೆರಿಗೆಯನ್ನು ಉಚಿತವಾಗಿ ಮಾಡಿದ್ದಾರೆ. ತಮಿಳುನಾಡಿನ ವೃದ್ಧೆ 'ಇಡ್ಲಿ ಅಮ್ಮ' ಎಂದೇ ಹೆಸರುವಾಸಿಯಾಗಿರುವ ಕಮಲಾತಲ್ ಇಂದಿಗೂ ಒಂದು ರೂಪಾಯಿಗೆ ಒಂದು ಇಡ್ಲಿಯನ್ನು ಮಾರುತ್ತಾರೆ. ಲಾಭಕ್ಕೆಂದು ಅಲ್ಲ, ಬಡ ಕಾರ್ಮಿಕರು, ವಿದ್ಯಾರ್ಥಿಗಳು, ಅವಶ್ಯಕತೆ ಇರುವ ಯಾರೇ ಆಗಲೀ ಉಪವಾಸ ಇರಬಾರದೆಂಬ ಆಶಯದಿಂದ. ಮುಂಬಯಿಯ ದಾದಾರಾವ್ ಬಿಲಹೋರೆ ಎಂಬಾತ ರಸ್ತೆಯ ಗುಂಡಿಯ ಅಪಘಾತದಲ್ಲಿ ತಮ್ಮ ಮಗನನ್ನು ಕಳೆದುಕೊಂಡರು. ಆ ದುಃಖವು ಅವರಲ್ಲಿ ಸಿಟ್ಟಿಗೆ ಬದಲಾಗಿ ಅವರನ್ನು ಎಂತಹ ಕಾರ್ಯಕ್ಕೆ ಪ್ರಚೋದಿಸಿತು ಎಂದರೆ, ಇಂತಹ ಅಪಘಾತಗಳು ಇತರರಿಗೆ ಆಗದಿರಲಿ ಎಂಬ ಸದುದ್ದೇಶದಿಂದ ಅವರು ಗುಂಡಿಗಳನ್ನು ಮುಚ್ಚುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇದುವರೆಗೆ ಸುಮಾರು 1500 ಗುಂಡಿಗಳನ್ನು ಮುಚ್ಚಿ ರಸ್ತೆಗಳನ್ನು ಸುರಕ್ಷಿತವನ್ನಾಗಿ ಮಾಡಿದ್ದಾರೆ ಅವರು.

ಪಶ್ಚಿಮ ಬಂಗಾಲದ ಕರೀಮುಲ್ಲಾಹ್ ಎಂಬಾತ ತಮ್ಮ ತಾಯಿಗೆ ಸಮಯಕ್ಕೆ ಸರಿಯಾಗಿ ಅಂಬ್ಯುಲೆನ್ಸ್ ಸಿಗದ ಕಾರಣ ತಮ್ಮ ತಾಯಿಯನ್ನು ಕಳೆದುಕೊಳ್ಳುತ್ತಾರೆ. ಆಗ ಅವರು ತಮ್ಮ ಬೈಕನ್ನೇ ಅಂಬ್ಯುಲೆನ್ಸಾಗಿ ಪರಿವರ್ತಿಸಿ ತುರ್ತು ಚಿಕಿತ್ಸೆ ಇರುವ ಅನೇಕ ರೋಗಿಗಳನ್ನು ಆಸ್ಪತ್ರೆಗೆ ಸೇರಿಸಲು ನೆರವಾಗಿದ್ದಾರೆ. ಕರ್ನಾಟಕದ ಗಿರೀಶ್ ಭಾರದ್ವಾಜ್ ಎಂಬುವರು ಅನೇಕ ಪ್ರವಾಹಪೀಡಿತ ಪ್ರದೇಶದಲ್ಲಿ ಕಡಿಮೆ ಖರ್ಚಿನಲ್ಲಿ, ಪರಿಸರ ಸ್ನೇಹಿ ಆಗಿರುವ ವಸ್ತುಗಳನ್ನೇ ಬಳಸಿ ತೂಗು ಸೇತುವೆಗಳ ನಿರ್ಮಾಣ ಮಾಡಿದ್ದಾರೆ.

ಇಂತಹವರು ನಮಗೆ ನಿಜಕ್ಕೂ ಸ್ಫೂರ್ತಿದಾಯಕರಲ್ಲವೇ?
ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು ।
ಕತ್ತಲೆಯ ಮೊಡಕು ಮೂಲೆಗಳ ಸೇರದಿರು ।
ಭಾಸ್ಕರನನುಗ್ರಹವೇ ನೂತ್ನ ಜೀವನಸತ್ತ್ವ ।
ಮೃತ್ಯು ನಿನಗಲ್ಪತೆಯೋ? ಮಂಕುತಿಮ್ಮ ॥

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ನಾಡಪ್ರಭು ಕೆಂಪೇಗೌಡರ ಅದ್ಧೂರಿ, ಅರ್ಥಪೂರ್ಣ ಜಯಂತಿ

ಹೋಬಳಿಗೊಂದು ಕೆಂಪೇಗೌಡ ಭವನ ನಿರ್ಮಿಸಿ



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ನಾಡಪ್ರಭು ಶ್ರೀ ಕೆಂಪೇಗೌಡರ 517ನೇ ಜಯಂತಿ ಸಮಾರಂಭದಲ್ಲಿ ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರು ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು.

- ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಶಾಸಕ ಕೆ.ಹರೀಶ್‌ಗೌಡ ಆಗ್ರಹ
- ಇತರೆ ಸಮುದಾಯದಂತೆ ಒಕ್ಕಲಿಗರಿಗೂ ಭವನದ ಅವಶ್ಯವಿದೆ
- ಮುಂದಿನ ವರ್ಷ ಸರ್ಕಾರಿ ಕಚೇರಿಗಳಲ್ಲಿ ಜಯಂತಿ ಆಚರಿಸಲಿ
- ಕೆಂಪೇಗೌಡರು ಬಹಳ ಹಿಂದೆಯೇ ಆದರ್ಶ ನಾಡು ಕಟ್ಟಿದರು
- ಡಿ.ಕೆ.ಶಿವಕುಮಾರ್ ಸಿಎಂ ಆಗಿರುವುದು ನಮಗೆ ಹೆಮ್ಮೆಯ ಸಂಗತಿ

ಮೈಸೂರು, ಜೂ.27(ಬಿಎಲ್‌ಯು)– ಕರ್ನಾಟಕದ ಪ್ರತಿಯೊಂದು ಹೋಬಳಿಯಲ್ಲೂ 'ಕೆಂಪೇಗೌಡ ಭವನ' ನಿರ್ಮಾಣ ಮಾಡಬೇಕೆಂದು ಶಾಸಕ ಕೆ.ಹರೀಶ್‌ಗೌಡ ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅವರನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಇಂದು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ನಗರ ಪಾಲಿಕೆ, ಶ್ರೀ ಕೆಂಪೇಗೌಡ ಜಯಂತ್ಯೋತ್ಸವ ಸಮಿತಿ ಸಂಯುಕ್ತವಾಗಿ ಆಯೋಜಿಸಿದ್ದ ನಾಡಪ್ರಭು ಶ್ರೀ ಕೆಂಪೇಗೌಡರ 517ನೇ ಜಯಂತಿ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಸಂಬಂಧ ಒಕ್ಕಲಿಕ ಸಮುದಾಯದ ಶಾಸಕರು ಡಿ.ಕೆ. ಶಿವಕುಮಾರ್ ಅವರನ್ನು ಈಗಾಗಲೇ ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ ಎಂದು ತಿಳಿಸಿದರು.

ಹೋಬಳಿಗೊಂದು ಕೆಂಪೇಗೌಡ ಭವನ ನಿರ್ಮಾಣ ಮಾಡಲು ಡಿ.ಕೆ.ಶಿವಕುಮಾರ್ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ಸಂಬಂಧ ಶೀಘ್ರದಲ್ಲೇ ಸರ್ಕಾರದಿಂದ ಆದೇಶ ಹೊರಬೀಳುವ ಸಾಧ್ಯತೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಕ್ಕಲಿಗ ಸಮುದಾಯದವರು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿದ್ದಾರೆ. ಆರ್ಥಿಕ ಸಂಕಷ್ಟದಲ್ಲಿರುವ ನಮ್ಮ ಸಮುದಾಯದವರು ಮದುವೆ ಸೇರಿದಂತೆ ಇತರೆ ಕಾರ್ಯಕ್ರಮ ಮಾಡಲು ಸ್ಥಳಾವಕಾಶವಿಲ್ಲ. ಆದ ಕಾರಣ ಹೋಬಳಿಯಲ್ಲೊಂದು ಕೆಂಪೇಗೌಡ ಭವನ ನಿರ್ಮಾಣ ಮಾಡಬೇಕೆಂದು ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದು ಹೇಳಿದರು.

ನಾಯಕ ಸಮುದಾಯದವರಿಗೆ ವಾಲ್ಮೀಕಿ ಭವನ, ಕುರುಬ ಸಮುದಾಯದವರಿಗೆ ಕನಕ ಭವನ, ಲಿಂಗಾಯತ ಸಮುದಾಯದವರಿಗೆ ವೀರಶೈವ ಭವನ, ದಲಿತ ಸಮುದಾಯದವರಿಗೆ ಅಂಬೇಡ್ಕರ್ ಭವನ ಹಾಗೂ ಬಾಬು ಜಗಜೀವನರಾಮ್ ಭವನವಿದೆ. ಆದರೆ ಇಷ್ಟು ವರ್ಷವಾದರೂ

ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರು ಒಬ್ಬ ಅಪ್ರತಿಮ ಯೋಧರಾಗಿರುವುದರ ಜೊತೆಗೆ ಅದ್ಭುತ ನಗರಾಭಿವೃದ್ಧಿ ಯೋಜಕ ಹಾಗೂ ಜನಪರ ರಾಜರಾಗಿದ್ದರು ಎಂದು ಮೈಸೂರಿನ ಕುವೆಂಪುನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಇತಿಹಾಸ ಪ್ರಾಧ್ಯಾಪಕ ಪ್ರೊ.ವಾಸು ಬೋರೇಗೌಡ ಅಭಿಪ್ರಾಯಪಟ್ಟಿದ್ದಾರೆ.

16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದ ಕೆಂಪೇಗೌಡರು ಅಂದು ವ್ಯವಸ್ಥಿತವಾದ ಬೆಂಗಳೂರು ನಗರವನ್ನು ನಿರ್ಮಾಣ ಮಾಡಿದರು. ಬೆಂಗಳೂರನ್ನು ವಾಣಿಜ್ಯ ಕೇಂದ್ರವಾಗಿ ಮಾಡಲು ವಿಭಿನ್ನ ವೃತ್ತಿ ನಿರತರಿಗೆ ಪ್ರತ್ಯೇಕ ಪೇಟೆಗಳನ್ನು ನಿರ್ಮಿಸಿದರು. ಅಂದು ಕೆಂಪೇಗೌಡರು ನಿರ್ಮಿಸಿದ ಚಿಕ್ಕಪೇಟೆ, ದೊಡ್ಡಪೇಟೆ, ಅಕ್ಕಿಪೇಟೆ, ಬಳೆಪೇಟೆ, ತರಗುಪೇಟೆಯಂತಹ ಪ್ರದೇಶಗಳು ಇಂದಿಗೂ ಜೀವಂತವಾಗಿವೆ ಎಂದರು.

ಬೆಂಗಳೂರು ಜನರ ಕುಡಿಯುವ ನೀರಿಗೆ ತೊಂದರೆ ಆಗದಂತೆ ಧರ್ಮಾಂಬುದಿ ಕೆರೆ, ಕೆಂಪಾಂಬುದಿ ಕೆರೆ, ಹಲಸೂರು ಕೆರೆ ಹೀಗೆ ನೂರಾರು ಕೆರೆಗಳನ್ನು ನಿರ್ಮಿಸಿದರು. ಕಲೆ, ಸಂಸ್ಕೃತಿ ಹಾಗೂ ಧರ್ಮಕ್ಕೆ ಅಪಾರ ಕೊಡುಗೆ ನೀಡಿದ ಕೆಂಪೇಗೌಡರು ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನ, ಗವಿಗಂಗಾಧರೇಶ್ವರ ದೇವಸ್ಥಾನ ಸೇರಿದಂತೆ ಹಲವು ದೇವಸ್ಥಾನಗಳನ್ನು ಜೀರ್ಣೋದ್ಧಾರ ಕೂಡ ಮಾಡಿದರು. ಈ ಕಾರಣದಿಂದಲೇ ಬೆಂಗಳೂರು ಇಂದು ಜಾಗತಿಕ ಮಟ್ಟದಲ್ಲಿ ಪ್ರಖ್ಯಾತಿ ಪಡೆದಿದೆ ಎಂದು ಪ್ರೊ.ವಾಸು ಅವರು ವಿವರಿಸಿದರು.

ಇದೇ ವೇಳೆ ವಿವಿಧ ಕ್ಷೇತ್ರದ ಸಾಧಕರಾದ ಅಪ್ಪಾಜಿ ಗೌಡ, ಸದಾನಂದಗೌಡ, ಗೋವಿಂದೇಗೌಡ, ಟಿ.ಸಿ.ದೇವನಾಥ್, ಎಸ್.ಟಿ.ರವಿಕುಮಾರ್, ಎಂ.ಮೋಹನ್ ಕುಮಾರ್ ಗೌಡ, ಪ್ರಕಾಶ್ ಚಿಕ್ಕಪಾಳ್ಯ, ಶ್ರಾವಣಿ ಶಿವಣ್ಣ, ನಿತೀನ್, ಶಾಂತಮಲ್ಲಪ್ಪ, ವೀರಣ್ಣಯ್ಯ, ಜಯಂತ್, ಶಶಿಶೇಖರ ದೀಕ್ಷಿತ್ ಸೇರಿದಂತೆ 36ಕ್ಕೂ ಹೆಚ್ಚು ಗಣ್ಯರನ್ನು ಈ ವೇಳೆ ಸನ್ಮಾನಿಸಲಾಯಿತು. ಜೊತೆಗೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 450 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ಶಾಸಕರಾದ ಡಾ.ಡಿ.ತಿಮ್ಮಯ್ಯ, ರಘು ಕೌಟಿಲ್ಯ, ಮಾಜಿ ಶಾಸಕರಾದ ಎಲ್. ನಾಗೇಂದ್ರ ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಜಿಲ್ಲಾ ಒಕ್ಕಲಿಗ ಸಂಘದ ಅಧ್ಯಕ್ಷ ಮರಿಸ್ವಾಮಿಗೌಡ, ಚೇತನ್, ಮಂಜೇಗೌಡ, ಬೋರೇಗೌಡ, ಕೆಂಪೇಗೌಡ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಪ್ರಶಾಂತ್ ಗೌಡ ಹಾಗೂ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೆಂಪೇಗೌಡರಿಗೆ ಬೆಂಗಳೂರಿನ ಅಭಿವೃದ್ಧಿಯ ದೂರದೃಷ್ಟಿ ಇತ್ತು

"ಬೆಂಗಳೂರು ಬೆಳವಣಿಗೆಯ ಬಗ್ಗೆ ದೂರದೃಷ್ಟಿ ಹೊಂದಿದ್ದ ಕೆಂಪೇಗೌಡರು ನಗರದ ನಾಲ್ಕು ದಿಕ್ಕುಗಳಲ್ಲೂ ಗೋಪುರ (ಕಾವಲು ಗೇಟ್) ಗಳನ್ನು ನಿರ್ಮಿಸಿದರು. ಭವಿಷ್ಯದಲ್ಲಿ ಈ ಗಡಿಗಳನ್ನು ಮೀರಿ ನಗರ ಅಭಿವೃದ್ಧಿ ಹೊಂದುತ್ತದೆ ಎಂಬ ಅವರ ದೂರದೃಷ್ಟಿಯ ಕನಸು ಇಂದು ಸಾಕಾರಗೊಂಡಿದೆ. ನಾಡು ಕಂಡ ಅಪರೂಪದ ಪ್ರಭು ಕೆಂಪೇಗೌಡರ ಸಾಧನೆ, ತತ್ವಾದರ್ಶವನ್ನು ಇಂದಿನ ತಲೆಮಾರಿನ ಮಕ್ಕಳಿಗೆ ತಲುಪಿಸುವ ಇಂತಹ ಕಾರ್ಯಕ್ರಮ ಶ್ಲಾಘನೀಯ. ಮಹಾನ್ ಮಾನವತಾವಾದಿ ಕೆಂಪೇಗೌಡರು ಕಟ್ಟಿದ ಈ ಐತಿಹಾಸಿಕ ನಾಡಿನಲ್ಲಿ ನಾವು ಬದುಕುತ್ತಿರುವುದೇ ಹೆಮ್ಮೆಯ ಸಂಗತಿ. ಕೆಂಪೇಗೌಡರ ದಕ್ಷ ಹಾಗೂ ಸಮರ್ಥ ಆಡಳಿತ, ಜನಪರ ನೀತಿ, ವಿಶಾಲ ದೂರದೃಷ್ಟಿ ಇಂದಿನ ಯುವ ಪೀಳಿಗೆಗೆ ಆದರ್ಶವಾಗಲಿ.

–ಶ್ರೀ ಸೋಮೇಶ್ವರನಾಥ ಸ್ವಾಮೀಜಿ,



ನಾನಾ ಕಲಾ ತಂಡಗಳೊಂದಿಗೆ ಕೆಂಪೇಗೌಡರ ಪ್ರತಿಮೆ ಮೆರವಣಿಗೆ ಅದ್ಧೂರಿಯಾಗಿ ಸಾಗಿತು.



ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಕೆಂಪೇಗೌಡರ ಜಯಂತಿ ಅದ್ದೂರಿ ಮೆರವಣಿಗೆ ಆರಂಭಗೊಂಡಿತು.

ಮಿನಿ ದಸರಾ ಜಂಬೂ ಸವಾರಿಯಂತೆ ಸಾಗಿದ ಕೆಂಪೇಗೌಡರ ಜಯಂತಿಯ ಅದ್ಧೂರಿ ಮೆರವಣಿಗೆ

ಮೈಸೂರು, ಜೂ.27(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂದು ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯ ವರ್ಣರಂಜಿತ ಮೆರವಣಿಗೆ ಮಿನಿ ದಸರಾ ಜಂಬೂ ಸವಾರಿಯಂತೆ ಅದ್ಧೂರಿಯಾಗಿ ನಡೆಯಿತು. ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಸಾರೋಟಿನಲ್ಲಿ ಪ್ರತಿಷ್ಠಾಪಿಸಿದ್ದ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಶಾಸಕ ಟಿ.ಎಸ್.ಶ್ರೀವತ್ಸ, ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡಿದರು.

ಕೆಂಪೇಗೌಡರ ಆಡಳಿತದ ಬಗ್ಗೆ ವಿವರವಿರುವ ಸ್ತಬ್ಧ ಚಿತ್ರಗಳು, ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ಪ್ರತಿಮೆ ಪ್ರತಿಷ್ಠಾಪಿಸಿದ್ದ ಸಾರೋಟು, ಗ್ರಾಮೀಣ ಬದುಕನ್ನು ಬಿಂಬಿಸುವ ಎತ್ತಿನಗಾಡಿಗಳು ಮೆರವಣಿಗೆಯನ್ನು ಅತ್ಯಾಕರ್ಷಕಗೊಳಿಸಿತು. ಮಂಗಳೂರಿನ ಯಕ್ಷಗಾನ ಗೊಂಬೆ, ಕೀಲು ಕುದುರೆ, ನರಸಿಂಹ ವೇಷಧಾರಿ, ಪಕ್ಕಡಿ ವೇಷ ಧಾರಿ, ಕರಗ ನೃತ್ಯ, ಉಡುಪಿಯ ಹುಲಿ ವೇಷ, ಮಡಿಕೇರಿಯ ಚೆಂಡೆ ಮೇಳ, ಪಟ್ಟದ ಕುಣಿತ, ಲಿಂಗಧೀರ ಕುಣಿತ, ಡೊಳ್ಳು ಕುಣಿತ ಸೇರಿದಂತೆ ಇತರೆ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿತು. ಪೊಲೀಸ್ ಬ್ಯಾಂಡ್, ಅಶ್ವಾರೋಹಿ ದಳ, ಜೋಕರ್ ವೇಷಧಾರಿ ಸೇರಿದಂತೆ ಹಲವು ತಂಡಗಳು ಮೆರವಣಿಗೆಯ ಕಳೆಯನ್ನು ಇಮ್ಮಡಿಗೊಳಿಸಿತು.

ಸಾರ್ವಜನಿಕ ಪ್ರಕಟಣೆ

ಶ್ರೀ B. P. Udayaraje Urs ತಂದೆ Nagesh Raj Urs ವಾಸ : #2B 1, Vasu Layout, Dattagalli 3rd Stage, Ramakrishna Nagara, Mysuru 570022 ಇವರ ಹೆಸರು ವಿವಿಧ ದಾಖಲೆಗಳಲ್ಲಿ Udayaraje Urs B P /UdayaRaja Urs BP/BPUdayaRaja Urs / UdayaRaje Urs BP/BP UdayaRaje Urs / B. P. Udayaraja Urs / B. P. Udayaraj Urs / Mr. Belaguthi Palegar Udayaraje Urs ಎಂದು ನಮೂದಾಗಿದೆ. ಮೇಲ್ಕಂಡ ಎಲ್ಲಾ ಹೆಸರುಗಳು ಒಂದೇ ವ್ಯಕ್ತಿಯಾದ ಶ್ರೀ. B.P. Udayaraje Urs ಅವರಿಗೆ ಸೇರಿವೆ ಎಂದು S.Kamala, Notaryಯವರ ಮುಂದೆ ದಿನಾಂಕ: 25.06.2026 ರಂದು ಪ್ರಮಾಣೀಕರಿಸುತ್ತೇನೆ.

ಈ ಪ್ರಕಟಣೆ ಮೈಸೂರು ನಗರದ Dattagalli Extension / Vasu HBCS Layout, Block B1/2B1, House Property No.2, 50ft X 80ft. ಆಸ್ತಿಗೆ ಸಂಬಂಧಿಸಿದೆ. ಯಾರಿಗಾದರೂ ಆಕ್ಷೇಪಣೆ ಇದ್ದಲ್ಲಿ ಪ್ರಕಟಣೆ ದಿನಾಂಕದಿಂದ 7 ದಿನದೊಳಗೆ ಲಿಖಿತವಾಗಿ ಸಂಪರ್ಕಿಸಬೇಕು; ನಂತರ ಯಾವುದೇ ಆಕ್ಷೇಪಣೆ ಪರಿಗಣಿಸಲಾಗುವುದಿಲ್ಲ.

ಸ್ಥಳ: ಮೈಸೂರು
ದಿನಾಂಕ: 25–06–2026
ಪ್ರಕಟಿಸಿದವರು: B.P. Udayaraje Urs
ಮೊಬೈಲ್: 9980298888

ಕಳೆಗುಂದಿದ ಮೈಸೂರಿನ ಕೆ.ಆರ್.ಸರ್ಕಲ್

●ಪಾರಂಪರಿಕ ಶೈಲಿಯ ಅಲಂಕಾರಿಕ ದೀಪಗಳಿಗೆ ಹಾನಿ ●ಬೇಕಾ ಬಿಟ್ಟಿ ಬಿದ್ದಿರುವ ವಿದ್ಯುತ್ ತಂತಿಗಳು ●ನಗರ ಪಾಲಿಕೆ ನಿರ್ಲಕ್ಷ್ಯಕ್ಕೆ ಆಕ್ರೋಶ

ಮೈಸೂರು, ಜೂ.27(ಜಿಎ)–ಮೈಸೂರಿನ ಹೃದಯ ಭಾಗದಲ್ಲಿರುವ ಐತಿಹಾಸಿಕ ಪರಂಪರೆಯ ಪ್ರತೀಕವಾಗಿರುವ ಕೆ.ಆರ್. ವೃತ್ತ (ಕೃಷ್ಣರಾಜ ವೃತ್ತ) ಕಳೆಗುಂದಿದೆ, ಅದರ ಸುತ್ತವಿರುವ ಪಾರಂಪರಿಕ ಶೈಲಿಯ ಅಲಂಕಾರಿಕ ದೀಪಗಳಿಗೆ ಹಾನಿಯಾಗಿದ್ದು, ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರು ಅರಮನೆಗಳು, ವಾಸ್ತು ಶಿಲ್ಪದ ಹೆಗ್ಗುರುತಾಗಿದೆ. ಇದರೊಂದಿಗೆ ವಿಭಿನ್ನ ವೃತ್ತಗಳ ಮೂಲಕವೂ ವಿಶ್ವದ ಗಮನ ಸೆಳೆದಿದೆ. ಇಲ್ಲಿನ ವೃತ್ತಗಳನ್ನು ನೋಡಿಕೊಂಡು ದೇಶದ ವಿವಿಧೆಡೆ ಅವುಗಳ ಮಾದರಿಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಆದರೆ, ಮೈಸೂರಿನಲ್ಲಿರುವ ವೃತ್ತಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡುವಲ್ಲಿ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಸಂಪೂರ್ಣ ವಿಫಲವಾಗಿದ್ದು, ಅದಕ್ಕೆ ಕೆ.ಆರ್.ವೃತ್ತ ಸಾಕ್ಷಿಯಾಗಿದೆ.

ಕೆ.ಆರ್.ವೃತ್ತ ನಿರ್ವಹಣೆ ಕೊರತೆಯಿಂದ ತನ್ನ ಸೌಂದರ್ಯ ಕಳೆದುಕೊಳ್ಳುತ್ತಿದೆ. ಹೆರಿಟೇಜ್ ಶೈಲಿಯ ವಿದ್ಯುತ್ ದೀಪಗಳ ಡೂಮ್‌ಗಳು ಹಾನಿಗೊಳಗಾಗಿರುವುದರ ಜೊತೆಗೆ ಕೆಲವು ಕಡೆ ವಿದ್ಯುತ್ ತಂತಿಗಳಿಗೆ ಯಾವುದೇ ಸುರಕ್ಷತೆ ಇಲ್ಲದೇ ಎಲ್ಲವೂ ವಿದ್ಯುತ್ ಪ್ರವಹಿಸಿಕೊಂಡು ವೃತ್ತದ ಸುತ್ತಲೂ ಬಿದ್ದಿದೆ. ಇದರಿಂದ ಸಾರ್ವಜನಿಕರ ಸುರಕ್ಷತೆ ಬಗ್ಗೆ ಆತಂಕ ಮೂಡಿಸಿದೆ.

ದೂರದೃಷ್ಟಿಯ ಆಡಳಿತಗಾರ ನಾಡಪ್ರಭು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನಲ್ಲಿ ನಿರ್ಮಿಸಲಾದ ಈ ವೃತ್ತ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಯೂ ಕೂಡ ಧೂಳು ಮಯವಾಗಿದೆ. ಇದು ರಾಜ–ಮಹಾರಾಜರಿಗೆ ಅಗೌರವ ತೋರಿದಂತಾಗಿದೆ.

ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಹಾಗೂ ಸ್ಥಳೀಯರು ಭೇಟಿ ನೀಡುವ ಸ್ಥಳವಾಗಿದೆ. ಅಲ್ಲದೆ, ಛಾಯಾಗ್ರಹಣ ಮತ್ತು ಪ್ರೀ–ವೆಡ್ಡಿಂಗ್ ಫೋಟೋಶೂಟ್‌ಗಳಿಗೆ ಇದು ಜನಪ್ರಿಯ ತಾಣವಾಗಿದೆ. ಆದರೆ, ವೃತ್ತದ ಸುತ್ತಲಿನ ಹೆರಿಟೇಜ್ ಶೈಲಿಯ ವಿದ್ಯುತ್ ಕಂಬಗಳ ಮೇಲಿನ ಹಲವು ವಿದ್ಯುತ್ ದೀಪಗಳ ಡ್ಯೂಮ್ ಹಾನಿಗೊಳಗಾಗಿದ್ದರೂ ಅವುಗಳನ್ನು ಇನ್ನೂ ಬದಲಾಯಿಸಿಲ್ಲ. ಇದರಿಂದ ಐತಿಹಾಸಿಕ ಸೌಂದರ್ಯಕ್ಕೆ ಧಕ್ಕೆಯಾಗುತ್ತಿದೆ. ಜೊತೆಗೆ, ಅನಾಥವಾಗಿ ಬಿದ್ದಿರುವ ವಿದ್ಯುತ್ ತಂತಿಗಳನ್ನು ದುರಸ್ತಿ ಮಾಡದಿರುವುದು ಸಾರ್ವಜನಿಕರ ಸುರಕ್ಷತೆಗೆ ಅಪಾಯಕಾರಿಯಾಗುವ ಸಾಧ್ಯತೆಯಿದೆ.

ಕೆ.ಆರ್. ವೃತ್ತದ ನಿರ್ವಹಣೆಯ ಹೊಣೆ ಹೊತ್ತಿರುವ ಮೈಸೂರು ಮಹಾನಗರಪಾಲಿಕೆ (ಎಂಸಿಸಿ) ಇದುವರೆಗೆ ಅಗತ್ಯ ದುರಸ್ತಿ ಕಾರ್ಯಗಳನ್ನು ಕೈಗೊಂಡಿಲ್ಲ ಎಂಬ ಆರೋಪ ಕೇಳಿಬಂದಿದೆ. ಈ ಕುರಿತು 'ಮೈಸೂರು ಮಿತ್ರ' ಸಂಪರ್ಕಿಸಿದಾಗ, ಎಂಸಿಸಿಯ ಕಾರ್ಯಪಾಲಕ ಎಂಜಿನಿಯರ್ (ವಿದ್ಯುತ್) ಎ.ಇ.ದೀಪಕ್ ಪ್ರತಿಕ್ರಿಯಿಸಿ, ದುರಸ್ತಿ ಕಾರ್ಯಕ್ಕಾಗಿ ಶೀಘ್ರದಲ್ಲೇ ಸಿಬ್ಬಂದಿಯನ್ನು ನಿಯೋಜಿಸಲಾಗುವುದು ಎಂದು ತಿಳಿಸಿದ್ದಾರೆ.

ಹಾನಿಗೊಳಗಾದ ಲ್ಯಾಂಪ್ ಶೇಡ್‌ಗಳು ಹಾಗೂ ವಿದ್ಯುತ್ ಉಪಕರಣಗಳನ್ನು ಆದಷ್ಟು ಬೇಗ ದುರಸ್ತಿ ಮಾಡಿ, ವೃತ್ತದ ಮೂಲ ಸೌಂದರ್ಯವನ್ನು ಪುನಃ ಸ್ಥಾಪಿಸಲಾಗುವುದು ಎಂದು ದೀಪಕ್ ಭರವಸೆ ನೀಡಿದ್ದಾರೆ.



ಮೈಸೂರಿನ ಕೆ.ಆರ್.ವೃತ್ತದ ಸುತ್ತವಿರುವ ಪಾರಂಪರಿಕ ಶೈಲಿಯ ಅಲಂಕಾರಿಕ ದೀಪಗಳು ಹಾನಿಯಾಗಿರುವುದನ್ನು ಕಾಣಬಹುದು

ಟ್ರೇಡಿಂಗ್ ಹೆಸರಲ್ಲಿ 2.75 ಕೋಟಿ ಹಣ ಕಳೆದುಕೊಂಡ ಉದ್ಯಮಿ, ಆತನ ಸ್ನೇಹಿತರು

ಜಾರ್ಖಂಡ್ ಮೂಲದ ವ್ಯಕ್ತಿ ಮಾತು ನಂಬಿ ಹಣ ಹೂಡಿಕೆ

ಮೈಸೂರು, ಜೂ.27(ಜಿಎ)– ಟ್ರೇಡಿಂಗ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಲಾಭ ಬರುವುದಾಗಿ ನಂಬಿದ ಉದ್ಯಮಿಯೂ ಆತನ ಪರಿಚಯಸ್ಥರಿಂದ ಹೂಡಿಕೆ ಮಾಡಿಸಿ, ಬರೋಬ್ಬರಿ 2.75 ಕೋಟಿ ಹಣ ಕಳೆದುಕೊಂಡಿರುವ ಸಂಬಂಧ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಜೆ.ಪಿ.ನಗರದ ಉದ್ಯಮಿಗೆ 2025ರ ಜುಲೈನಲ್ಲಿ ಜಾರ್ಖಂಡ್‌ನಲ್ಲಿ ಗೌರವ್‌ಸಿಂಗ್ ರಾಥೋಡ್ ಎಂಬ ವ್ಯಕ್ತಿಯ ಪರಿಚಯವಾಗಿದೆ. ಆತ ಉದ್ಯಮಿಗೆ ಟ್ರೇಡಿಂಗ್ ಬಗ್ಗೆ ವಿವರಿಸಿ, ನಿಮ್ಮ ಹೂಡಿಕೆ ಹಣ ಯಥಾಸ್ಥಿತಿಯಲ್ಲಿರುತ್ತದೆ. ಯಾವಾಗ ಬೇಕಾದರೂ ವಾಪಸ್ ಪಡೆದುಕೊಳ್ಳಬಹುದು ನೀವು ಹೂಡಿಕೆ ಮಾಡಿದ ಹಣಕ್ಕೆ ಪ್ರತಿ ತಿಂಗಳು ಶೇ.30–40ರಷ್ಟು ಲಾಭಾಂಶ ನೀಡುತ್ತೇನೆಂದು ನಂಬಿಸಿದ್ದಾನೆ.

ರಾಥೋಡ್ ಮೋಸದ ಜಾಲಕ್ಕೆ ಒಳಗಾದ ಉದ್ಯಮಿಯೂ 2025ರ ಆಗಸ್ಟ್‌ನಲ್ಲಿ 25 ಲಕ್ಷ ರೂ. ಹಣವನ್ನು ಹಂತ ಹಂತವಾಗಿ ಆತ ತಿಳಿಸಿದ ಖಾತೆಗೆ ಹಾಕಿದ್ದಾನೆ. ತದನಂತರ ಸುಮಾರು 6 ಲಕ್ಷ ರೂ ಹಣವನ್ನು ಹಂತ ಹಂತವಾಗಿ ಲಾಭಾಂಶ ಎಂದು ನೀಡಿ ನಂಬಿಕೆ ಹೆಚ್ಚಿಸಿಕೊಂಡಿದ್ದಾನೆ. ಇದರಿಂದ ಮತ್ತಷ್ಟು ಉತ್ಸುಕನಾದ ಉದ್ಯಮಿಯೂ ತನ್ನ 6 ಮಂದಿ ಪರಿಚಯಸ್ಥರಿಂದ ತಲಾ 25 ಲಕ್ಷ ರೂ. ಗಳಂತೆ ಎರಡು ಕೋಟಿ ರೂ. ಹಣವನ್ನು ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ಹೂಡಿಕೆ ಮಾಡಿದ್ದಾರೆ.

ರಾಥೋಡ್ ಕೇವಲ ಒಂದು ತಿಂಗಳ ಲಾಭಾಂಶವನ್ನು ಮಾತ್ರ ನೀಡಿದ್ದಾನೆ. ಇದರಿಂದ ಬೇಸರ ಗೊಂಡ ಉದ್ಯಮಿ ಲಾಭಾಂಶ ನೀಡು ವಂತೆ ಕರೆಗಳನ್ನು ಮಾಡಿದ್ದು, ರಾಥೋಡ್ ಕೊಡು ವುದಾಗಿ ಸಬೂಬು ಹೇಳಿಕೊಂಡು ಬಂದಿದ್ದಾನೆ.

ಇದರಿಂದ ಅನುಮಾನಗೊಂಡ ಉದ್ಯಮಿ ರಾಥೋಡ್ ಊರಿಗೆ ಭೇಟಿ ನೀಡಿ ಈತನ ಬಗ್ಗೆ ವಿಚಾರಿಸಿದಾಗ ನಿಮ್ಮಂತೆಯೇ ಹಲವಾರು ಜನರಿಗೆ ಟ್ರೇಡಿಂಗ್‌ನಲ್ಲಿ ಲಾಭಾಂಶ ನೀಡುವುದಾಗಿ ನಂಬಿಸಿ ಕೋಟ್ಯಾಂತರ ರೂ. ವಂಚಿಸಿರುವುದಾಗಿ ಗ್ರಾಮಸ್ಥರು ತಿಳಿಸಿದ್ದಾರೆ. ಹೂಡಿಕೆಯಿಂದ ಮೋಸ ಹೋಗಿರುವುದು ಉದ್ಯಮಿಯ ಗಮನಕ್ಕೆ ಬಂದು ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಲಾಭಾಂಶದ ಆಮಿಷ: ಸ್ನೇಹಿತನಿಗೆ ವಂಚನೆ

88.12 ಲಕ್ಷ ಹಣ ಕಳೆದುಕೊಂಡ ವ್ಯಕ್ತಿ ಸೆನ್ ಠಾಣೆಗೆ ದೂರು

ಮೈಸೂರು, ಜೂ.27(ಜಿಎ)–ಹೂಡಿಕೆಯಿಂದ ಲಾಭಾಂಶ ದೊರೆಯುತ್ತದೆ ಎಂದು ಸ್ನೇಹಿತನ ಮಾತು ನಂಬಿ ವ್ಯಕ್ತಿಯೋರ್ವ 88.12 ಲಕ್ಷ ರೂ ಕಳೆದುಕೊಂಡಿರುವ ಸಂಬಂಧ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ವಿದ್ಯಾನಗರದ ವ್ಯಕ್ತಿಗೆ ಆತನ ಚಾಮರಾಜನಗರದ ಸ್ನೇಹಿತ, ಯುಎಸ್ ಕ್ಲೈಂಟ್ ಪ್ಯಾಟ್ನರ್ ಕಂಪನಿಯಲ್ಲಿ ಆಡೀಟ ಆದಾಯ ತೆರಿಗೆ ರಿಟರ್ನ್ ಫೈಲ್ ಮಾಡಿದರೆ ಹೆಚ್ಚಿನ ಲಾಭಾಂಶ ಪಡೆದು ಕೊಳ್ಳಬಹುದು ನನ್ನ ಬಳಿ ಲೈಸೆನ್ಸ್ ಇದೆ. ಶೇ.40ರಿಂದ50ರಷ್ಟು ಲಾಭ ಕೊಡಿಸುತ್ತೇನೆ ಎಂದು ನಂಬಿಸಿ 2025ರ ಮೇ 10ರಿಂದ 2025ರ ನವೆಂಬರ್‌29 ರವರೆಗೆ 20,69,400 ಹಣವನ್ನು ವಿವಿಧ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡು ನಂತರ ಸ್ವಲ್ಪ ಲಾಭ ನೀಡಿ ನಂಬಿಸಿದ್ದಾನೆ. ನಂತರ 30 ಲಕ್ಷ ರೂ. ಬ್ಯಾಂಕ್‌ನಲ್ಲಿ ಲಾಕ್ ಆಗಿದೆ ಅದನ್ನು ಅನ್‌ಲಾಕ್ ಮಾಡಿಸಲು ಬ್ಯಾಂಕ್ ಮ್ಯಾನೇಜರ್, ಐಟಿ ಅಧಿಕಾರಿ ಮತ್ತು ಬ್ಯಾಕ್ ಎಂಡ್ ಟೀಮ್‌ಗೆ ಹಣ ನೀಡಬೇಕು ಎಂದು ಸುಳ್ಳು ಹೇಳಿ 2026ರ ಮೇ 15ರವರೆಗೆ 67,42,997 ರೂ ಹಣವನ್ನು ಆನ್‌ಲೈನ್ ಮೂಲಕ ಹಾಕಿಸಿಕೊಂಡಿದ್ದಾನೆ. ಹೀಗೆ ಬರೋಬ್ಬರಿ 88,12,397 ರೂ. ವಂಚಿಸಿರುವ ಸಂಬಂಧ ಸೆನ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.



ಲೋನ್ ಕೊಡಿಸುವುದಾಗಿ ನಂಬಿಸಿ ಖಾತೆ ತೆರೆಸಿ, ಸೈಬರ್ ಕ್ರೈಂಗೆ ಬಳಕೆ

ದೂರು ನೀಡಿದ ಮಹಿಳೆ

ಮೈಸೂರು, ಜೂ.27(ಜಿಎ)–ಲೋನ್ ಕೊಡಿಸುವುದಾಗಿ ಮಹಿಳೆಯೊಬ್ಬರ ದಾಖಲೆಗಳನ್ನು ದುರ್ಬಳಕೆ ಮಾಡಿ ಕೊಂಡಿರುವ ಸಂಬಂಧ ವ್ಯಕ್ತಿಯೋರ್ವನ ವಿರುದ್ಧ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ರಾಜೀವನಗರದ 45 ವರ್ಷದ ಮಹಿಳೆಯು ಎರಡು ವರ್ಷದ ಹಿಂದೆ ಎಸ್.ಆರ್. ಮೊಹಲ್ಲಾದಲ್ಲಿರುವ ಕರ್ನಾಟಕ ಬ್ಯಾಂಕ್‌ನಲ್ಲಿ ಖಾತೆ ತೆರೆಯಲು ತೆರಳಿದ್ದಾಗ ಬ್ಯಾಂಕಿನ ಬಳಿ ಇದ್ದ ವ್ಯಕ್ತಿಯೊಬ್ಬ ತಾನು ರಾಜೀವ್‌ನಗರದ ನಿವಾಸಿ ಎಂದು ಪರಿಚಯಿಸಿಕೊಂಡು ನಿಮಗೆ ಸರ್ಕಾರದಿಂದ ಸಬ್ಸಿಡಿ ಲೋನ್ ಕೊಡಿಸುತ್ತೇನೆ ಎಂದು ನಂಬಿಸಿ ಮಹಿಳೆಯಿಂದ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಪಡೆದುಕೊಂಡು ಲೋನ್ ಬರುವುದಾಗಿ ಬ್ಯಾಂಕ್ ಖಾತೆ ತೆರೆಸಿದ್ದಾನೆ. ಖಾತೆ ತೆರೆದ ನಂತರ ಮಹಿಳೆಗೆ ಬ್ಯಾಂಕ್ ಪಾಸ್‌ಬುಕ್, ಎಟಿಎಂ ಕಾರ್ಡ್ ಇತರೆ ದಾಖಲೆಗಳನ್ನು ನೀಡದೆ ಆಕೆಯ ಹೆಸರಿನ ಖಾತೆಯನ್ನು ಸೈಬರ್ ಅಪರಾಧ ಪ್ರಕರಣಗಳಲ್ಲಿ ಬಳಸಿಕೊಂಡಿರುವುದು ತಿಳಿದು ಬಂದು ಮಹಿಳೆಯೂ ಸೆನ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ.

8 ಮಂದಿ ಜೂಜುಗಾರರ ಬಂಧನ

ಮೈಸೂರು, ಜೂ.27(ಜಿಎ)–ಕೆಎಸ್‌ಆರ್‌ಟಿಸಿಗೆ ಸೇರಿದ ಜಾಗದಲ್ಲಿ ಜೂಜಾಡುತ್ತಿದ್ದ 8 ಮಂದಿಯನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡಿರುವ ನರಸಿಂಹರಾಜ ಪೊಲೀಸರು ಪಣಕ್ಕಿರಿಸಿದ ಹಣವನ್ನು ವಶಪಡಿಸಿಕೊಂಡಿದ್ದಾರೆ. ಜೂ.21 ರಂದು ರಾತ್ರಿ 10.30ರ ವೇಳೆಯಲ್ಲಿ ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಹನುಮಂತನಗರದಲ್ಲಿರುವ ಕೆಎಸ್‌ಆರ್‌ಟಿಸಿಗೆ ಸೇರಿದ ಖಾಲಿ ಜಾಗದಲ್ಲಿ ಅಂದರ್ ಬಾಹರ್ ಜೂಜಾಡುತ್ತಿದ್ದ 8 ಮಂದಿಯನ್ನು ಬಂಧಿಸಿದ್ದಾರೆ.

ಮೈಸೂರಿನ ಶ್ರೀ ಸೋಸಲೇ ವ್ಯಾಸರಾಜ ಮಠಕ್ಕೆ ಶ್ರೀ ವಿದ್ಯಾ ವಿಜಯ ತೀರ್ಥ ಸ್ವಾಮೀಜಿ ಉತ್ತರಾಧಿಕಾರಿ ಮಾಡುವಂತೆ ಒತ್ತಾಯ

ಮೈಸೂರು, ಜೂ.27(ಜಿಎ)–ಮೈಸೂರಿನ ಶ್ರೀ ಸೋಸಲೇ ವ್ಯಾಸರಾಜ ಮಠಕ್ಕೆ ಉತ್ತರಾಧಿಕಾರಿಯಾಗಿ ಶ್ರೀ ವಿದ್ಯಾ ವಿಜಯ ತೀರ್ಥ ಸ್ವಾಮೀಜಿ ಅವರನ್ನು ನೇಮಕ ಮಾಡಬೇಕು ಎಂದು ಶ್ರೀ ವ್ಯಾಸರಾಜ ಸೇವಾ ಸಮಿತಿ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಸದಸ್ಯ ಹಾಗೂ ಮಠದ ಭಕ್ತ ಕೆ.ವೇಣುಗೋಪಾಲ್ ಮಾತನಾಡಿ, 800 ವರ್ಷಗಳ ಇತಿಹಾಸ ಇರುವ ಈ ಮಠದಲ್ಲಿ ಹಲವು ವರ್ಷಗಳಿಂದ ಉತ್ತರಾಧಿಕಾರಿ ಇಲ್ಲದೇ ಮಠದ ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದು, ಭಕ್ತರಲ್ಲಿ ತೀವ್ರ ನಿರಾಸೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಉತ್ತರಾಧಿಕಾರಿಯಾಗಿ ಘೋಷಣೆ ಯಾಗಿರುವ ಶ್ರೀ ವಿದ್ಯಾ ವಿಜಯ ತೀರ್ಥ ಸ್ವಾಮೀಜಿ ಅವರನ್ನು ಮಠದ ಉತ್ತರಾಧಿಕಾರಿಯಾಗಿ ನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಮಠದ ಪರಂಪರೆಯಲ್ಲಿ ಹಿಂದೆ ಯಾವುದೇ ಪೀಠಾಧಿಪತಿಗಳು ನ್ಯಾಯಾಲಯಕ್ಕಾಗಲಿ ಅಥವಾ ಅದರ ಆದೇಶಗಳಿಗಾಗಲಿ ಅಗೌರವ ತೋರಿಸಿರುವ ಉದಾಹರಣೆಗಳಿಲ್ಲ. ಮಠದ ಉತ್ತರಾಧಿಕಾರಿಯಾಗಿ ವಿದ್ಯಾ ವಿಜಯ ತೀರ್ಥರನ್ನು ನೇಮಕ ಮಾಡು ವುದಾಗಿ ಮಠದ ಶ್ರೀ ಗಳಾದ ವಿದ್ಯಾಶ್ರೀಶ ತೀರ್ಥರು, ಒಂಭತ್ತು ವರ್ಷ ಕಳೆದರೂ ವಿದ್ಯಾ ವಿಜಯ ತೀರ್ಥರನ್ನು ಮಠದ ಉತ್ತರಾಧಿಕಾರಿಯಾಗಿ ನೇಮಕ ಮಾಡದೇ ನಿರ್ಲಕ್ಷ್ಯ ವಹಿಸಿದ್ದಾರೆ, ಇದರಿಂದ ಮಠದ ಪರಂಪರೆಯಿಂದಲೇ ಮಠದ ಭಕ್ತರಿಗೆ ನೋವಾಗಿದೆ. ಈ ಬಗ್ಗೆ ಮಠದ ಭಕ್ತರು ಶ್ರೀಗಳಿಗೆ ಪತ್ರ ಬರೆದು ಉತ್ತರಾಧಿಕಾರಿ ನೇಮಕ ಪ್ರಕ್ರಿಯೆಯನ್ನು ಪೂರ್ಣ ಗೊಳಿಸುವಂತೆ ಮನವಿ ಮಾಡಿದ್ದಾರೆ. ಆದರೆ ಶ್ರೀಗಳು ಯಾವುದೇ ಕ್ರಮ ವಹಿಸದೇ ನಿರ್ಲಕ್ಷ್ಯವಹಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ನಡುವೆ ಮಠದ ಶ್ರೀಗಳಾದ ವಿದ್ಯಾಶ್ರೀಶ ತೀರ್ಥರು, ಮಠಕ್ಕೆ ಹೊಸ ಉತ್ತರಾಧಿಕಾರಿಯಾಗಿ ತಮ್ಮ ಪೂರ್ವಾಶ್ರಮದ ಮೊಮ್ಮಗನನ್ನು ನೇಮಕ ಮಾಡಿಕೊಳ್ಳಲು ಸಿದ್ದತೆ ನಡೆಸಿದ್ದಾರೆ ಎಂಬ ಗಾಳಿ ಸುದ್ದಿ ಇದ್ದು, ಮಠದ ನಿಯಮದಂತೆ ಕುಟುಂಬದವರನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡಿಕೊಳ್ಳಲು ಅವಕಾಶವಿಲ್ಲ. ಕೂಡಲೇ ಮಠದ ಶ್ರೀಗಳು ಉತ್ತರಾಧಿಕಾರಿಯಾಗಿ ವಿದ್ಯಾ ವಿಜಯ ತೀರ್ಥರನ್ನು ನೇಮಕ ಮಾಡುವ ಮೂಲಕ ಮಠದ ಪರಂಪರೆಯನ್ನು ಎತ್ತಿ ಹಿಡಿಯಬೇಕು ಎಂದು ಮನವಿ ಮಾಡಿದ ಅವರು, ಮಠದ ಉತ್ತರಾಧಿಕಾರಿಯಾಗಿ ವಿದ್ಯಾ ವಿಜಯ ತೀರ್ಥರನ್ನು ನೇಮಕ ಮಾಡದೇ ಇದ್ದರೆ ಮಠದ ಭಕ್ತರ ಪರವಾಗಿ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮುರಳೀಧರ್, ನರಸಿಂಹನ್ ಉಪಸ್ಥಿತರಿದ್ದರು.

ಕೆ.ಎಸ್.ಮಹದೇವಪ್ರಸಾದ್‌ಗೆ ಅಭಿನಂದನೆ



ಮೈಸೂರಿನ ಕುವೆಂಪುನಗರದ ವೀರಶೈವ ಸ್ನೇಹ ಬಳಗದ ವತಿಯಿಂದ ಶ್ರೀರಾಂಪುರದ ಶಿವಭವನದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮ್ಮುಖದಲ್ಲಿ ರಾಜ್ಯ ವಕೀಲ ಪರಿಷತ್ ಸದಸ್ಯರಾಗಿ ಚುನಾಯಿತರಾದ ಮೈಸೂರಿನ ಹಿರಿಯ ವಕೀಲರಾದ ಕೆ.ಎಸ್.ಮಹದೇವಪ್ರಸಾದ್ ಅವರನ್ನು ಗೌರವಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಸುರೇಶ್ ವಾಲಿ, ಕೋಶಾಧ್ಯಕ್ಷ ಪ್ರಸಾದ್ ಬಾಬು, ಕಾರ್ಯದರ್ಶಿ ರವಿಪ್ರಕಾಶ್, ಜಂಟಿ ಕಾರ್ಯದರ್ಶಿ ಶ್ರೀಕಂಠಮೂರ್ತಿ, ಸದಸ್ಯರಾದ ಫಾರೆಸ್ಟ್ ಮಹದೇವಪ್ಪ, ಗುರುಪಾದಸ್ವಾಮಿ, ಬಸವಣ್ಣ, ಜೆ.ಪಿ.ನಿಂಗರಾಜ್ ಇನ್ನಿತರರು ಉಪಸ್ಥಿತರಿದ್ದರು.

ವಾಣಿಜ್ಯ ಅನಿಲ ಸಿಲಿಂಡರ್ ಬೆಲೆ ಇಳಿಕೆಗೆ ಹೋಟೆಲ್ ಮಾಲೀಕರ ಸಂಘ ಆಗ್ರಹ

ಮೈಸೂರು, ಜೂ.27– ವಾಣಿಜ್ಯ ಅನಿಲ ಸಿಲಿಂಡರ್ ಬೆಲೆ ಕಡಿಮೆ ಮಾಡುವಂತೆ ಮೈಸೂರು ಹೋಟೆಲ್ ಮಾಲೀಕರ ಸಂಘ ಆಗ್ರಹಿಸಿದೆ. ಈ ಸಂಬಂಧ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಪತ್ರಿಕಾ ಹೇಳಿಕೆ ನೀಡಿದ್ದು, ಅಮೆರಿಕ–ಇರಾನ್ ಯುದ್ಧದ ಪರಿಣಾಮವಾಗಿ ಕಳೆದ 4 ತಿಂಗಳಲ್ಲಿ 19 ಕೆ.ಜಿ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 1,500ವರೆಗೆ ಹೆಚ್ಚಿಸಲಾಗಿದೆ. ಸದ್ಯ ಪರಿಸ್ಥಿತಿ ಸುಧಾರಿಸಿರುವ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಮುಖವಾಗಿದ್ದು, ವಿತರಕರು ಸಿಲಿಂಡರ್‌ಗಳನ್ನು ಅಡೆತಡೆ ಇಲ್ಲದಂತೆ ಯಥೇಚ್ಛವಾಗಿ ಪೂರೈಸಲು ನೀಡಿರುವ ಆದೇಶ ಸ್ವಾಗತಾರ್ಹವಾಗಿದೆ. ಆದರೂ ವಾಸ್ತವ ಪರಿಸ್ಥಿತಿ ಇನ್ನೂ ಕಠಿಣವಾಗಿದೆ. ಡೀಸೆಲ್ ಮತ್ತು ಪೆಟ್ರೋಲ್ ಬೆಲೆ ಏರಿಕೆಯಿಂದಾಗಿ ದಿನಸಿ, ಅಡುಗೆ ಎಣ್ಣೆ ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಬೆಲೆ, ಸಾರಿಗೆ ವೆಚ್ಚ ಗಣನೀಯವಾಗಿ ಏರಿಕೆಯಾಗಿರುವುದರಿಂದ ಆತಿಥ್ಯ ಉದ್ಯಮ ನಡೆಸುವುದು ಅತ್ಯಂತ ಕಷ್ಟಕರವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರವು ವಾಣಿಜ್ಯ ಸಿಲಿಂಡರ್ ಬೆಲೆಯನ್ನು ತಕ್ಷಣವೇ ಇಳಿಕೆ ಮಾಡಬೇಕೆಂದು ನಮ್ಮ ಸಂಘವು ಬಲವಾಗಿ ಆಗ್ರಹಿಸುತ್ತದೆ. ಇದರಿಂದ ಸಾರ್ವಜನಿಕರಿಗೂ ಅನುಕೂಲವಾಗುವುದರಿಂದ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.



ಸಿ.ನಾರಾಯಣಗೌಡ

ದಟ್ಟಗಳ್ಳಿ ರೆಸ್ಟೋಬಾರ್ ಅಗ್ನಿ ದುರಂತ ; ಇಬ್ಬರ ಸಾವು ಪ್ರಕರಣ

ಅಬಕಾರಿ ಡಿಸಿ ಎಸ್.ನಾಗರಾಜಪ್ಪ ಅಮಾನತು

ಮೈಸೂರು,ಜೂ.27(ಪಿಎಂ)– ಮೈಸೂರಿನ ದಟ್ಟಗಳ್ಳಿಯ ನೇತಾಜಿ ವೃತ್ತ ಸಮೀಪದ ಮಾರಾ ರೆಸ್ಟೋಬಾರ್‌ನಲ್ಲಿ ಜೂ.15ರಂದು ಅಗ್ನಿ ದುರಂತ ಸಂಭವಿಸಿ ಇಬ್ಬರು ಸಾವನ್ನಪ್ಪಿದ್ದ ಪ್ರಕರಣ ಸಂಬಂಧ ಘಟನೆ ನಡೆದು ವಾರಕ್ಕೂ ಹೆಚ್ಚು ಕಾಲದ ಬಳಿಕ ಸರ್ಕಾರ, ಮೈಸೂರು ಅಬಕಾರಿ ಡಿಸಿ ಎಸ್.ನಾಗರಾಜಪ್ಪ ಅವರನ್ನು ಅಮಾನತುಗೊಳಿಸಿದೆ.



ಕಟ್ಟಡದ ರೂಫ್‌ಟಾಪ್‌ನಲ್ಲಿ ಅನುಮತಿ ಪಡೆಯದೇ ಒಣ ಹುಲ್ಲು, ಗರಿಗಳು ಹಾಗೂ ಬಿದಿರಿನಿಂದ ಅಲಂಕರಿಸಿ ಮಾರಾ ರೆಸ್ಟೋಬಾರ್ ನಡೆಸುತ್ತಿದ್ದರೂ ಈ ಸಂಬಂಧ ಪರಿಶೀಲಿಸದೇ ಕರ್ತವ್ಯ ಲೋಪ ಎಸಗಿರುವ ಆರೋಪದಡಿ ನಾಗರಾಜಪ್ಪ ಅವರನ್ನು ಮಂಗಳವಾರ ಅಮಾನತುಗೊಳಿಸಿ ಆದೇಶಿಸಲಾಗಿದೆ.

ಇದೇ ದುರಂತ ಸಂಬಂಧ ನಿರ್ಲಕ್ಷ್ಯ ಆರೋಪದಡಿ ಮೈಸೂರು ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕ ಹೆಚ್.ಕೆ.ರಮೇಶ್, ಮೈಸೂರು ವಲಯ ನಂ.3ರ ಅಬಕಾರಿ ನಿರೀಕ್ಷಕ ಆಶಿಶ್, ಅಬಕಾರಿ ಉಪ ನಿರೀಕ್ಷಕರಾದ ರಂಗನಾಥ್ ಮತ್ತು ದಿಲೀಪ್‌ಕುಮಾರ್ ಹಾಗೂ ಕಾನ್‌ಸ್ಟೇಬಲರ್ ರಾಜೇಶ್ ಅವರನ್ನು ಜೂ.17ರಂದು ತಕ್ಷಣ ಜಾರಿಗೆ ಬರುವಂತೆ ಅಮಾನತುಪಡಿಸಿ ಬೆಂಗಳೂರು ಅಬಕಾರಿ ಆಯುಕ್ತರು ಆದೇಶ ಹೊರಡಿಸಿದ್ದರು.

ಮೀಸೆ ತಿರುವಿದ ಪ್ರದೀಪ್ ಈಶ್ವರ್‌ಗೆ ಎಸೆದ ಚಪ್ಪಲಿ ಪೊಲೀಸರ ಮೇಲೆ ಬಿತ್ತು

ಚಿಕ್ಕಬಳ್ಳಾಪುರ: ನಗರದ ಕನ್ನಡ ಭವನದಲ್ಲಿ ನಡೆದ ಕೆಂಪೇಗೌಡ ಜಯಂತಿ ನಾನಾ ನಾಟಕೀಯ ವಿದ್ಯಮಾನಗಳು ನಡೆದಿವೆ.



ಶಾಸಕ ಪ್ರದೀಪ್ ಈಶ್ವರ್ ಪದೇ ಪದೇ ಮೀಸೆ ತಿರುವಿ ಕೂದಲು ಕಿತ್ತು, ಎದೆ ತಟ್ಟಿಕೊಳ್ಳುತ್ತ ನನ್ನ ಏನೂ ಮಾಡಲು ಸಾಧ್ಯವಿಲ್ಲ ಎನ್ನುವ ರೀತಿಯ ಹಾವಭಾವ ಪ್ರದರ್ಶಿಸಿದರು. ಆಗ ವ್ಯಕ್ತಿಯೊಬ್ಬರು ಶಾಸಕರ ಮೇಲೆ ಚಪ್ಪಲಿ ಎಸೆದರು. ಆ ಚಪ್ಪಲಿ ಪೊಲೀಸ್ ಅಧಿಕಾರಿಗಳ ಮೇಲೆ ಬಿತ್ತು. ಬಳಿಕ ಆ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದರು. ಇದರಿಂದ ಒಕ್ಕಲಿಗ ಸಮುದಾಯ ಮತ್ತಷ್ಟು ಕೆರಳಿತು. ಸ್ಥಳದಲ್ಲಿ ಬಿಗುವಿನ ವಾತಾವರಣ ಉಂಟಾಯಿತು.

ಶಾಸಕ ಪ್ರದೀಪ್ ಈಶ್ವರ್ ಹುಚ್ಚ ಹೆಚ್.ಡಿ.ಕುಮಾರಸ್ವಾಮಿ ಅವರ ಕ್ಷಮೆಕೇಳಿ ಕಾರ್ಯಕ್ರಮದಿಂದ ಹೊರಹೋಗಬೇಕು ಎಂದು ಒಕ್ಕಲಿಗ ಸಮುದಾಯ ಮತ್ತು ಜೆಡಿಎಸ್ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಈ ನಡುವೆ ಜಟಾಪಟಿಯನ್ನು ಶ್ರೀ ಮಂಗಳನಾಥ ಸ್ವಾಮೀಜಿ ತಣ್ಣಗಾಗಿಸಿದರು. ಸಂಸದ ಡಾ.ಕೆ.ಸುಧಾಕರ್ ವೇದಿಕೆಗೆ ಬರುತ್ತಿದ್ದಂತೆ ವಾತಾವರಣ ಮತ್ತಷ್ಟು ಬಿಗುವಾಯಿತು. ಸುಧಾಕರ್ ಮಾತನಾಡಿದರು. ಆದರೆ ಶಾಸಕ ಪ್ರದೀಪ್ ಈಶ್ವರ್ ಭಾಷಣಕ್ಕೆ ಅಡ್ಡಿಪಡಿಸಿದರು.

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಿಂದ 'ನುವಾ' ವಜ್ರ ಸಂಗ್ರಹ ಅನಾವರಣ

ಮೈಸೂರು, ಜೂನ್ 27– 'ನುವಾ' ಎಂಬ ಹೊಸ ನೈಸರ್ಗಿಕ ವಜ್ರಾಭರಣ ಸಂಗ್ರಹಗಳನ್ನು ಮೈಸೂರಿನ ಬಿಎನ್ ರಸ್ತೆಯ ಸಬ್ ಅರ್ಬನ್ ಬಸ್ ನಿಲ್ದಾಣದ ಬಳಿ ಇರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಮಳಿಗೆಯಲ್ಲಿ ಅನಾವರಣ ಗೊಳಿಸಲಾಯಿತು.

ನುವಾ ನ್ಯಾಚುರಲ್ ಡೈಮಂಡ್ ಕಲೆಕ್ಷನ್ ಪ್ರಕೃತಿಯಲ್ಲಿ ಕಂಡುಬರುವ ಸಂಕೀರ್ಣ ಮಾದರಿಗಳು, ವಿನ್ಯಾಸಗಳು ಮತ್ತು ಸೂಕ್ಷ್ಮ ವಿವರಗಳಿಂದ ಪ್ರೇರಿತವಾಗಿದ್ದು, ಸಾಮಾನ್ಯವಾಗಿ ಗಮನಕ್ಕೆ ಬಾರದ ಸೂಕ್ಷ್ಮ ವಿವರಗಳು, ರೇಖೆಗಳು ಮತ್ತು ಜೇನುಗೂಡುಗಳ ಆಕರ್ಷಕ ಲಯದಿಂದ ಹಿಡಿದು, ಭೂಮಿಯೇ ರೂಪಿಸಿದ ಸಹಜ ವಿನ್ಯಾಸಗಳನ್ನು ಈ ಕಲೆಕ್ಷನ್ ಅನಾವರಣಗೊಳಿಸಲಿದೆ.

18 ಕ್ಯಾರೆಟ್, 14 ಕ್ಯಾರೆಟ್ ಚಿನ್ನದಲ್ಲಿ ವಿನ್ಯಾಸಗೊಳಿಸಲಾದ ಈ ಕಲೆಕ್ಷನ್‌ನಲ್ಲಿ ನೈಸರ್ಗಿಕ ವಜ್ರಗಳನ್ನು ಬಣ್ಣದ ರತ್ನಗಳು, ಸೆರಾಮಿಕ್ ಕಲರ್ ಎನಾಮೆಲಿಂಗ್, ಮಲ್ಟಿ ಟೋನ್ ರೋಡಿಯಮ್ ಫಿನಿಶಿಂಗ್‌ನಿಂದ ತಯಾರಿಸಲಾಗಿದೆ. ಈ ಆಭರಣಗಳು ಬಹುಮುಖ ಹಾಗೂ ವಿವಿಧ ಸಂದರ್ಭಗಳಲ್ಲಿ ಧರಿಸಲು ಸೂಕ್ತವಾಗಿವೆ.

ಈ ಸಂಗ್ರಹದ (ಕಲೆಕ್ಷನ್) ಭಾಗವಾಗಿ, ಖ್ಯಾತ ನಟಿ ಕರೀನಾ ಕಪೂರ್ ಖಾನ್ ಅವರು 'ನುವಾ'ದ ರಾಯಭಾರಿಯಾಗಿ ಮುಂದುವರಿಯುತ್ತಿದ್ದಾರೆ. ಸಹಜವಾದ ಲಾವಣ್ಯ, ಆತ್ಮವಿಶ್ವಾಸ ಮತ್ತು ಚಿರಕಾಲ ಉಳಿಯುವ ಆಕರ್ಷಣೆಗೆ ಹೆಸರುವಾಸಿಯಾಗಿರುವ ಅವರು, ಈ ಸಂಗ್ರಹವು ಎತ್ತಿಹಿಡಿಯುವ ವ್ಯಕ್ತಿತ್ವ, ಆಧುನಿಕ ಸ್ತ್ರೀತ್ವ ಮತ್ತು ಕಾಲಾತೀತ ಸೊಬಗಿನ ಸಂಭ್ರಮವನ್ನು ಅತ್ಯುತ್ತಮವಾಗಿ ಪ್ರತಿಬಿಂಬಿಸುತ್ತಾರೆ.



ಎಂ.ಪಿ. ಮಲಬಾರ್ ಗ್ರೂಪ್‌ನ ಅಧ್ಯಕ್ಷ ಅಹಮ್ಮದ್ ಮಾತನಾಡಿ, ಈ ಸಂಗ್ರಹದ ಹೃದಯಭಾಗದಲ್ಲಿ ಪ್ಯಾಟರ್ನ್ ಪ್ಲೇಗೆ ಮೆಚ್ಚುಗೆ ಇದೆ. ಸಂಕೀರ್ಣವಾದ ಟೆಕ್ಸ್ಚರ್‌ಗಳು, ರಚನೆಗಳು ಮತ್ತು ವಿವರಗಳು ನಮ್ಮ ಸುತ್ತಲಿನ ಪ್ರಪಂಚವನ್ನು ಶಾಂತವಾಗಿ ರೂಪಿಸುತ್ತವೆ. ನುವಾ ದೊಂದಿಗೆ ನಾವು ಆ ಸೌಂದರ್ಯವನ್ನು ಆಧುನಿಕ ವಜ್ರ ಸಂಗ್ರಹವಾಗಿ ರೂಪಾಂತರಿಸಲು ಬಯಸಿದ್ದೇವೆ. ಅದು ಅತ್ಯಾಧುನಿಕ, ಬಹುಮುಖ ಮತ್ತು ಇಂದಿನ ಮಹಿಳೆಗೆ ಪ್ರಸ್ತುತವಾಗಿದೆ.

ಪ್ರತಿಯೊಂದು ತುಣುಕು ಸಂಕೀರ್ಣವಾದ ಕರಕುಶಲತೆ ಮತ್ತು ಶ್ರಮರಹಿತ ಸೊಬಗಿನ ನಡುವಿನ ಸಮತೋಲನವನ್ನು ಪ್ರತಿಬಿಂಬಿಸುತ್ತದೆ. ಸಂದರ್ಭಗಳಲ್ಲಿ ಮತ್ತು ತಲೆಮಾರುಗಳಲ್ಲಿ ಧರಿಸಬಹುದಾದ ಮತ್ತು ಮೆಚ್ಚಬಹುದಾದ ಆಭರಣಗಳನ್ನು ಸೃಷ್ಟಿಸುತ್ತದೆ ಎಂದರು. ಈ ವೇಳೆ ಕಾರ್ಯಕ್ರಮದಲ್ಲಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ ಮಳಿಗೆ ವ್ಯವಸ್ಥಾಪಕ ಸುರೇಶ್, ಮುಖ್ಯಸ್ಥರಾದ ಮೊಹಮ್ಮದ್ ಅನ್ಸಾಜ್, ಅತಿಥಿಗಳಾದ ಕುಮಾರಿ ಕುಲ್ಸುಮ್, ಕುಮಾರಿ ಪ್ರೀತಿ, ಕುಮಾರಿ ಸಬಾ ಮತ್ತು ಮಾನಸ ಉಪಸ್ಥಿತರಿದ್ದರು.

ನಾಳೆ ಸಂಗೀತ, ಉಪನ್ಯಾಸ ಕಾರ್ಯಕ್ರಮ

ಮೈಸೂರು,ಜೂ.27– ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ದೀಕ್ಷಿತ್ ಆರೋಗ್ಯ ಧಾಮದಲ್ಲಿ ಜೇಷ್ಠ ಮಾಸದ ಹುಣ್ಣಿಮೆಯ ಅಂಗವಾಗಿ ಜೂ.29 ರಂದು ಸಂಜೆ 6 ಗಂಟೆಗೆ ಭಕ್ತಿ ಸಂಗೀತ, ಆರೋಗ್ಯ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ರಾಘವೇಂದ್ರ ರತ್ನಾಕರ್ ತಂಡದಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಲಿದೆ. ಶಿಕ್ಷಣ ತಜ್ಞ, ಆರೋಗ್ಯ ಕ್ಷೇತ್ರದ ಉದ್ಯಮಿ ಡಾ.ಮುರಳಿ ಆರ್ ನಾಡಿಗ್ ಅವರು, ರೋಗ ಪರೀಕ್ಷೆ ಮತ್ತು ಚಿಕಿತ್ಸೆಯಲ್ಲಿ ನ್ಯೂಕ್ಲಿಯರ್ ಔಷಧಿ ತಂತ್ರಜ್ಞಾನದ ಪಾತ್ರ ಎಂಬ ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಮೈಸೂರು ದಸರಾ ಕಂಬಳ'ಕ್ಕೆ ಮೈದಾನ ಸಜ್ಜುಗೊಳಿಸುವ ಕಾರ್ಯಾರಂಭ

ಗಿಡ–ಮರಗಳ ತೆರವಿಗೆ ಪರಿಸರವಾದಿಗಳ ತೀವ್ರ ಆಕ್ಷೇಪ

ಹಸಿರು ನಾಶದ ವಿರುದ್ಧ ದೂರು; ಪ್ರತಿಭಟನೆ ಎಚ್ಚರಿಕೆ

ಮೈಸೂರು, ಜೂ.27(ಎಂಟಿವೈ)– ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಕರಾವಳಿಯ ಕಂಬಳ ನಡೆಸಲು ನಗರದ ಸಾತಗಳ್ಳಿ ಬಳಿಯ ರಿಂಗ್ ರಸ್ತೆ ಪಕ್ಕದಲ್ಲಿ ಗುರುತಿಸಿರುವ ಜಾಗವನ್ನು ಸ್ವಚ್ಛಗೊಳಿಸುವ ಕಾರ್ಯ ಆರಂಭಿಸಲಾಗಿದ್ದು, ಅಲ್ಲಿದ್ದ ಗಿಡ–ಮರಗಳನ್ನೂ ತೆರವು ಮಾಡಲಾಗುತ್ತಿದೆ ಎಂದು ಪರಿಸರವಾದಿಗಳು ತೀವ್ರ ಅಸಮಧಾನ ವ್ಯಕ್ತಪಡಿಸಿದ್ದಾರೆ.



ಮೈಸೂರು ಕಂಬಳ ನಡೆಸಲು ಉದ್ದೇಶಿಸಿರುವ ಸಾತಗಳ್ಳಿ ಬಳಿಯ ಪ್ರದೇಶವನ್ನು ಸ್ವಚ್ಛಗೊಳಿಸುತ್ತಿರುವುದು.

ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ವಿಟಿಯು ಕಾಲೇಜು ಸಮೀಪದ 23 ಎಕರೆ ಪ್ರದೇಶದಲ್ಲಿ ಅ.18 ಮತ್ತು 19ರಂದು 'ನಮ್ಮ ಕಂಬಳ– ಮೈಸೂರು ದಸರಾ ಕಂಬಳ' ಶೀರ್ಷಿಕೆಯಡಿ ಕಂಬಳ ಉತ್ಸವ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಈಗಾಗಲೇ ಕಂಬಳ ಸಮಿತಿ ಅಧ್ಯಕ್ಷರಾದ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ನೇತೃತ್ವದ ಸಮಿತಿಯು ಸ್ಥಳ ಪರಿಶೀಲಿಸಿ, ಸ್ಥಳವನ್ನು ಅಂತಿಮಗೊಳಿಸಿದೆ. ಈ ಹಿನ್ನೆಲೆಯಲ್ಲಿ ಸಿದ್ಧತಾ ಕಾರ್ಯಗಳಿಗೆ ಚಾಲನೆ ನೀಡಲಾಗಿದ್ದು, ಕಂಬಳ ನಡೆಯುವ ಸ್ಥಳದಲ್ಲಿನ ಮುಳ್ಳಿನ ಗಿಡ–ಮರ, ಇನ್ನಿತರ ಪೊದೆಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಗುತ್ತಿದೆ.

ಇದಕ್ಕೆ ಪರಿಸರವಾದಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈಗಾಗಲೇ ಹಸಿರು ವಲಯದ ಪ್ರಮಾಣ ಕ್ಷೀಣಿಸುತ್ತಿರುವ ಪರಿಣಾಮ ಹವಾಮಾನ ವೈಪರಿತ್ಯದಿಂದಾಗಿ ಜನ ತತ್ತರಿಸುವಂತಾಗಿದೆ. ಆದಾಗ್ಯೂ ಅಭಿವೃದ್ಧಿ ಕಾಮಗಾರಿ ಇನ್ನಿತರ ನೆಪದಲ್ಲಿ ಮರಗಳ ಹನನ ವ್ಯಾಪಕವಾಗಿ ನಡೆಯುತ್ತಿದೆ. ಇದೀಗ ಕಂಬಳದ ನೆಪವೊಡ್ಡಿ ಹಲವು ಗಿಡ–ಮರಗಳನ್ನು ತೆರವುಗೊಳಿಸುತ್ತಿರುವುದು ಸರಿಯಲ್ಲ. ಮೈಸೂರಿನವರು ಕಂಬಳ ನಡೆಸುವಂತೆ ಕೇಳಿರಲಿಲ್ಲ. ಆಸಕ್ತರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವ ಕಂಬಳಕ್ಕೆ ತೆರಳುತ್ತಾರೆ. 2 ದಿನಗಳ ಕಂಬಳಕ್ಕಾಗಿ ಗಿಡ–ಮರಗಳನ್ನು ನಾಶ ಮಾಡುವುದು ಎಷ್ಟು ಸರಿ. ಮರಗಳ ಹನನ ವಿರೋಧಿಸಿ ದೂರು ನೀಡುವುದರೊಂದಿಗೆ ಕಂಬಳ ವಿರೋಧಿಸಿ ಪ್ರತಿಭಟನೆ ನಡೆಸುವುದಾಗಿ ಪರಿಸರವಾದಿಗಳು ತಿಳಿಸಿದ್ದಾರೆ.

ಪೋಷಕರೊಂದಿಗೆ ಸಮಾಲೋಚನೆ

ಮೈಸೂರು: ಮೈಸೂರಿನ ಎಸ್‌ಬಿಎಂ ಮತ್ತು ಇತರ ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆಯಲ್ಲಿ ಭಾನುವಾರ(ಜೂ.28) ಸಂಜೆ 4.30ಕ್ಕೆ ಪೋಷಕರು, ಹಿರಿಯರು, ಅಧ್ಯಾಪಕರಿಗಾಗಿ ಆಪ್ತ ಸಮಾಲೋಚನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಇಂದಿನ ಹದಿಹರೆಯದ ಮಕ್ಕಳ ಮನಸ್ಸಿನ ಮೇಲೆ ಹತ್ತಾರು ಒತ್ತಡ ಹೇರುವುದರಿಂದ ಉಂಟಾಗುವ ಪರಿಣಾಮ, ಅತಿಯಾದ ಮೊಬೈಲ್ ಹಾಗೂ ಅಂತರ್ಜಾಲದ ಬಳಕೆಯಿಂದ ಜೊತೆಗಾರರ ಸಹಸ್ಪಂದನ, ಆಚಾರ–ವಿಚಾರಗಳಲ್ಲಿನ ಬದಲಾವಣೆಗಳು ಸೇರಿದಂತೆ ಹತ್ತಾರು ತವಕ, ತಲ್ಲಣಗಳಿಗೆ ಒಳಗಾಗಿರುವ ಪೋಷಕರಿಗಾಗಿ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ತಿಪಟೂರಿನ ಕಲ್ಪತರು ವಿದ್ಯಾಸಂಸ್ಥೆಯ ನಿವೃತ್ತ ಮನಃಶಾಸ್ತ್ರ ಸಹ ಪ್ರಾಧ್ಯಾಪಕಿ ಡಾ.ವಿ.ಮಾಲತಿ ಮಾರ್ಗದರ್ಶನ ನೀಡಲಿದ್ದಾರೆ. ಮಾಹಿತಿಗೆ ಮೊ.ಸಂ. 8971144897, 8310044631 ಸಂಪರ್ಕಿಸಿ.

ನಾಡಪ್ರಭು ಕೆಂಪೇಗೌಡರ ಜಯಂತಿ



ಮೈಸೂರಿನ ನಾಡಪ್ರಭು ಕೆಂಪೇಗೌಡರ ವೃತ್ತದಲ್ಲಿ ನಡೆದ ಕೆಂಪೇಗೌಡರ ಜಯಂತ್ಯೋತ್ಸವದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ಮಾಜಿ ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಎಸ್.ಮಾದೇಗೌಡ, ಕಾವೇರಿ ಆಸ್ಪತ್ರೆ ಮಾಲೀಕ ಡಾ.ಚಂದ್ರಶೇಖರ್, ಉದ್ಯಮಿ ಶಂಕಿಗೌಡ ಸೇರಿದಂತೆ ಹಲವು ಮುಖಂಡರು, ಯರಗನಹಳ್ಳಿ ಯಜಮಾನರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



ಮೆರವಣಿಗೆ....

ಮೈಸೂರಿನಲ್ಲಿ ಶನಿವಾರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯ ಮೆರವಣಿಗೆಯಲ್ಲಿ ತಮ್ಮ ಊರಿನಿಂದ ಸ್ವತಃ ಎತ್ತಿನ ಗಾಡಿ ಓಡಿಸಿಕೊಂಡು ಬಂದ ನಿಖಿಲ್ ಕುಮಾರ ಸ್ವಾಮಿ ಅಭಿಮಾನಿಗಳ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ.

ಬೆಂಗಳೂರಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಅದ್ಧೂರಿ ಕೆಂಪೇಗೌಡರ ಜಯಂತ್ಯೋತ್ಸವ

ನಾಡಪ್ರಭು ಪ್ರತಿಮೆಗೆ ಗೌರವಾರ್ಪಣೆ ಬಳಿಕ ಹಲವು ಸಮಾರಂಭಗಳಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗಿ

ಬೆಂಗಳೂರು, ಜೂ.27– ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆಯೊಂದಿಗೆ ದಾಖಲೆಯ 15 ಲಕ್ಷ ಸಸಿ ನೆಡುವಿಕೆ, ಎಸ್.ಎಂ.ಕೃಷ್ಣ ದಶಪಥ ರಸ್ತೆ ನಾಮಫಲಕ ಅನಾವರಣ, ವಾಕಥಾನ್, ಅಂತರರಾಷ್ಟ್ರೀಯ ಸಾಧಕರಿಗೆ ಕೆಂಪೇಗೌಡ ಪ್ರಶಸ್ತಿ ಪ್ರಧಾನ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಮೂಲಕ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ಬೆಂಗಳೂರು ನಿರ್ಮಿಸಿ, ಪೇಟೆಗಳನ್ನು ಕಟ್ಟಿ, ಕೆರೆಗಳನ್ನು ನಿರ್ಮಿಸಿ ಹೊಸ ಚರಿತ್ರೆ ಸೃಷ್ಟಿಸಿದ ದೂರದೃಷ್ಟಿಯ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ಕಂಚಿನ ಪ್ರತಿಮೆಗೆ ಮೊದಲಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಯಂತ್ಯೋತ್ಸವಕ್ಕೆ ಚಾಲನೆ ನೀಡಿದರು. ಇದೇ ವೇಳೆ ಪ್ರತಿಮೆಯ ಪಾದಸ್ಪರ್ಶಿಸಿ ನಮಸ್ಕರಿಸಿ, ಪುಷ್ಪಾರ್ಚನೆ ಮಾಡಿ ನಮಿಸಿದ ನಂತರ ಪ್ರತಿಮೆ ಪಕ್ಕದ ಥೀಮ್ ಪಾರ್ಕ್ ಅನ್ನು ವೀಕ್ಷಿಸಿದರು.

ಬಳಿಕ ಬೆಂಗಳೂರು ಉತ್ತರ ಯಲಹಂಕ ಒಕ್ಕಲಿಗರ ಸಂಘದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ವೇದಿಕೆ ಕಾರ್ಯಕ್ರಮದಲ್ಲಿ ಒಕ್ಕಲಿಗರ ಸಂಘಕ್ಕೆ ರಿಯಾಯಿತಿ ದರದಲ್ಲಿ ಕೆಎಚ್‌ಬಿ ನಿವೇಶನ ನೀಡುವುದಾಗಿ ಘೋಷಿಸಿದರು. ನಂತರ ವಿಧಾನಸೌಧದ ಮುಂದಿರುವ ಕುದುರೆ ಮೇಲೆ ವಿರಾಜಮಾನರಾದ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಂಪೇಗೌಡರ ಕಂಚಿನ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಕೃತಜ್ಞತಾ ಫಲಕ ಅನಾವರಣ: ಎಸ್.ಎಂ.ಕೃಷ್ಣ ರಸ್ತೆ(ಬೆಂಗಳೂರು–ಮೈಸೂರು ದಶಪಥ ರಸ್ತೆ) ಅಭಿವೃದ್ಧಿಗಾಗಿ ಯಾವುದೇ ವಿವಾದವಿಲ್ಲದೆ ಸ್ವಯಂಪ್ರೇರಿತವಾಗಿ ಭೂಮಿ ನೀಡಿದ ರೈತರು ಮತ್ತು ಸ್ಥಳೀಯರನ್ನು ಗೌರವಿಸುವ ನಿಟ್ಟಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ 'ವಾಲ್ ಆಫ್ ಗ್ರಾಟಿಟ್ಯೂಡ್(ಕೃತಜ್ಞತಾ ಫಲಕ)' ಅನ್ನು ಸಿಎಂ ಶಿವಕುಮಾರ್ ಗಣ್ಯರೊಡಗೂಡಿ ಅನಾವರಣ ಮಾಡಿದರು. ಚಲ್ಲಘಟ್ಟದ ನಾಡಪ್ರಭು ಕೆಂಪೇಗೌಡ ಬಡಾವಣೆ ಬಳಿ ಎಸ್.ಎಂ.ಕೃಷ್ಣ ದಶಪಥ ರಸ್ತೆಯ ಬಳಿ ಬೆಂಗಳೂರಿನ ನಾಲ್ಕು ದಿಕ್ಕುಗಳಿಂದಲೂ ಸಚಿವರುಗಳ ನೇತೃತ್ವದಲ್ಲಿ ತರಲಾದ ಪುರಜ್ಯೋತಿಗಳನ್ನು ಶಿವಕುಮಾರ್ ಸ್ವೀಕರಿಸಿದರು. ನಂತರ ಜ್ಯೋತಿಗಳನ್ನು ಕೆಂಪೇಗೌಡರ ಕೋಟೆ ಪ್ರತಿಕೃತಿ ಎದುರು ಇಡಲಾಯಿತು.

ವಾಕಥಾನ್: ಇದಕ್ಕೂ ಮುನ್ನ ಕೆಂಪೇಗೌಡ ಬಡಾವಣೆ ಬಳಿ ಎಸ್.ಎಂ.ಕೃಷ್ಣ ದಶಪಥ ರಸ್ತೆಯಲ್ಲಿ 10 ಕೆ ರನ್, 5 ಕೆ ವಾಕಥಾನ್ ಏರ್ಪಡಿಸಲಾಗಿತ್ತು. ಸಾವಿರಾರು ಜನ ನೂತನ ರಸ್ತೆಯಲ್ಲಿ ಓಡಿ ಸಂತಸಪಟ್ಟರು. ಬಳಿಕ ಶ್ರೀಮತಿ ಪ್ರೇಮಾ ಕೃಷ್ಣ ಅವರು ಹಾಗೂ ಸಂಪುಟ ಸಹೋದ್ಯೋಗಿಗಳು, ಪರಿಷತ್ ಸದಸ್ಯರ ಜೊತೆಗೂಡಿ ನೂತನ ರಸ್ತೆಯನ್ನು ಉದ್ಘಾಟಿಸಿದರು.

ಬಸವನ ಪಾದ ಸಸಿ ನೆಟ್ಟ ಸಿಎಂ: ಶನಿವಾರ ಬೆಳಗ್ಗೆಯಿಂದಲೇ 50 ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರು ಉತ್ಸಾಹದಿಂದ ಕೆಂಪೇಗೌಡ ಬಡಾವಣೆ, ಶಿವರಾಂ ಕಾರಂತ ಬಡಾವಣೆ ಸೇರಿದಂತೆ ಇತರೆಡೆ ಸುಮಾರು 15 ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದ್ದರು. ಕೇವಲ 12 ಗಂಟೆ ಅವಧಿಯಲ್ಲಿ ಸಸಿ ನೆಡುವ ಕಾರ್ಯವನ್ನು ಪೂರ್ಣಗೊಳಿಸುವ ಮೂಲಕ ದಾಖಲೆ ನಿರ್ಮಿಸಿದರು. ದಶಪಥ ರಸ್ತೆ ಉದ್ಘಾಟನೆ ಬಳಿಕ ಶಿವಕುಮಾರ್ ಅವರು ಸ್ವತಃ ಸ್ಥಳೀಯ ಸಸಿಯಾದ 'ಬಸವನ ಪಾದ' ಗಿಡ ನೆಟ್ಟು ನೀರೆರೆದರು. ಬಿಡಿಎ ವತಿಯಿಂದ ನಡೆದ ಈ ಕಾರ್ಯಕ್ರಮದಲ್ಲಿ ಮಿಯಾವಾಕಿ ಅರಣ್ಯ ಮಾದರಿಯಲ್ಲಿ ಸುಮಾರು 250 ಎಕರೆ ಪ್ರದೇಶದಲ್ಲಿ ಸ್ಥಳೀಯ ಜಾತಿಯ ವಿವಿಧ ಸಸಿಗಳನ್ನು ನೆಡಲಾಯಿತು.

ಪ್ರಶಸ್ತಿ ಪ್ರದಾನ: ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿಗೆ ದೇಶದ ಪ್ರಮುಖ ಕೃಷಿ ಸಂಶೋಧನೆ ಹಾಗೂ ಶಿಕ್ಷಣ ಸಂಸ್ಥೆಯಾಗಿ, ಆಧುನಿಕ ಕೃಷಿ ಹಾಗೂ ನವೀನ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸುವ ಮೂಲಕ ಹೆಸರು ಮಾಡಿರುವ ಜಿಕೆವಿಕೆ, ನಗರ ಯೋಜನಾ ತಜ್ಞರಾಗಿ ಪ್ರಸಿದ್ಧಿ ಹೊಂದಿರುವ ಇಂಜಿನಿಯರ್ ಎಸ್. ವಿಶ್ವನಾಥ್ ಹಾಗೂ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಭಾಜನರಾಗಿದ್ದು, ರಾಹುಲ್ ದ್ರಾವಿಡ್ ವಿದೇಶ ಪ್ರವಾಸದಲ್ಲಿರುವ ಕಾರಣ ಅವರು ಗೈರಾಗಿದ್ದರು. ಜಿಕೆವಿಕೆ ಸಂಸ್ಥೆ ಪರವಾಗಿ ಉಪಕುಲಪತಿಗಳಾದ ಎಸ್.ವಿ.ಸುರೇಶ್ ಪ್ರಶಸ್ತಿ ಸ್ವೀಕರಿಸಿದರು.

ಸಿಲಿಕಾನ್ ಸಿಟಿ ಬೆಂಗಳೂರು ಜಾಗತಿಕ ಮನ್ನಣೆ ಪಡೆಯಲು ನಾಡಪ್ರಭು ಕೆಂಪೇಗೌಡರೇ ಕಾರಣ

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅಭಿಪ್ರಾಯ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಶನಿವಾರ ನಾಡಪ್ರಭು ಶ್ರೀ ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಉದ್ಘಾಟಿಸಿದರು.

ಮೈಸೂರು, ಜೂ.27(ಬಿಎಲ್‌ಯು)– ಕನ್ನಡ ನಾಡಿನ ಜನರು ಮಾತ್ರವಲ್ಲದೆ ದೇಶ ವಿದೇಶದ ಕೋಟ್ಯಾಂತರ ಜನರಿಗೆ ಆಶ್ರಯ ನೀಡಿ ಜಾಗತಿಕ ಮಟ್ಟದಲ್ಲಿ ಸಿಲಿಕಾನ್ ಸಿಟಿ ಬೆಂಗಳೂರು ಪ್ರಖ್ಯಾತಿ ಪಡೆಯಲು ನಾಡಪ್ರಭು ಕೆಂಪೇಗೌಡರೇ ಕಾರಣ ಎಂದು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅಭಿಪ್ರಾಯಪಟ್ಟರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಇಂದು ನಾಡಪ್ರಭು ಶ್ರೀ ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ ಆಯೋಜಿಸಿದ್ದ ಕೆಂಪೇಗೌಡರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೆಂಪೇಗೌಡರು ಬೆಂಗಳೂರು ನಿರ್ಮಾತೃ ಮಾತ್ರವಲ್ಲದೆ ಅಪ್ರತಿಮ ಆಡಳಿತಗಾರರಾಗಿದ್ದರು ಎಂದರು.

ಆಗಿನ ಕಾಲದಲ್ಲೇ ಎಲ್ಲಾ ವರ್ಗದ ಜನರಿಗೆ ಕಸುಬುಗಳಿಗೆ ತಕ್ಕಂತೆ ಪೇಟೆಗಳನ್ನು ನಿರ್ಮಿಸಿದರು. ಜಾತ್ಯಾತೀತ ಮನೋಭಾವದಲ್ಲಿ ಸರ್ವರನ್ನು ಸಮಾನರಾಗಿ ಕಂಡಿದ್ದರು ಎಂದು ಹೇಳಿದರು.

ಸಾಮಾಜಿಕ ಸೇವೆಯ ಕಾರಣದಿಂದ ಕೆಂಪೇಗೌಡರು ನಾಡಿನಾದ್ಯಂತ ಮನೆ ಮಾತಾಗಿದ್ದಾರೆ. ಉತ್ತಮ ರಾಜತಾಂತ್ರಿಕರಾಗಿ ಆದರ್ಶ ಆಡಳಿತ ನೀಡುವ ಮೂಲಕ ಅವರು ನೀಡಿದ ಕೊಡುಗೆ ಅವಿಸ್ಮರಣೀಯ ಎಂದು ಡಾ.ರಾಜಣ್ಣ ತಿಳಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ ನವೀನ್‌ಕುಮಾರ್, ಪ್ರೊ.ಸಿ.ಎಸ್.ಆನಂದ ಕುಮಾರ್, ಹಣಕಾಸು ಅಧಿಕಾರಿ ಎಸ್‌.ನಿರಂಜನ್ ರಾಜ್, ಡೀನ್ ಡಾ.ಎನ್.ಆನಂದಗೌಡ, ಡಾ.ಸಿ.ರಾಮೇಗೌಡ, ಪ್ರೊ.ಎಂ.ರಾಮನಾಥ ನಾಯುಡು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ಕೆಂಪೇಗೌಡರ 517ನೇ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಈ ವೇಳೆ ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಆಚರಣೆ ಸಂಚಾಲಕ ರಾಜಕುಮಾರ್, ಮುಖಂಡರಾದ ಅಪ್ಪಣ್ಣ, ಗೋಪಾಲ್‌ರಾವ್, ಗಿರಿಧರ್, ಗೋಕುಲ್ ಗೋವರ್ಧನ್, ರಮೇಶ್, ಮಾಜಿ ಮೇಯರ್ ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಯು.ಸುಬ್ಬಯ್ಯ, ಲಕ್ಷ್ಮಿ ಕಿರಣ್, ಜಗದೀಶ್, ಪ್ರಮೀಳಾ ಭರತ್, ಮಹಿಳಾ ಮುಖಂಡರಾದ ಹೇಮಾ ನಂದೀಶ್, ಮಂಜುಳಾ, ಶರತ್‌ಕುಮಾರ್, ಜಯಪ್ರಕಾಶ್ (ಜೆಪಿ), ಹೇಮಂತ್, ಸುಮಿತ್ರ ಇನ್ನಿತರರು ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳ ಆಯ್ಕೆ

ಮೈಸೂರು: ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಮೈಸೂರು ಜಿಲ್ಲಾ ಸಮಿತಿಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಎನ್.ಕೆ. ದೇವದಾಸ್, ಕಾರ್ಯಾಧ್ಯಕ್ಷರಾಗಿ ಕೆ.ಎಸ್. ರೇವಣ್ಣ, ಉಪಾಧ್ಯಕ್ಷರಾಗಿ ಎಸ್. ಬಸವರಾಜು, ಜಿ.ಕೆ. ಗುರುರಾಜ್, ಶಿವರಾಘವೇಂದ್ರ, ವೈ. ಮಹದೇವಮ್ಮ, ಆರ್.ದೀಪಾಕ್ಷಿ, ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಆರ್. ಶೇಷಾದ್ರಿ, ಉಪ ಪ್ರಧಾನ ಕಾರ್ಯದರ್ಶಿ ಹೆಚ್.ಬಿ. ರಾಮಕೃಷ್ಣ, ಕಾರ್ಯದರ್ಶಿಗಳಾಗಿ ಕೆ.ಜಿ. ಸೋಮರಾಜೇ ಅರಸು, ಎಂ.ಶಿವಣ್ಣ, ಡಿ.ಸುರೇಶ್, ರಾಮು, ಎಸ್.ಶ್ರೀಧರ್, ಖಜಾಂಚಿಯಾಗಿ ಎಂ.ಜಿ. ಪ್ರಸಾದ್ ಆಯ್ಕೆಯಾಗಿದ್ದಾರೆ.

ಕೆಂಪೇಗೌಡರ ಜಯಂತಿ; ಸ್ವಯಂಪ್ರೇರಿತ ರಕ್ತದಾನ ಶಿಬಿರ

ನಾಡಪ್ರಭು ಜಾತಿ, ಧರ್ಮಾತೀತವಾಗಿ ಸಮಾಜದ ಉನ್ನತಿಗೆ ಶ್ರಮಿಸಿದರು: ಶಾಸಕ ಟಿ.ಎಸ್.ಶ್ರೀವತ್ಸ ಬಣ್ಣನೆ

ಮೈಸೂರು,ಜೂ.27– ನಾಡಪ್ರಭು ಕೆಂಪೇಗೌಡರು ಒಂದು ಸಮುದಾಯ ಅಥವಾ ಧರ್ಮಕ್ಕೆ ಮಾತ್ರ ಸೀಮಿತವಾಗದೆ, ಇಡೀ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದವರು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಕೆಂಪೇಗೌಡ ಅಭಿಮಾನಿ ಬಳಗ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ ಸ್ವಯಂ ಪ್ರೇರಿತ ರಕ್ತದಾನ ಶಿಬಿರದಲ್ಲಿ ದಾನಿಗಳಿಗೆ ಪ್ರಮಾಣ ಪತ್ರ ನೀಡಿ ಅವರು ಮಾತನಾಡಿದರು.

ಕೆಂಪೇಗೌಡರು ಒಕ್ಕಲಿಗ ಸಮುದಾಯದ ಪ್ರಭುಗಳಾಗಿದ್ದರೂ ಅವರೆಂದೂ ಒಂದೇ ಸಮುದಾಯಕ್ಕೆ ಸೀಮಿತವಾದವರಲ್ಲ. ಇದಕ್ಕೆ ಅವರು ಕಟ್ಟಿದ ಬೆಂಗಳೂರು ಮಹಾನಗರವೇ ಸಾಕ್ಷಿ. ಸಮಾಜದ ಪ್ರತಿಯೊಂದು ಸಮುದಾಯದ ಅಭಿವೃದ್ಧಿಗೂ ಶ್ರಮಿಸಿದ್ದರು. ಪೇಟೆಗಳ ನಿರ್ಮಾಣದ ಮೂಲಕ ಎಲ್ಲಾ ಸಮುದಾಯಗಳ ಕುಲಕಸುಬು ಪ್ರೋತ್ಸಾಹಿಸುವುದರ ಜೊತೆಗೆ ವ್ಯಾಪಾರ ವಹಿವಾಟಿನ ಮೂಲಕ ಜೀವನ ಕಟ್ಟಿಕೊಳ್ಳಲು ಅನುವು ಮಾಡಿಕೊಟ್ಟರು. ಕೆಂಪೇಗೌಡರ ಆಡಳಿತ ಇತರ ರಾಜರಿಗೂ ಮಾದರಿಯಾಗಿದ್ದನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದು. ಇಂತಹ ಮಹಾನ್ ನಾಯಕನಿದ್ದ ನಾಡಿನಲ್ಲಿ ಬದುಕುತ್ತಿರುವ ನಾವೆಲ್ಲರೂ ಪುಣ್ಯವಂತರು ಎಂದು ಬಣ್ಣಿಸಿದರು. ಈ ಸಂದರ್ಭದಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪಾಲಿಕೆ ಮಾಜಿ ಸದಸ್ಯ ಜಗದೀಶ್, ಜಯಕರ್ನಾಟಕ ಸಂಘದ ನಗರ ಅಧ್ಯಕ್ಷ ಶ್ರೀ ಹರ್ಷ, ಕಿರಣ್‌ಗೌಡ, ವಾಣೀಶ್, ಪ್ರದೀಪ್‌ಕುಮಾರ್, ಆರ್‌ಎಂಪಿ ಸತೀಶ್, ಪ್ರಭು, ಮತ್ತಿತರರಿದ್ದರು.



ಕೆಂಪೇಗೌಡರ ಜಯಂತಿ ಪ್ರಯುಕ್ತ ನಡೆದ ರಕ್ತದಾನ ಶಿಬಿರದಲ್ಲಿ ಶಾಸಕ ಶ್ರೀವತ್ಸ, ದಾನಿಗಳಿಗೆ ಪ್ರಮಾಣ ಪತ್ರ ನೀಡಿದರು.

ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳಗಲು ಕೆಂಪೇಗೌಡರು ಕಾರಣ ಎಂಬುದೇ ಹೆಮ್ಮೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅಭಿಮತ

ಬೆಂಗಳೂರು, ಜೂ.27(ಕೆಎಂಶಿ)–ರಾಜಧಾನಿ ಬೆಂಗಳೂರು ರಾಷ್ಟ್ರಮಟ್ಟವಲ್ಲದೇ, ಅಂತರರಾಷ್ಟ್ರೀಯ ಮಟ್ಟದಲ್ಲೂ ಖ್ಯಾತಿಗಳಿಸಲು ನಾಡಪ್ರಭು ಕೆಂಪೇಗೌಡರು ಕಾರಣ ಎನ್ನಲು ಹೆಮ್ಮೆ ಎನ್ನಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಸ್ಮರಿಸಿದರು.

ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಸಮಾಜಸೇವಕ ಆರ್.ಪಿ.ರವಿಶಂಕರ್ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, 517 ವರ್ಷಗಳ ನಂತರವೂ ನಾಡಪ್ರಭು ಕೆಂಪೇಗೌಡ ಅವರನ್ನು ನಾವು ನೆನಪಿಸಿಕೊಳ್ಳುತ್ತಿದ್ದೇವೆ. ಅವರು ನಾಡಿಗೆ ಕೊಟ್ಟ ಕೊಡುಗೆ ಊಹಿಸಲು ಅಸಾಧ್ಯ ಎಂದರು.

ನಾಡಪ್ರಭು ಕೆಂಪೇಗೌಡರ ಹೆಸರು ಕರ್ನಾಟಕ ಹಾಗೂ ದೇಶದಲ್ಲಿ ಮಾತ್ರವಲ್ಲದೇ ಇಡೀ ವಿಶ್ವದಲ್ಲಿ ಚರ್ಚೆ ಆಗಬೇಕೆಂಬ ಸದುದ್ದೇಶದಿಂದ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೆಂಪೇಗೌಡ ಅಧ್ಯಯನ ಕೇಂದ್ರಕ್ಕೆ 50 ಕೋಟಿ ರೂ. ನೀಡಿದ್ದರು.

ಪ್ರತಿಮೆ, ಪಾರ್ಕ್ ನಿರ್ಮಾಣಕ್ಕೆ ಹಣ ಕೊಟ್ಟಿದ್ದರು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅವರ ಹೆಸರು ಇಡುವ ಚರ್ಚೆ ಸಂದರ್ಭದಲ್ಲಿ ಕೆಂಪೇಗೌಡರ ಹೆಸರೇ ಶ್ರೇಷ್ಠ ಎಂಬ ತೀರ್ಮಾನವನ್ನೂ ಯಡಿಯೂರಪ್ಪ ತೆಗೆದುಕೊಂಡಿದ್ದರು ಎಂದರು.



ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ವಿಜಯೇಂದ್ರ ಮಾಲಾರ್ಪಣೆ ಮಾಡಿದರು.

ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ್ ಮಾತನಾಡಿ, ನಾಡಪ್ರಭು ಕೆಂಪೇಗೌಡರ ಪ್ರೇರೇಪಣೆ ನಮ್ಮೆಲ್ಲರ ಮೇಲಿರಬೇಕು. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರು ನಾಮಕರಣ ಮಾಡಿದರು ಎಂದರು.

ಯಡಿಯೂರಪ್ಪ ಎರಡನೇ ಬಾರಿಗೆ ಮುಖ್ಯಮಂತ್ರಿ ಆಗಿದ್ದಾಗ, ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ 108 ಅಡಿ ಪ್ರತಿಮೆ ಸ್ಥಾಪನೆಗೆ 65 ಕೋಟಿ ರೂ., ಥೀಮ್ ಪಾರ್ಕ್‌ಗೆ 20 ಕೋಟಿ ರೂ., ನಾಡಪ್ರಭು ಕೆಂಪೇಗೌಡರ ವೀರಸಮಾಧಿಗೆ ಜಮೀನು ಸ್ವಾಧೀನಕ್ಕೆ 10 ಕೋಟಿ ರೂ. ನೀಡಿದ್ದೂ ಎಂದು ವಿವರಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಕೇಂದ್ರಕ್ಕೆ ಅಗತ್ಯ ಹಣ ಬಿಡುಗಡೆ ಮಾಡಿದ್ದರು, ಪ್ರತಿ ಗ್ರಾಮದಿಂದ ಮೃತ್ತಿಕೆಯನ್ನೂ ತರಲಾಗಿತ್ತು, ಇದು ಯಡಿಯೂರಪ್ಪ ಅವರ ಹೃದಯವಂತಿಕೆ ಆಗಿದೆ ಎಂದರು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಧಾನಪರಿಷತ್ ಚುನಾವಣೆಯಲ್ಲಿ ಎನ್‌ಡಿಎ 12 ಶಾಸಕರ ಅಡ್ಡ ದಾರಿ!

● ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರಗೆ ವರದಿ ಸಲ್ಲಿಸಿದ ಸತ್ಯಶೋಧನಾ ಸಮಿತಿ ಅಧ್ಯಕ್ಷ ಸಿ.ಟಿ.ರವಿ ● ಇದರಲ್ಲಿ ಬಿಜೆಪಿಯ–4; ಜೆಡಿಎಸ್‌ನ 8 ಮಂದಿ ಸೇರಿದ್ದಾರೆ

ಬೆಂಗಳೂರು,ಜೂ.27(ಕೆಎಂಶಿ)–ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ 12 ಶಾಸಕರು ಅಡ್ಡ ಮತದಾನ ಮಾಡಿದ್ದಾರೆ ಎಂದು ಬಿಜೆಪಿ ನೇಮಿಸಿದ್ದ ಸತ್ಯ ಶೋಧನಾ ಸಮಿತಿ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಸ್ಪಷ್ಟಪಡಿಸಿದ್ದಾರೆ.

ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸತ್ಯ ಶೋಧನಾ ಸಮಿತಿಯ ಆಂತರಿಕ ವರದಿ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಡ್ಡ ಮತದಾನದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮಿತ್ರ ಪಕ್ಷಗಳ ಒಟ್ಟು 12 ಶಾಸಕರಿಂದ ಅಡ್ಡಮತದಾನ ನಡೆದಿದೆ.

ಇದು ಆಂತರಿಕ ತನಿಖೆಯ ವರದಿಯಾಗಿದ್ದು, ತಾವು ಸಿದ್ಧಪಡಿಸಿದ ವರದಿಯನ್ನು ಪಕ್ಷದ ರಾಜ್ಯಾಧ್ಯಕ್ಷರಿಗೆ ತಲುಪಿಸಿದ್ದೇವೆ. ಬಿಜೆಪಿಯಿಂದ ಮೂವರು ಶಾಸಕರಿಂದ ಅಡ್ಡ ಮತದಾನವಾಗಿದ್ದು, 1 ಮತ ಅಸಿಂಧುವಾಗಿತ್ತು. ಎನ್‌ಡಿಎ ಮಿತ್ರ ಪಕ್ಷ ಜೆಡಿಎಸ್‌ನ 8 ಮತಗಳು ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಚಲಾವಣೆಗೊಂಡಿವೆ. ಜೆಡಿಎಸ್ ಅಭ್ಯರ್ಥಿಗೆ ಮಿತ್ರ ಪಕ್ಷಗಳಿಂದ ನಿಗದಿಪಡಿಸಿದ್ದ 22 ಮತಗಳ ಪೈಕಿ ಚಲಾವಣೆಗೊಂಡಿರುವುದು ಕೇವಲ 14 ಮತಗಳು ಮಾತ್ರ, ಇದರಲ್ಲಿ ಎಂಟು ಸದಸ್ಯರು ಅಡ್ಡ ಮತದಾನ ಮಾಡಿದ್ದಾರೆ. ಅಧಿಕಾರಕ್ಕಾಗಿ ಪಕ್ಷಕ್ಕೆ ಬಂದವರು ಮತ್ತು ಹೊಸದಾಗಿ ಶಾಸಕರಾಗಿ ಆಯ್ಕೆಯಾಗಿರುವ ಕೆಲವರು ಅಡ್ಡ ಮತದಾನ ಮಾಡಿರುವ ಸಾಧ್ಯತೆ ಇದೆ. ಕೆಲವು ಶಾಸಕರಿಗೆ ದೂರವಾಣಿ ಕರೆ ಮಾಡಿ ಮಾತನಾಡಿದೆ, ಮತ್ತೆ ಕೆಲವು ಶಾಸಕರನ್ನು ಮುಖತಃ ಭೇಟಿ ಮಾಡಿ ಅಭಿಪ್ರಾಯ ಸಂಗ್ರಹಿಸಿದೆ. ಜೆಡಿಎಸ್ ಮುಖ್ಯ ಸಚೇತಕರ ಜೊತೆಗೂ ಮಾತನಾಡಿ ವರದಿ ಸಿದ್ಧಪಡಿಸಲಾಗಿದೆ.

ಶಾಸಕರ ನಿಷ್ಠೆ ಪರೀಕ್ಷೆ: ಜೆಡಿಎಸ್ ನಾಯಕರಿಗೆ ಚುನಾವಣೆ ಗೆಲ್ಲುವುದಕ್ಕಿಂತ ತಮ್ಮ ಪಕ್ಷದ ಶಾಸಕರ ನಿಷ್ಠೆ ಪರೀಕ್ಷಿಸುವುದು ಮುಖ್ಯವಾಗಿತ್ತು. ಹಾಗೆಯೇ ಮೈತ್ರಿ ಪಕ್ಷ ಯಾವ ರೀತಿ ವರ್ತಿಸುತ್ತದೆ ಎನ್ನುವುದನ್ನು ಪರಿಶೀಲಿಸುವುದು ಆದ್ಯತೆಯಾಗಿತ್ತು. ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿ ಉಭಯ ಪಕ್ಷಗಳ ಮುಖಂಡರು ಕುಳಿತು ಮಾತನಾಡಿ ಎಲ್ಲ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಿರುವುದಾಗಿ ತಿಳಿದುಬಂದಿದೆ.



ಬಿಜೆಪಿ ನೇಮಿಸಿದ್ದ ಸತ್ಯಶೋಧನಾ ಸಮಿತಿ ಅಧ್ಯಕ್ಷ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ವರದಿ ಸಲ್ಲಿಸಿದರು.

ಈ ಗೊಂದಲದ ಲಾಭವನ್ನು ಪಡೆದುಕೊಂಡ ಹೊಸದಾಗಿ ಆಯ್ಕೆಯಾಗಿರುವ ಕೆಲವು ಶಾಸಕರು ಮತ್ತು ಅಧಿಕಾರಕ್ಕಾಗಿ ಪಕ್ಷಕ್ಕೆ ಬಂದವರು ಸುಲಭವಾಗಿ ಆಡಳಿತ ಪಕ್ಷದ ಆಮಿಷಕ್ಕೆ ಬಲಿಯಾದರು. ಚುನಾವಣೆಗೂ ಮುನ್ನ ನಾಯಕರು ನಿಗಾವಹಿಸಿದ್ದರೆ ಅಡ್ಡ ಮತದಾನ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಪಕ್ಷದ ತತ್ವ, ಸಿದ್ಧಾಂತಗಳ ಬಗ್ಗೆ ಹೊಸದಾಗಿ ಬಂದವರಿಗೆ ಅರಿವು ಮೂಡಿಸುವ ಕೆಲಸ ಮಾಡಬೇಕು ಎಂದು ಶಿಫಾರಸು ಮಾಡಲಾಗಿದೆ. ವರದಿಯನ್ನು ಕೋರ್ ಕಮಿಟಿ ಸಭೆಯಲ್ಲಿ ಪರಿಶೀಲಿಸಿದ ನಂತರ ಪಕ್ಷದ ವರಿಷ್ಠರಿಗೆ ಸಲ್ಲಿಸಲಾಗುತ್ತದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು.

ಇದು ಪ್ರಜಾಪ್ರಭುತ್ವ ವಿರೋಧಿ ನಡೆ, ಅಡ್ಡ ಮತಗಳು ಕಾಂಗ್ರೆಸ್‌ನ ಅಭಿವೃದ್ಧಿ ಅಥವಾ ಸಿದ್ಧಾಂತಕ್ಕೆ ಬಿದ್ದಿರುವ ಮತಗಳಲ್ಲ. ಬದಲಾಗಿ ಅನೈತಿಕವಾಗಿ ಚಲಾವಣೆಯಾದ ಮತಗಳು, ಕಾಂಗ್ರೆಸ್‌ನವರು ಇದನ್ನು ತಮ್ಮ ಅಭಿವಾನಕ್ಕೆ ಬಿದ್ದ ಮತ ಎಂದು ಭಾವಿಸಬಾರದು. ಕಾಂಗ್ರೆಸ್ ಅಭ್ಯರ್ಥಿ ಪರ ಮಿತ್ರ ಪಕ್ಷಗಳ ಶಾಸಕರು ಸ್ವಯಂ ಪ್ರೇರಿತರಾಗಿ ಅಡ್ಡ ಮತದಾನ ಮಾಡಿಲ್ಲ, ಬದಲಿಗೆ ಆಮಿಷ ಒಡ್ಡಿ ಮತ ಕದಿಯಲಾಗಿದೆ. ಇದು ಆ ಪಕ್ಷಕ್ಕೆ ಶೋಭೆ ತರುವ ವಿಚಾರ ಅಲ್ಲ ಎಂದರು.

ಹಿಂದೆಲ್ಲಾ ಬಿಜೆಪಿ ಮೇಲೆ ಆರೋಪ ಮಾಡುತ್ತಿದ್ದ ಕಾಂಗ್ರೆಸ್ ನಾಯಕರು ಇನ್ನು ಮುಂದೆ ಅಡ್ಡ ಮತದಾನದ ಬಗ್ಗೆ ಮಾತನಾಡುವ ನೈತಿಕ ಹಕ್ಕನ್ನು ಈ ಮೂಲಕ ಕಳೆದುಕೊಂಡಿದ್ದಾರೆ. ಬೇರೆ ರಾಜ್ಯಗಳಲ್ಲಿ ಅಡ್ಡ ಮತದಾನ ಆದಾಗ ಕಾಂಗ್ರೆಸ್‌ನವರು ಪ್ರಜಾ ಪ್ರಭುತ್ವದ ಮೌಲ್ಯಗಳಿಗೆ ವಿರುದ್ಧ ಅಂತ ಉಪದೇಶ ಮಾಡುತ್ತಾರೆ. ಆದರೆ, ಇಲ್ಲಿ ಅಡ್ಡ ಮತದಾನದ ಮೂಲಕ ಪ್ರಜಾಪ್ರಭುತ್ವವನ್ನೇ ಅಪಮೌಲ್ಯಗೊಳಿಸಿದ್ದಾರೆ. ಇನ್ನು ಮುಂದೆ ಅವರಿಗೆ ಅಡ್ಡ ಮತದಾನ ಪ್ರಶ್ನಿಸುವ ಯಾವುದೇ ನೈತಿಕತೆ ಇರುವುದಿಲ್ಲ.

ಆಂತರಿಕ ತನಿಖೆಗೆ ನನ್ನೊಂದಿಗೆ ಮಾಜಿ ಸಚಿವ ಎನ್.ಮಹೇಶ್, ಶಾಸಕ ಮಹೇಶ್ ಟೆಂಗಿನಕಾಯಿ ಸೇರಿ ಮೂವರ ಸಮಿತಿ ರಚಿಸಲಾಗಿತ್ತು. ಮೂವರೂ ಚರ್ಚಿಸಿ, ಸಮ್ಮತವಾದ ಅಂಶಗಳನ್ನು ಮಾತ್ರ ವರದಿಯಲ್ಲಿ ಉಲ್ಲೇಖಿಸಿ ಸಿದ್ಧಪಡಿಸಿದ್ದೇವೆ. ಅಡ್ಡಮತದಾನ ಮಾಡಿದವರ ಬಗ್ಗೆ ಮಾಧ್ಯಮ ಮತ್ತು ಸಾರ್ವಜನಿಕ ವಲಯದಲ್ಲಿ ಚರ್ಚಿತವಾದ ಸಂಶಯಾಸ್ಪದ ಶಾಸಕರ ಪಟ್ಟಿ ಮಾಡಿ ಅವರೊಂದಿಗೂ ಸಮಾಲೋಚಿಸಿದ್ದೇವೆ. ಅಭ್ಯರ್ಥಿಗಳ ಜೊತೆ ಮಾತುಕತೆ ನಡೆಸಿ ಸದಭಿಪ್ರಾಯ ಸಂಗ್ರಹಿಸಲಾಗಿದೆ. ಜೆಡಿಎಸ್ ಮುಖಂಡರು, ವಿರೋಧ ಪಕ್ಷದ ಮುಖಂಡರು, ಮುಖ್ಯ ಸಚೇತಕರ ಜೊತೆ ಸಮಾಲೋಚನೆ ನಡೆಸಿ, ಸ್ಥಳೀಯ ಹಾಗೂ ಸಾಂದರ್ಭಿಕ ಮಾಹಿತಿ ಪಡೆದಿದ್ದೇವೆ. ಚುನಾವಣೆ ವೇಳೆ ಯಾವ ಎಚ್ಚರಿಕೆ ವಹಿಸಬೇಕಿತ್ತು. ಯಾವ ಎಚ್ಚರಿಕೆ ವಹಿಸಿಲ್ಲ ಎಂಬುದು ವರದಿಯಲ್ಲಿದೆ. ಇದು ಆಂತರಿಕ ತನಿಖೆ ಆಗಿರುವುದರಿಂದ ಹೆಚ್ಚಿನ ಮಾಹಿತಿ ನೀಡಲಾಗದು ಎಂದರು.

ಜಿಲ್ಲಾ ನ್ಯಾಯಾಲಯ, ಕೇಂದ್ರೀಯ ವಿದ್ಯಾಲಯಕ್ಕೆ ಬಾಂಬ್ ಬೆದರಿಕೆ

ನ್ಯಾಯಾಲಯಕ್ಕೆ ಇದು 3ನೇ ಬಾರಿ; ಮರುಕಳಿಸುತ್ತಿರುವ ಹುಸಿ ಬಾಂಬ್ ದೃಷ್ಟಾಂತ





ನ್ಯಾಯಾಲಯದ ಆವರಣದಲ್ಲಿ ನ್ಯಾಯಾಧೀಶರೊಂದಿಗೆ ಪೊಲೀಸರು ಸಮಾಲೋಚನೆ ನಡೆಸುತ್ತಿರುವುದು. ಕೇಂದ್ರೀಯ ವಿದ್ಯಾಲಯದ ಮುಂದೆ ಪೋಷಕರು ವಿದ್ಯಾರ್ಥಿಗಳು ಆತಂಕದಿಂದ ವೀಕ್ಷಿಸುತ್ತಿದ್ದಾರೆ.

ಮಡಿಕೇರಿ,ಜೂ.27–ಜಿಲ್ಲಾ ನ್ಯಾಯಾಲಯಕ್ಕೆ ಮತ್ತು ಸಮೀಪದಲ್ಲೇ ಇರುವ ಕೇಂದ್ರೀಯ ವಿದ್ಯಾಲಯಕ್ಕೆ ಕಿಡಿಗೇಡಿಗಳು ಬಾಂಬ್ ಬೆದರಿಕೆಯ ಇ-ಮೇಲ್ ಸಂದೇಶ ರವಾನಿಸಿದ್ದಾರೆ.

ನಿನ್ನೆ ರಾತ್ರಿ 9.55ರ ಸಮಯದಲ್ಲಿ ಔಟ್‌ಲುಕ್ ಮೇಲ್ ಮೂಲಕ ಸಂದೇಶ ರವಾನಿಸಲಾಗಿದೆ. ಜಿಲ್ಲಾ ನ್ಯಾಯಾಧೀಶರ ಇ-ಮೇಲ್‌ಗೆ ಬಾಂಬ್ ಬೆದರಿಕೆ ಸಂದೇಶ ರವಾನಿಸಲಾಗಿತ್ತು. ಪ್ರವಾದಿ ಅವರನ್ನು ಅವಹೇಳನ ಮಾಡಿದ್ದಾರೆ, ತಮಿಳುನಾಡು ಮಾಜಿ ಸಿ.ಎಂ ಸ್ಟಾಲಿನ್ ಬಗ್ಗೆಯೂ ಇಲ್ಲಸಲ್ಲದ ಆರೋಪಗಳನ್ನು ಮಾಡಿರುವುದು ದುರ್ಗಾಸ್ಟಾಲಿನ್ ಎಂಬವರು ಕಳಿಸಿರುವ ಸಂದೇಶದಲ್ಲಿ ಕಂಡು ಬಂದಿದೆ.

ಒಟ್ಟು 5 ಸಿಲಿಕಾನ್ ಬಾಂಬ್‌ನಲ್ಲಿ ಮೂರನ್ನು ರೆಕಾರ್ಡ್ ಕೊಠಡಿಯಲ್ಲಿ ಮತ್ತು 2 ಬಾಂಬ್‌ಗಳನ್ನು ಮೊದಲ ಮಹಡಿಯ ಈ–ಸೇವಾ ಕೇಂದ್ರದಲ್ಲಿಡಲಾಗಿದೆ. ಮಧ್ಯಾಹ್ನ 2.20ಕ್ಕೆ ನ್ಯಾಯಾಧೀಶರನ್ನು ಕೋರ್ಟ್‌ನಿಂದ ಖಾಲಿ ಮಾಡಿಸಬೇಕೆಂದು ಉಲ್ಲೇಖಿಸಲಾಗಿದೆ.

ಬೆಳಿಗ್ಗೆ ಕೋರ್ಟ್ ಅಧಿಕಾರಿಗಳು ಸಂದೇಶ ನೋಡಿದ ತಕ್ಷಣವೇ ನ್ಯಾಯಾಧೀಶರ ಗಮನಕ್ಕೆ ತಂದು, ಪೊಲೀಸರಿಗೆ ದೂರು ನೀಡಿದರು. ಈ ಹಿನ್ನೆಲೆಯಲ್ಲಿ ಕೋರ್ಟ್ ಮತ್ತು ಕೇಂದ್ರೀಯ ವಿದ್ಯಾಲಯದಲ್ಲಿ ತೀವ್ರ ತಪಾಸಣೆ ನಡೆಸಲಾಯಿತು. ಜಿಲ್ಲಾ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನ ದಳದ 2 ತಂಡಗಳು ಏಕ ಕಾಲದಲ್ಲಿ ನ್ಯಾಯಾಲಯದ ಕಟ್ಟಡ ಮತ್ತು ಕೇಂದ್ರೀಯ ವಿದ್ಯಾಲಯಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಕೋರ್ಟ್ ಸಿಬ್ಬಂದಿ ವಕೀಲರು, ನ್ಯಾಯಾಧೀಶರು ಹಾಗೂ ನ್ಯಾಯಾಲಯದ ಸಿಬ್ಬಂದಿ, ಶಿಕ್ಷಕ ವರ್ಗ ಹಾಗೂ ವಿದ್ಯಾರ್ಥಿಗಳನ್ನು ಹೊರ ಕಳುಹಿಸಿ ಎಲ್ಲಾ ಕಡೆಗಳಲ್ಲಿ ಶಂಕಾಸ್ಪದ ವಸ್ತುಗಳಿಗಾಗಿ ತೀವ್ರ ಶೋಧ ನಡೆಸಲಾಯಿತು. ಯಾವುದೇ ಅನುಮಾನಾಸ್ಪದ ವಸ್ತುಗಳು ಕಂಡು ಬರದೆ ಇದೊಂದು ಹುಸಿ ಬಾಂಬ್ ಬೆದರಿಕೆ ಕರೆ ಎಂದು ಖಚಿತವಾದ ನಂತರ ನ್ಯಾಯಾಲಯ ಹಾಗೂ ಕೇಂದ್ರೀಯ ವಿದ್ಯಾಲಯ ಒಳಕ್ಕೆ ತೆರಳಲು ಪೊಲೀಸರು ಅನುಮತಿ ನೀಡಿದರು.

ಆರೋಪಿಗಳ ಪತ್ತೆಗೆ ಆಗ್ರಹ

ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ ಕರೆ ಬಂದಿರುವುದು ಇದು ಮೂರನೇ ಬಾರಿ. ಪೊಲೀಸರ ಪತ್ತೆ ಕಾರ್ಯದಲ್ಲಿ ಯಾವುದೇ ಸಂಶಯಾಸ್ಪದ ವಸ್ತು ಅಥವಾ ಬಾಂಬ್ ಪತ್ತೆಯಾಗದ, ಇದು ಹುಸಿ ಬಾಂಬ್ ಬೆದರಿಕೆ ಎನ್ನುವುದು ಮೇಲ್ನೋಟಕ್ಕೆ ಖಾತ್ರಿಯಾಗಿದೆ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಳ್ಳುವಂತೆ ಬಾರ್ ಅಸೋಸಿಯೇಷನ್ ಅಧ್ಯಕ್ಷ ಸಿ.ಟಿ.ಜೋಸೆಫ್ ಆಗ್ರಹಿಸಿದ್ದಾರೆ.

ಖಾಸಗಿ ಬಸ್– ಆಟೋ ಡಿಕ್ಕಿ: ಆಟೋ ಚಾಲಕನಿಗೆ ತೀವ್ರ ಗಾಯ

ಸಿದ್ದಾಪುರ, ಜೂ.27–ಓವರ್‌ಟೇಕ್ ಮಾಡುವ ಭರದಲ್ಲಿ ಖಾಸಗಿ ಬಸ್ ಆಟೋಗೆ ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕ ಗಂಭೀರ ಗಾಯಗೊಂಡಿರುವ ಘಟನೆ ಸಿದ್ದಾಪುರ ಸಮೀಪದ ಇಂಜಲಗೆರೆ ಬಳಿ ಸಂಭವಿಸಿದೆ.

ವಿರಾಜಪೇಟೆ ಕಡೆಯಿಂದ ಸಿದ್ದಾಪುರಕ್ಕೆ ಸಾಗುತ್ತಿದ್ದ ಕ್ಲಾಸಿಕ್ ಬಸ್ ಮುಂದೆ ಹೋಗುತ್ತಿದ್ದ ಟಿಪ್ಪರ್ ವಾಹನವನ್ನು ಓವರ್ ಟೇಕ್ ಮಾಡಲು ಮುಂದಾಗಿದ್ದು, ಈ ವೇಳೆ ಮುಂದೆ ಇದ್ದ ಆಟೋಗೆ ಡಿಕ್ಕಿ ಹೊಡೆದ ರಭಸಕ್ಕೆ ಆಟೋ ಪಲ್ಟಿಯಾಗಿ ರಸ್ತೆ ಬದಿಯ ಗೇಟಿಗೆ ಅಪ್ಪಳಿಸಿ ಮಗುಚಿಬಿದ್ದು, ಜಖಂಗೊಂಡಿದೆ. ಆಟೋ ಚಾಲಕ ಫಿರೋಜ್ ಎಂಬುವರ ತಲೆ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ಕೂಡಲೇ ಸ್ಥಳೀಯರು ಗಾಯಾಳುವನ್ನು ಸಿದ್ದಾಪುರ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಟೋದಲ್ಲಿ ಪ್ರಯಾಣಿಸುತ್ತಿದ್ದ ಸುನೀತಾ ಎಂಬ ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನಾ ಸ್ಥಳಕ್ಕೆ ಸಿದ್ದಾಪುರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಹುತ್ವ ಕಾಪಾಡಿಕೊಳ್ಳಲು ಕೊಡವರ ವಿಶಿಷ್ಟ ಗುರುತಿನ ರಕ್ಷಣೆ ಅಗತ್ಯ



ಸುಪ್ರೀಂಕೋರ್ಟ್ ವಕೀಲ ವಿಕ್ರಮ್ ಹೆಗ್ಡೆ ಸಿಎನ್‌ಸಿಯ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಮಡಿಕೇರಿ,ಜೂ.27–ಭಾರತದ ಬಹುತ್ವವನ್ನು ಕಾಪಾಡಿಕೊಳ್ಳಲು ಕೊಡವರ ವಿಶಿಷ್ಟ ಗುರುತನ್ನು ರಕ್ಷಿಸುವುದು ಅತ್ಯಗತ್ಯ. ಒಕ್ಕೂಟ ವ್ಯವಸ್ಥೆಯಲ್ಲಿ ಕೊಡವರಿಗೆ ಸಾಂವಿಧಾನಿಕ ರಕ್ಷಣೆಯನ್ನು ನೀಡುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ವಕೀಲ ವಿಕ್ರಮ್ ಹೆಗ್ಡೆ ಪ್ರತಿಪಾದಿಸಿದ್ದಾರೆ.

ಕೊಡವ ನ್ಯಾಷನಲ್ ಕೌನ್ಸಿಲ್ ಆಶ್ರಯದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಿತು. ವಿಷಯ ಮಂಡಿಸಿದ ವಿಕ್ರಮ್ ಹೆಗ್ಡೆ ಕೊಡಗನ್ನು ವ್ಯವಸ್ಥಿತವಾಗಿ ದೊಡ್ಡ ಕ್ಷೇತ್ರದೊಂದಿಗೆ ವಿಲೀನಗೊಳಿಸಲಾಗಿದೆ. ಮುಂಬರುವ ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಪ್ರತ್ಯೇಕ ಲೋಕಸಭಾ ಸ್ಥಾನವನ್ನು ಕಲ್ಪಿಸುವುದಕ್ಕೆ ಪೂರಕವಾಗಿ ಚುನಾವಣಾ ಆಯೋಗಕ್ಕೆ ದತ್ತಾಂಶ ಆಧಾರಿತ, ವಸ್ತುನಿಷ್ಠ ವಾದಗಳನ್ನು ಮಂಡಿಸಬೇಕಾಗುತ್ತದೆ ಎಂದರು.

ಸರ್ವೋಚ್ಚ ನ್ಯಾಯಾಲಯದ ನ್ಯಾಯವಾದಿ ಹಿಮಾ ಲಾರೆನ್ಸ್ ವಿಕ್ರಮ್ ಹೆಗ್ಡೆ ಮಾತನಾಡಿ, ತನ್ನದೇ ಆದ ವಿಶಿಷ್ಟ ಭಾಷೆ ಆಚರಣೆಗಳು, ವಂಶಾವಳಿ ಮತ್ತು ಪವಿತ್ರ ಸ್ಥಳಗಳನ್ನು ಹೊಂದಿರುವ ಸಣ್ಣ ಸಮುದಾಯವನ್ನು ರಾಷ್ಟ್ರ ಹೇಗೆ ನಡೆಸಿಕೊಳ್ಳಬೇಕು ಎನ್ನುವುದಕ್ಕೆ ಸಾಂವಿಧಾನಿಕ ಉತ್ತರವಿದೆ. ಕೊಡವ ಭೂಮಿ, ಜಮ್ಮಾ ಹಿಡುವಳಿ, ದೇವರ ಕಾಡುಗಳು, ಕೃಷಿ, ಕಾಫಿ ಬೆಳೆ ಕೊಡವ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿದೆ. ಅಭಿವೃದ್ಧಿಯನ್ನು ಕೇವಲ ರೆಸಾರ್ಟ್‌ಗಳು ಮತ್ತು ಕಾಂಕ್ರೀಟ್ ಕಟ್ಟಡಗಳಿಂದ ಅಳೆಯಲು ಸಾಧ್ಯವಿಲ್ಲ. ಬದಲಿಗೆ ಪರಿಸರ ಮತ್ತು ಸಂಸ್ಕೃತಿಯ ಉಳಿವಿನೊಂದಿಗೆ ಅಳೆಯಬೇಕೆಂದು ಅಭಿಪ್ರಾಯಪಟ್ಟರು. ಹಿರಿಯ ವಕೀಲ ಕೆ.ಪಿ. ಬಾಲಸುಬ್ರಮಣ್ಯ ಮಾತನಾಡಿದರು. ಎನ್.ಯು.ನಾಚಪ್ಪ ಮಂಡಿಸಿದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿದರು. ನಂದೇಟಿರ ಕವಿತಾ ಸುಬ್ಬಯ್ಯ, ಪುಲ್ಲೇರ ಸ್ವಾತಿ ಕಾಳಪ್ಪ ಮೊದಲಾದವರಿದ್ದರು.

ಚಾ.ನಗರ ನ್ಯಾಯಾಲಯಕ್ಕೆ ಮತ್ತೆ ಬಾಂಬ್ ಬೆದರಿಕೆ



ನ್ಯಾಯಾಲಯವನ್ನು ತಪಾಸಣೆ ನಡೆಸುತ್ತಿರುವ ಪೊಲೀಸರು.

ಚಾಮರಾಜನಗರ: ಮೂರು ದಿನಗಳ ಅಂತರದಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಕಿಡಿಗೇಡಿಗಳು ಮತ್ತೊಮ್ಮೆ ಬಾಂಬ್ ಬೆದರಿಕೆ ಇ–ಮೇಲ್ ಸಂದೇಶವನ್ನು ಕಳುಹಿಸಿದ್ದು, ವಕೀಲರು ಹಾಗೂ ಸಾರ್ವಜನಿಕರು ಆತಂಕಗೊಂಡ ಘಟನೆ ನಡೆಯಿತು.

ಇ–ಮೇಲ್ ಬಂದ ಮಾಹಿತಿ ಅರಿತು, ನ್ಯಾಯಾಲಯದ ಸಿಬ್ಬಂದಿಗಳು, ವಕೀಲರು ಹಾಗೂ ಸಾರ್ವಜನಿಕರು ಆತಂಕಗೊಂಡಿದ್ದರು. ಈ ವೇಳೆ ಮುಂಜಾಗ್ರತಾ ಕ್ರಮವಾಗಿ ಎಲ್ಲರನ್ನೂ ನ್ಯಾಯಾಲಯದಿಂದ ಹೊರಗೆ ಕಳುಹಿಸಿ ಜಿಲ್ಲಾ ಪೊಲೀಸರು, ಬಾಂಬ್ ನಿಷ್ಕ್ರಿಯ ದಳ, ಶ್ವಾನದಳದ ಮೂಲಕ ತೀವ್ರ ಶೋಧ ನಡೆಸಲಾಯಿತು. ಆದರೆ, ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗದ ಕಾರಣ ಇದೊಂದು ಹುಸಿ ಬಾಂಬ್ ಬೆದರಿಕೆ ಎಂದು ದೃಢಪಡಿಸಿದರು.

ಪೊಲೀಸರ ಶೋಧ ಕಾರ್ಯ ಮುಗಿಯುವವರೆಗೂ ವಕೀಲರು, ಸಾರ್ವಜನಿಕರು, ಸಿಬ್ಬಂದಿ ಹೊರಗೆ ಇದ್ದುದ್ದರಿಂದ 2 ಗಂಟೆ ಕಾಲ ನ್ಯಾಯಾಲಯದ ಕಾರ್ಯಕಲಾಪ ಸ್ಥಗಿತ ಗೊಂಡಿತ್ತು.

ಎರಡು ದಿನಗಳ ಹಿಂದೆಯೂ ಬೆದರಿಕೆ: ಎರಡು ದಿನಗಳ ಹಿಂದೆಯೂ ಕೂಡ ಇದೇ ನ್ಯಾಯಾಲಯಕ್ಕೆ ಅಜ್ಮಲ್ ಕಸಬ್ ಎಂಬಾತನ ಹೆಸರಿನಲ್ಲಿ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಇಂದು ಮತ್ತೊಮ್ಮೆ ಅದೇ ರೀತಿಯ ಸಂದೇಶ ಬಂದಿದೆ.

ಕೋರ್ಟ್ ಸಮಯ ವ್ಯರ್ಥ: ಹಿರಿಯ ವಕೀಲ ಪ್ರಸನ್ನಕುಮಾರ್ ಮಾತನಾಡಿ, ಕಿಡಿಗೇಡಿಗಳು ನ್ಯಾಯಾಂಗ ವ್ಯವಸ್ಥೆಯನ್ನೇ ಗುರಿಯಾಗಿಸಿ ಬಾಂಬ್ ಬೆದರಿಕೆ ಕಳುಹಿಸುತ್ತಿದ್ದಾರೆ. ಎರಡು ದಿನದ ಅಂತರದಲ್ಲಿ ಇಂದು ಮತ್ತೆ ಇ–ಮೇಲ್ ಸಂದೇಶ ಬಂದಿದ್ದು ನ್ಯಾಯಾಧೀಶರು, ವಕೀಲರು, ಕಕ್ಷಿದಾರರು ಆತಂಕವಾಗಿದೆ. ಕಲಾಪಗಳು ನಡೆಯದಿರುವುದರಿಂದ ಸಮಯ ವ್ಯರ್ಥವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ರೀತಿ ಸಂದೇಶ ಕಳುಹಿಸುವ ಮೂಲಕ ಭಯದ ವಾತಾವರಣ ನಿರ್ಮಾಣವಾಗಿದೆ. ನ್ಯಾಯಾಲಯಗಳಿಗೆ ಈ ರೀತಿ ಮೆಸೇಜ್ ಹಾಕೋದು ಏಕೆ ಅನ್ನೋ ಪ್ರಶ್ನೆ ಕಾಡುತ್ತಿದೆ. ಇದೊಂದು ಉಗ್ರಗಾಮಿ ಕೃತ್ಯವಾಗಿದ್ದು, ಸರ್ಕಾರ, ಗೃಹ ಸಚಿವರು ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಸ್ಪೆಷಲ್ ಟೀಂ ಮಾಡಿ ತನಿಖೆಗೆ ವಹಿಸಬೇಕು ಒತ್ತಾಯಿಸಿದರು.

ಬೆದರಿಕೆ ಸಂದೇಶದಲ್ಲಿ ಏನಿದೆ?

ಚಾಮರಾಜನಗರ ಜಿಲ್ಲಾ ಸತ್ರ ಮತ್ತು ಪ್ರಧಾನ ನ್ಯಾಯಾಲಯಕ್ಕೆ durga.thevidiya.stalin@atomicmail.io ಎಂಬ ಇಮೇಲ್ ಐಡಿಯಿಂದ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಚಾಮರಾಜನಗರ ನ್ಯಾಯಾಲಯದ ಆವರಣದಲ್ಲಿ 5 ಸಿಲಿಕಾನ್–ಡೈನಮೈಟ್ ಬಾಂಬ್‌ಗಳನ್ನು ಇಡಲಾಗಿದೆ. ಅದರಲ್ಲಿ 3 ಬಾಂಬ್‌ಗಳನ್ನು ರೆಕಾರ್ಡ್ ರೂಮ್‌ನಲ್ಲಿ ಮತ್ತು 2 ಬಾಂಬ್‌ಗಳನ್ನು ಮೊದಲ ಮಹಡಿಯ ಇ–ಸೇವಾ ಕೇಂದ್ರದಲ್ಲಿ ಇರಿಸಲಾಗಿದೆ ಎಂದು ತಿಳಿಸಲಾಗಿದೆ.

ಮಧ್ಯಾಹ್ನ 2:25 ರೊಳಗೆ ನ್ಯಾಯಾಧೀಶರನ್ನು ಅಲ್ಲಿಂದ ಸುರಕ್ಷಿತವಾಗಿ ಹೊರಗೆ ಕಳುಹಿಸಬೇಕು ಎಂದು ಎಚ್ಚರಿಕೆ ನೀಡಲಾಗಿದೆ.

ಇ–ಮೇಲ್‌ನಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಪತ್ನಿ ದುರ್ಗಾ ಸ್ಟಾಲಿನ್ ಅವರ ವಿರುದ್ಧ ವಿಲಕ್ಷಣ ಆರೋಪ ಮಾಡಲಾಗಿದ್ದು, ದುರ್ಗಾ ಸ್ಟಾಲಿನ್ ಅವರು ಪ್ರಧಾನಿ ಮೋದಿಯವರ 'ಸ್ಲೀಪರ್ ಸೆಲ್'ನಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಎಂ.ಕೆ.ಸ್ಟಾಲಿನ್ ಹಾಗೂ ಅವರ ಮಗ ಉದಯನಿಧಿ ಅವರಿಗೆ ಆಹಾರದಲ್ಲಿ ಪಾದರಸ ಬೆರೆಸಿ ನಿಧಾನವಾಗಿ ವಿಷ ನೀಡುತ್ತಿದ್ದಾರೆ ಎಂದು ಸಹ ಆರೋಪಿಸಲಾಗಿದೆ.

ತಿರುಪ್ಪರಂಕುಂಡ್ರಂ ದರ್ಗಾವನ್ನು ಧ್ವಂಸಗೊಳಿಸಲು ಮತ್ತು ಪ್ರಧಾನಿ ಮೋದಿಯವರಿಂದ ಬಹುಮಾನ ಪಡೆಯಲು ಅವರು ಹೀಗೆ ಮಾಡುತ್ತಿದ್ದಾರೆ ಎಂದು ಇಮೇಲ್ ನಲ್ಲಿ ತಿಳಿಸಲಾಗಿದ್ದು, ಇಂತಹ 'ಜಾತ್ಯತೀತ ವಿರೋಧಿ' ಧೋರಣೆಗಳ ವಿರುದ್ಧ ಧ್ವನಿ ಎತ್ತಲು ಮತ್ತು ಎಚ್ಚರಿಕೆ ನೀಡಲು ನ್ಯಾಯಾಲಯದ ಮೇಲೆ ಬಾಂಬ್ ದಾಳಿ ನಡೆಸಲು ಈ ದಿನವನ್ನು ಆರಿಸಿಕೊಂಡಿದ್ದೇವೆ ಎಂದು ತಿಳಿಸಲಾಗಿದೆ.

ಪತ್ರದ ಕೊನೆಯಲ್ಲಿ 'ಪೆರಿಯಾರ್ ಅಮರರಾಗಲಿ, ದುರ್ಗಾ ದುರ್ಗಾ ಸ್ಟಾಲಿನ್ ನಾಶವಾಗಲಿ' ಮತ್ತು 'GenZ DMK 4 Life!' ಎಂಬ ಘೋಷಣೆ ಹಾಕಲಾಗಿದೆ ಎಂದು ತಿಳಿದು ಬಂದಿದೆ.

ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಕುಡಿಯುವ ನೀರು ಕುರಿತು ಸಭೆ

ಚಾಮರಾಜನಗರ, ಜೂ.27– ನಗರಾಭಿವೃದ್ಧಿ ಸಚಿವರು ಹಾಗೂ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಪ್ರಕೃತಿ ವಿಕೋಪ ನಿರ್ವಹಣಾ ಉಸ್ತುವಾರಿ ಸಚಿವರಾದ ಡಾ. ಯತೀಂದ್ರ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಕುಡಿಯುವ ನೀರಿನ ಪೂರೈಕೆ ಹಾಗೂ ವಿಪತ್ತು ನಿರ್ವಹಣೆ, ಇನ್ನಿತರೆ ಪ್ರಮುಖ ಸಮಸ್ಯೆಗಳ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ಜೂ.28ರಂದು ಸಂಜೆ 4 ಗಂಟೆಗೆ ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.

ಸರ್ವೆಯರ್‌ಗಳ ಮುಷ್ಕರದಿಂದ ರೈತರಿಗೆ ತೊಂದರೆ

ಬೇಡಿಕೆ ಈಡೇರಿಸಿ ರೈತರ ಸಮಸ್ಯೆ ಬಗೆಹರಿಸಿ



ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ ಮಾತನಾಡಿದರು.

ಚಾಮರಾಜನಗರ, ಜೂ.27– ಖಾಸಗಿ ಸರ್ವೆಯರ್‌ಗಳ ಮುಷ್ಕರದಿಂದಾಗಿ ರೈತರಿಗೆ ಜಮೀನು ಹದ್ದುಬಸ್ತು, ಪೋಡಿ, ಸ್ಕೆಚ್‌ಗೆ ತೊಂದರೆಯಾಗುತ್ತಿದ್ದು ಕೂಡಲೇ ಸರ್ಕಾರ ಖಾಸಗಿ ಸರ್ವೆಯರ್‌ಗಳ ಸಮಸ್ಯೆ ಬಗೆಹರಿಸಿ ರೈತರಿಗೆ ಅನುಕೂಲ ಕಲ್ಪಿಸಿ ಕೊಡಬೇಕು ಎಂದು ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ ಆಗ್ರಹಿಸಿದರು.

ರಾಜ್ಯದಲ್ಲಿ ಕಂದಾಯ ಇಲಾಖೆಯಲ್ಲಿ 6200 ಖಾಸಗಿ ಸರ್ವೆಯರ್‌ಗಳು ಇದ್ದಾರೆ. ಅಲ್ಲದೇ ಜಿಲ್ಲೆಯಲ್ಲಿ 80–90 ಸರ್ವೆಯರ್‌ಗಳಿದ್ದಾರೆ. ಇವರು ಕಳೆದ ಮೂರು ತಿಂಗಳಿಂದಲೂ ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಷ್ಕರ ನಡೆಸುತ್ತಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ಅಲ್ಲದೆ ಅರ್ಜಿದಾರರಿಂದ ಅರ್ಜಿಯೊಂದಕ್ಕೆ ಪಟ್ಟಣ ವ್ಯಾಪ್ತಿಯಲ್ಲಿ 2500 ಹಾಗೂ ಗ್ರಾಮೀಣ ಪ್ರದೇಶಕ್ಕೆ 2000 ರೂ.ಗಳನ್ನು ಕಟ್ಟಿಸಿಕೊಳ್ಳುತ್ತಿ ದ್ದಾರೆ. ಇದರಲ್ಲಿ ಖಾಸಗಿಯವರಿಗೆ 1200 ಕೊಡುತ್ತಿದ್ದು ಉಳಿದ ಹಣ ಎಲ್ಲಿ ಹೋಗುತ್ತಿದೆ ಎಂದು ಪ್ರಶ್ನಿಸಿದ ಅವರು ರಾಜ್ಯದಲ್ಲಿ ಕೋಟ್ಯಾಂತರ ಅವ್ಯವಹಾರ ನಡೆದಿದೆ ಎಂದರು.

ಹಿಂದಿನ ಕಂದಾಯ ಸಚಿವ ಕೃಷ್ಣ ಬೈರೇಗೌಡರು ಭೂ ಸುರಕ್ಷಾ ಯೋಜನೆಯಡಿ ರಾಜ್ಯದಲ್ಲಿ 31 ತಾಲೂಕುಗಳನ್ನು ಪೈಲಟ್ ಕಚೇರಿಗಳಾಗಿ ಆಯ್ಕೆ ಮಾಡಿದ್ದು ಯಾವ ಕಚೇರಿಯಲ್ಲಿಯೂ ಕೆಲಸ ನಡೆದಿಲ್ಲ. ಜಿಲ್ಲೆಯಲ್ಲಿ ಸುಮಾರು ಎರಡೂವರೆ ಸಾವಿರ ಅರ್ಜಿಗಳು ಬಾಕಿ ಇವೆ ಎಂದು ಹೇಳಿದರು. ಕೂಡಲೇ ಸರ್ಕಾರ ಹಾಗೂ ಕಂದಾಯ ಸಚಿವರು ಖಾಸಗಿ ಸರ್ವೆಯರ್‌ಗಳ ಬೇಡಿಕೆಗಳನ್ನು ಈಡೇರಿಸಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಮಾಡುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ಉಪಾಧ್ಯಕ್ಷರಾದ ಆರ್.ವಿ.ಮಹದೇವಸ್ವಾಮಿ, ಲಿಂಗಪ್ಪ, ಕಾರ್ಯದರ್ಶಿಗಳಾದ ವೀರಭದ್ರಸ್ವಾಮಿ, ನಾಗಶೆಟ್ಟಿ, ಸಂಚಾಲಕ ಪುಟ್ಟಸ್ವಾಮಿ, ಕಾನೂನು ಸಲಹೆಗಾರ ಜಿ.ಮಹದೇವಸ್ವಾಮಿ ಇದ್ದರು.

ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ



ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು.

ಚಾಮರಾಜನಗರ, ಜೂ.27– ಚಾಮರಾಜನಗರ ತಾಲೂಕಿನ ಪುಣಜನೂರು ಗ್ರಾಪಂ ವ್ಯಾಪ್ತಿಯ ಭಾನುವಾಡಿ ಗ್ರಾಮದಲ್ಲಿ ಟಿಎಸ್‌ಪಿ ಯೋಜನೆ ಅನುದಾನ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಎಂಎಸ್‌ಐಎಲ್ ನಿಗಮದ ಅಧ್ಯಕ್ಷರು ಆದ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಈ ವ್ಯಾಪ್ತಿಯ ಗ್ರಾಮಗಳಿಗೆ ಬೇಕಾದ ರಸ್ತೆ, ಚರಂಡಿ ಸಮುದಾಯ ಭವನ, ಕುಡಿಯುವ ನೀರು ಸೌಲಭ್ಯ, ಗಂಗಾ ಕಲ್ಯಾಣಯೋಜನೆಯಡಿ ಸಾಲಸೌಲಭ್ಯ ವಿತರಣೆ, ಅರ್ಹ ಫಲಾನುಭವಿಗಳಿಗೆ ಆಶ್ರಯ ಮನೆ, ನಿವೇಶನ, ಸೇರಿದಂತೆ ಸರಕಾರದಿಂದ ನೀಡಲಾಗುವ ಸೌಲಭ್ಯಗಳನ್ನು ಸಮಗ್ರವಾಗಿ ಒದಗಿಸುವ ವ್ಯವಸ್ಥೆ ಮಾಡಲಾಗುತ್ತಿದೆ. ರಸ್ತೆ ಚರಂಡಿಯಿಲ್ಲದಿರುವ ಗ್ರಾಮಗಳನ್ನು ಗುರುತಿಸಿ, ಸರಕಾರದಿಂದ ಸೂಕ್ತ ಅನುದಾನ ಬಿಡುಗಡೆ ಮಾಡಿಸಿ, ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು. ಸಂಬಂಧಪಟ್ಟ ಗುತ್ತಿಗೆದಾರರು, ಎಂಜಿನಿಯರ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕರು ಸೂಚಿಸಿದರು.

ಈ ಸಂದರ್ಭದಲ್ಲಿ ಮಣಿನಾಯಕ, ಕುಮಾರ್‌ನಾಯಕ್, ಷಮೀರ್ ಪಾಷ, ಶಿವನಾಯಕ, ರಾಚ್ಚಪ್ಪ ಇನ್ನಿತರರಿದ್ದರು.

ಹೆಣ್ಣುಭ್ರೂಣ ಹತ್ಯೆ: ಮನುಕುಲದ ಮೇಲೆ ದುಷ್ಪರಿಣಾಮ ಕಟ್ಟಿಟ್ಟ ಬುತ್ತಿ

ಜಿಲ್ಲಾ ಲೇಖಕಿಯರ ಸಮ್ಮೇಳನಾಧ್ಯಕ್ಷೆ ಡಾ.ಟಿ.ಸಿ.ಪೂರ್ಣಿಮಾ ಕಳವಳ



ಜಿಲ್ಲಾ ಲೇಖಕಿಯರ ಸಮ್ಮೇಳನವನ್ನು ಮಹಿಳಾ ಸಾಹಿತಿಗಳು ಉದ್ಘಾಟಿಸಿದರು.

ಮಂಡ್ಯ, ಜೂ.27–ಎಷ್ಟೆಲ್ಲಾ ಸರ್ವಾಂಗೀಣ ಪ್ರಗತಿಯಾಗಿದ್ದರೂ, ಬೌದ್ಧಿಕ, ಕಲಾತ್ಮಕ ಸಾಧನೆಗಳಾಗಿದ್ದರೂ, ಸಾಮಾಜಿಕ ಬೆಳವಣಿಗೆಯಾಗಿದ್ದರೂ ಹೆಣ್ಣು ಭ್ರೂಣ ಹತ್ಯೆಯಂಥ ಹೇಯಕೃತ್ಯದ ಅಪಾಯ ತಕ್ಷಣಕ್ಕೆ ಗೊತ್ತಾಗದಿದ್ದರೂ ಮನುಕುಲದ ಮೇಲೆ ದುಷ್ಪರಿಣಾಮ ಕಟ್ಟಿಟ್ಟ ಬುತ್ತಿ ಎಂದು ಜಿಲ್ಲಾ ಲೇಖಕಿಯರ ಸಮ್ಮೇಳನದ ಸರ್ವಾಧ್ಯಕ್ಷೆ ಡಾ. ಟಿ.ಸಿ. ಪೂರ್ಣಿಮಾ ಹೇಳಿದ್ದಾರೆ.

ನಗರದ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಲೇಖಕಿಯರ ಸಂಘ ಹಾಗೂ ಜಿಲ್ಲಾ ಘಟಕ ಆಯೋಜಿಸಿದ್ದ ಜಿಲ್ಲಾ ಲೇಖಕಿಯರ ಸಮ್ಮೇಳನದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಹೆಚ್ಚುತ್ತಿರುವ ಅಪರಾಧ ಸಂಖ್ಯೆಗಳ ಮೇಲೆ ತೀವ್ರ ನಿಗಾ ಇರಿಸಬೇಕಾದ ಮತ್ತು ಅಪರಾಧಗಳನ್ನು ತಪ್ಪಿಸುವಂತಹ ಕೆಲಸಗಳಾಗಬೇಕು. ಅತ್ಯಾಚಾರ ಸಹಿತ ಕೊಲೆ, ಜಾತಿಯ ಅಂತಸ್ತುಗಳ ತಾರತಮ್ಯವಿರುವ ಪ್ರೇಮ ವಿವಾಹ ಪ್ರಕರಣಗಳಲ್ಲಿ ಕುಟುಂಬದ ಗೌರವವನ್ನು ಉಳಿಸಿಕೊಳ್ಳುವ ಭರದಲ್ಲಿ ನಡೆಯುವ ಮರ್ಯಾದಾ ಹತ್ಯೆ, ಹೊಂದಾಣಿಕೆಯ ಲೋಪದಿಂದಾಗುವ ಕೌಟುಂಬಿಕ ದೌರ್ಜನ್ಯ, ಆತ್ಮಹತ್ಯೆ ಮತ್ತು ಹತ್ಯೆಯಂತಹ ವಿಕೃತಿ, ದುಷ್ಕೃತ್ಯ, ವ್ಯಸನಗಳು ಹೆಚ್ಚುತ್ತಿವೆ. ಸಂಸಾರಗಳಲ್ಲಿ ಸಂಯಮ, ಸಹಿಷ್ಣುತೆ ಮತ್ತು ಮಾನಸಿಕ ಸ್ಥಿಮಿತತೆ ಮರೆಯಾಗುತ್ತಿದೆ. ಇದರಿಂದಾಗುವ ಅವಘಡಗಳಿಗೆ ಹೆಣ್ಣು ಮಕ್ಕಳು ಹೆಚ್ಚಾಗಿ ಬಲಿಯಾಗುತ್ತಿರುವುದು ಆತಂಕಕಾರಿ ಸಂಗತಿ ಎಂದರು.

ನ್ಯಾಯಾಂಗ ವ್ಯವಸ್ಥೆಯ ಪ್ರಮುಖ ಸ್ಥಾನದಲ್ಲಿ ಪಾಂಡವಪುರದ ಇಂಗಲಗುಪ್ಪೆಯ ವೆಂಕಟರಾಮಯ್ಯನವರ ಪುತ್ರಿ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಭಾರತದ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಿದ್ದಾರೆ. ಜಿಲ್ಲೆಯ ನಾರಿಶಕ್ತಿ ರಾಜಕೀಯ ಹಾಗೂ ಸಾಮಾಜಿಕ ಹೋರಾಟಗಳಲ್ಲೂ ಹಲವಾರು ಮಹಿಳೆಯರು ತಮ್ಮ ಅಸ್ತಿತ್ವ ರೂಪಿಸಿಕೊಂಡಿದ್ದಾರೆ. ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ, ಪಾರ್ವತಮ್ಮ ಶ್ರೀಕಂಠಯ್ಯ, ದಮಯಂತಿ ಬೋರೇಗೌಡ, ಜಯವಾಣಿ ಮಂಚೇಗೌಡ, ವಿಮಲಾ ಗೌಡ, ಕಲ್ಪನಾ ಸಿದ್ದರಾಜು, ನಾಗಮಣಿ ನಾಗೇಗೌಡ, ರಮ್ಯಾ, ಸುಮಲತಾ ಅಂಬರೀಶ್, ರೈತ ನಾಯಕಿ ಸುನಂದಾ ಜಯರಾಂ, ಪ್ರಗತಿಪರ ಮಹಿಳೆ ನಂದಿನಿ ಜಯರಾಂ ಹೀಗೆ ಅಸಂಖ್ಯಾತ ಮಹಿಳೆಯರು ವಿವಿಧ ರಂಗಗಳಲ್ಲಿ ಮೈಲಿಗಳನ್ನು ಸ್ಥಾಪಿಸಿದ್ದಾರೆ ಎಂದರು.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಚುಕ್ಕಾಣಿ ಹಿಡಿಯುವ ಅವಕಾಶ ಈವರೆಗೆ ಯಾವ ಲೇಖಕಿಗೂ ಒದಗಿಬಂದಿಲ್ಲ. ಮುಂದಿನ ಚುನಾವಣೆಯಲ್ಲಿ ಸಮರ್ಥ ಲೇಖಕಿಯೊಬ್ಬರು ಅಧ್ಯಕ್ಷರಾಗುವಂತಾಗಲಿ. ಜಿಲ್ಲೆಯ ಮಹಿಳೆಗೆ ಆ ಹೆಬ್ಬಾಗಿಲು ತೆರೆದುಕೊಳ್ಳಲಿ ಎಂದು ಆಶಿಸಿದರು. ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷೆ ಮೀರಾ ಶಿವಲಿಂಗಯ್ಯ, ಮಹಿಳಾ ಮುಖಂಡರಾದ ಡಾ.ಸಬಿಹಾ ಭೂಮಿಗೌಡ, ವಿಜಯಲಕ್ಷ್ಮಿ ರಘುನಂದನ್, ಡಾ.ಎಚ್. ಎಲ್.ಪುಷ್ಪ, ಇದ್ದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ರಾಹುಲ್ ನೇತೃತ್ವದಲ್ಲಿ ಹೋರಾಟ



ಜಿಲ್ಲಾ ಕಾರ್ಯಾಧ್ಯಕ್ಷ ಚಿದಂಬರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

ಮಂಡ್ಯ: ನೀಟ್ ಪರೀಕ್ಷೆ ಪಶ್ನೆ ಪತ್ರಿಕೆಯ ಸೋರಿಕೆ ಖಂಡಿಸಿ 'ಛಾತ್ರೋನ್ಕಿ ಗೂಂಜ್' (ವಿದ್ಯಾರ್ಥಿಗಳ ಕೂತು) ಶೀರ್ಷಿಕೆಯಡಿ ಎಐಸಿಸಿ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ 3 ಬೇಡಿಕೆಗಳ ಈಡೇರಿಕೆಗಾಗಿ ದೇಶಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಸ್. ಚಿದಂಬರ್ ತಿಳಿಸಿದರು.

ನೀಟ್‌ಪರೀಕ್ಷೆ ಪ್ರಶ್ನೆ ಪತ್ರಿಕೆಯ ಸೋರಿಕೆಯಿಂದಾಗಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ನೇತೃತ್ವದಲ್ಲಿ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾದಿಂದ ಜೂ.25ರಿಂದ 28 ರಾಜ್ಯಗಳಲ್ಲಿ 40 ದಿನಗಳ ನಿರಂತರ ಹೋರಾಟಗಳು ನಡೆಯಲಿವೆ. ರಾಜ್ಯದ ಬೆಂಗಳೂರಿನಲ್ಲಿ ವಿದ್ಯಾರ್ಥಿಗಳ ಸಮಾವೇಶ ನಡೆಸಿ ಹೋರಾಟಕ್ಕೆ ಚಾಲನೆ ನೀಡುವರು. ಇದನ್ನು ಬೆಂಬಲಿಸಿ ಜಿಲ್ಲೆಯಲ್ಲಿಯೂ ಸಾವಿರಾರು ವಿದ್ಯಾರ್ಥಿಗಳಳನ್ನೊಳಗೊಂಡಂತೆ ಪ್ರತಿಭಟನೆ ಮಾಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು, ಸೋರಿಕೆ ಸಂಬಂಧ ತನಿಖೆಯಾಗಬೇಕು, ಯಾವುದೇ ಪೇಪರ್ ಲೀಕ್ ಆಗದಂತೆ ಕ್ರಮವಹಿಸಬೇಕು. ನಿರ್ದಿಷ್ಟ ವಾರ್ಷಿಕ ಪರೀಕ್ಷೆ, ನೇಮಕಾತಿ ಕ್ಯಾಲೆಂಡರ್ ಜಾರಿಗೆ ತರಬೇಕೆಂದು ಆಗ್ರಹಿಸಿದರು. ಮಹಿಳಾ ಜಿಲ್ಲಾಧ್ಯಕ್ಷೆ ಎಚ್.ಬಿ. ಶುಭದಾಯಿನಿ, ಯುವ ಅಧ್ಯಕ್ಷ ಶೈಲೇಂದ್ರ, ಎನ್‌ಎಸ್‌ಯುಐ ಬಿ.ಎಸ್.ಮಂಜು, ಪ್ರಧಾನ ಕಾಯದರ್ಶಿ ಆದಿತ್ಯ ಇದ್ದರು.

ಮೆಣಸಗೆರೆ ಜ್ಞಾನಮುದ್ರ ಶಾಲೆಯಲ್ಲಿ ಅಕ್ಷರಾಭ್ಯಾಸ



ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಪೋಷಕರು ತಮ್ಮ ಮಕ್ಕಳೊಂದಿಗೆ ಭಾಗವಹಿಸಿರುವುದು.

ಭಾರತೀನಗರ.ಜೂ.27–ಮಗುವು ಶಾಲೆಯಲ್ಲಿ ಹಾಗೂ ಜೀವನದಲ್ಲಿ ಚುರುಕಾಗಿ ಮತ್ತು ಬುದ್ಧಿವಂತನಾಗಿ ಬೆಳೆಯಲು ಅಕ್ಷರಾಭ್ಯಾಸ ಅತ್ಯಂತ ಮಹತ್ವದ್ದಾಗಿದೆ ಎಂದು ಜ್ಞಾನಮುದ್ರ ವಿದ್ಯಾಸಂಸ್ಥೆಯ ಸಂಸ್ಥಾಪಕಿ ಶಿವಮ್ಮ ಶಿವಕುಮಾರ್ ಹೇಳಿದರು.

ಸಮೀಪದ ಮೆಣಸಗೆರೆ ಗ್ರಾಮದ ಜ್ಞಾನಮುದ್ರ ವಿದ್ಯಾಮಂದಿರ ಶಾಲೆಯಲ್ಲಿ ಆಯೋಜಿಸಿದ್ದ ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣದ ಆರಂಭವು ಪ್ರತಿಯೊಂದು ಮಗುವಿನ ಜೀವನದಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಅಕ್ಷರಾಭ್ಯಾಸವು ಮಗುವಿನ ಕಲಿಕಾ ಪಯಣದ ಶುಭಾರಂಭವನ್ನು ಸೂಚಿಸುವ ವಿಶೇಷ ಕಾರ್ಯಕ್ರಮವಾಗಿದೆ.

ವೇದಬ್ರಹ್ಮಶ್ರೀ ಯು.ವಿ.ಗಿರೀಶ್ ಪೂಜಾ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿ, ಅಕ್ಷರಾಭ್ಯಾಸವು ಮಗುವಿನ ಜ್ಞಾನಯಾತ್ರೆಯ ಶುಭಾರಂಭವಾಗಿದೆ. ಸರಸ್ವತಿ ದೇವಿಯ ಅನುಗ್ರಹದಿಂದ ಮಕ್ಕಳ ಶೈಕ್ಷಣಿಕ ಜೀವನ ಯಶಸ್ವಿಯಾಗಿ ಹಾಗೂ ಉಜ್ವಲವಾಗಿ ರೂಪುಗೊಳ್ಳಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು ತಮ್ಮ ಮಕ್ಕಳೊಂದಿಗೆ ಭಾಗವಹಿಸಿ ಅಕ್ಷರಾಭ್ಯಾಸ ನೆರವೇರಿಸಿದರು.

ಶಾಲೆಯ ಸಂಸ್ಥಾಪಕಿ ಡಾ.ಸೌಮ್ಯ ರಾಜೇಶ್, ಟ್ರಸ್ಟಿಗಳಾದ ತೇಜಸ್ವಿನಿ ತಿಪ್ಪೇಗೌಡ, ಆಡಳಿತಾಧಿಕಾರಿ ಪ್ರಭಾವತಿ, ಪ್ರಾಂಶುಪಾಲೆ ಶೃತಿ, ಮಾಂಟೆಸ್ಸೋರಿ ವಿಭಾಗದ ಮುಖ್ಯಸ್ಥೆ ಮಂಜುಳಾ, ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಮದ್ದೂರು ನವೋದಯ ವಿದ್ಯಾಲಯಕ್ಕೆ ಕಾಯಕಲ್ಪ

ಮದ್ದೂರು: ತಾಲೂಕಿನ ಶಿವಾರಗುಡ್ಡದಲ್ಲಿರುವ ಪಿಎಂ ಶ್ರೀ ಜವಾಹರ ನವೋದಯ ವಿದ್ಯಾಲಯವನ್ನು ಇಡೀ ರಾಜ್ಯದಲ್ಲಿ ಮಾದರಿ ವಿದ್ಯಾಲಯವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ವಿದ್ಯಾಲಯದಲ್ಲಿ ಕ್ರೀಡಾಂಗಣದ ವೇದಿಕೆ ಮತ್ತು ಸಂಕಲ್ಪ ಲ್ಯಾಬ್ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಅತ್ಯಂತ ತ್ವರಿತವಾಗಿ ನಮ್ಮ ಅಧಿಕಾರಿಗಳು ವಿದ್ಯಾಲಯಕ್ಕೆ ಭೇಟಿ ನೀಡಿ ಯಾವ ಯಾವ ಕಾಮಗಾರಿಗಳು ಆಗಬೇಕಿದೆ ಎಂಬ ಬಗ್ಗೆ ಮಾಹಿತಿ ಪಡೆದುಕೊಂಡು ಅದಕ್ಕೆ ಆಗುವ ಖರ್ಚು–ವೆಚ್ಚದ ವರದಿ ನೀಡುವಂತೆ ಸೂಚಿಸಿದ್ದೇನೆ ಎಂದು ಹೇಳಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 28-06-2026

ಪ್ರೀತಿ ಎಂದರೆ ತ್ಯಾಗವೂ ಹೌದು, ಆದರೆ ತನ್ನನ್ನು ಸಂಪೂರ್ಣವಾಗಿ ಅಳಿಸಿಕೊಳ್ಳುವ ತ್ಯಾಗ ಅಲ್ಲ. ಪ್ರೀತಿ ಎಂದರೆ ಇಬ್ಬರೂ ಜೊತೆಯಾಗಿ ಬೆಳೆಯುವುದು. ಒಂದು ಮರಕ್ಕೆ ನೀರು ಹಾಕಿದಂತೆ. ಪ್ರತಿದಿನ ಸ್ವಲ್ಪ ಸ್ವಲ್ಪ ಆರೈಕೆ ಮಾಡಿದರೆ ಮಾತ್ರ ಆ ಮರ ದೊಡ್ಡದಾಗಿ ಹೂವು, ಹಣ್ಣು ಕೊಡುತ್ತದೆ. ಒಂದು ದಿನ ನೀರು ಹಾಕದೆ ಹತ್ತು ದಿನ ಬಿಟ್ಟು ಒಂದು ಕೊಡ ನೀರು ಸುರಿದರೆ ಮರ ಬದುಕುವುದಿಲ್ಲ. ಪ್ರೀತಿಯೂ ಹಾಗೆಯೇ. ದಿನನಿತ್ಯದ ಸಣ್ಣ ಮಾತು, ಕಾಳಜಿ, ಸ್ಪರ್ಶ, ಕ್ಷಮೆ ಇವೇ ಪ್ರೀತಿಯ ನೀರು, ಇದು ಅತಿಯಾದರೆ ಆ ಮರವು ಕೊಳೆತು ಹೋಗುತ್ತದೆ ಎನ್ನುವುದು ಸಿದ್ಧಾಂತ.

ಪ್ರೀತಿ ನಂಬಿಕೆ
ಬದುಕಿನ ಆಧಾರ ಸ್ತಂಭಗಳು



ಬದುಕು ಎಂಬುದು ಒಂದು ದೊಡ್ಡ ಮನೆ ಇದ್ದಂತೆ. ಆ ಮನೆ ಎಷ್ಟೇ ಸುಂದರವಾಗಿದ್ದರೂ, ಎಷ್ಟೇ ದೊಡ್ಡದಾಗಿದ್ದರೂ, ಅದಕ್ಕೆ ಗಟ್ಟಿಯಾದ ಅಡಿಪಾಯ ಮತ್ತು ಬಲವಾದ ಸ್ತಂಭಗಳು ಇಲ್ಲದಿದ್ದರೆ ಅದು ನಿಲ್ಲುವುದಿಲ್ಲ. ನಮ್ಮ ಬದುಕು ಎಂಬ ಮನೆಗೆ ಅಂತಹ ಎರಡು ಮುಖ್ಯ ಸ್ತಂಭಗಳೇ ಪ್ರೀತಿ ಮತ್ತು ನಂಬಿಕೆ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಒಂದು ಅಲುಗಾಡಿದರೆ ಇಡೀ ಬದುಕಿನ ಕಟ್ಟಡವೇ ನಡುಗುತ್ತದೆ.

ಪ್ರೀತಿ ಎಂದರೇನು?

ಅದು ಕೇವಲ ಒಂದು ಭಾವನೆಯಲ್ಲ. ಪ್ರೀತಿ ಅಂದರೆ ಸಿನಿಮಾದಲ್ಲಿ ತೋರಿಸುವ ಹಾಗೆ ಹೂ ಕೊಡುವುದು, ಹಾಡು ಹೇಳುವುದು ಮಾತ್ರ ಅಲ್ಲ. ಪ್ರೀತಿ ಎಂದರೆ ಅಂಗೀಕಾರ. ಬೇರೆಯವರನ್ನು ಅವರು ಇದ್ದ ಹಾಗೆ ಒಪ್ಪಿಕೊಳ್ಳುವುದು. ಅವರ ಒಳ್ಳೆಯ ಗುಣ ಮಾತ್ರ ಅಲ್ಲ, ಕೆಟ್ಟ ಗುಣವನ್ನೂ ಅರ್ಥ ಮಾಡಿಕೊಳ್ಳುವುದು.

ಒಂದು ತಾಯಿ ತನ್ನ ಮಗುವನ್ನು ಪ್ರೀತಿಸುವುದು ಹೇಗೆ? ಮಗು ರಾತ್ರಿ ಅಳುತ್ತಿದ್ದರೆ, ಮಲ-ಮೂತ್ರ ಮಾಡಿದರೆ, ಜ್ವರ ಬಂದರೆ ತಾಯಿ 'ಛೀ, ದೂರ ಹೋಗು' ಎನ್ನುವುದಿಲ್ಲ. ಎದ್ದು ಕೂತು ಸಂತೈಸುತ್ತಾಳೆ. ಅದು ಪ್ರೀತಿ. ಆ ಪ್ರೀತಿಯಲ್ಲಿ ನಿರೀಕ್ಷೆ ಇಲ್ಲ. 'ನೀನು ದೊಡ್ಡವನಾಗಿ ನನಗೆ ಮನೆ ಕಟ್ಟಿಸಿಕೊಡಬೇಕು' ಎಂಬ ವ್ಯಾಪಾರ ಇಲ್ಲ. ನೀನು ನನ್ನ ಮಗು, ಅಷ್ಟೇ ಸಾಕು ಎಂಬ ಭಾವ ಅದು.

ಗಂಡ-ಹೆಂಡತಿಯ ಪ್ರೀತಿಯೂ ಹಾಗೆಯೇ. ಹುಟ್ಟುಹಬ್ಬಕ್ಕೆ ಕೇಕ್ ತರುವುದು, ಪಾಯಸ ಮಾಡುವುದು ಪ್ರೀತಿಯ ಸಂಕೇತವಲ್ಲ. ಆದರೆ ನಿಜವಾದ ಪ್ರೀತಿ ಕಾಣುವುದು ಜಗಳವಾದ ಮರುದಿನ, ಕೋಪ ಇದ್ದರೂ ಅಡುಗೆ ಮಾಡಿ ಬಡಿಸುವಾಗ, ಕಷ್ಟದ ಸಮಯದಲ್ಲಿ ಮಾತನಾಡದೆ ಇರುವುದು, ಯಾವ ಕಾರಣ ಹೇಳದೆ ಹೊಟ್ಟೆ ನೋವು ಬಂದಾಗ, ಜಂಡೂ ಬಾಮ್ ಹಚ್ಚುವಾಗ, ಮಾತಾಡದಿದ್ದರೂ ಜೊತೆಯಲ್ಲಿ ಇರುವಾಗ. ನಿನ್ನ ತಪ್ಪನ್ನು ನಾನು ಕ್ಷಮಿಸಿದ್ದೇನೆ ಎಂದು ಹೇಳದೆ ತೋರಿಸುವುದು ಪ್ರೀತಿ.

ಪ್ರೀತಿ ಎಂದರೆ ತ್ಯಾಗವೂ ಹೌದು, ಆದರೆ ತನ್ನನ್ನು ಸಂಪೂರ್ಣವಾಗಿ ಅಳಿಸಿಕೊಳ್ಳುವ ತ್ಯಾಗ ಅಲ್ಲ. ಪ್ರೀತಿ ಎಂದರೆ ಇಬ್ಬರೂ ಜೊತೆಯಾಗಿ ಬೆಳೆಯುವುದು. ಒಂದು ಮರಕ್ಕೆ ನೀರು ಹಾಕಿದಂತೆ. ಪ್ರತಿದಿನ ಸ್ವಲ್ಪ ಸ್ವಲ್ಪ ಆರೈಕೆ ಮಾಡಿದರೆ ಮಾತ್ರ ಆ ಮರ ದೊಡ್ಡದಾಗಿ ಹೂವು, ಹಣ್ಣು ಕೊಡುತ್ತದೆ. ಒಂದು ದಿನ ನೀರು ಹಾಕದೆ ಹತ್ತು ದಿನ ಬಿಟ್ಟು ಒಂದು ಕೊಡ ನೀರು ಸುರಿದರೆ ಮರ ಬದುಕುವುದಿಲ್ಲ. ಪ್ರೀತಿಯೂ ಹಾಗೆಯೇ. ದಿನನಿತ್ಯದ ಸಣ್ಣ ಮಾತು, ಕಾಳಜಿ, ಸ್ಪರ್ಶ, ಕ್ಷಮೆ ಇವೇ ಪ್ರೀತಿಯ ನೀರು, ಇದು ಅತಿಯಾದರೆ ಆ ಮರವು ಕೊಳೆತು ಹೋಗುತ್ತದೆ ಎನ್ನುವುದು ಸಿದ್ಧಾಂತ.

ನಂಬಿಕೆ: ಕಾಣದ ಕಣ್ಣು

ಒಂದು ವೇಳೆ ಪ್ರೀತಿ ಹೃದಯವಾದರೆ, ನಂಬಿಕೆ ಅದರ ಉಸಿರು. ಉಸಿರು ಇಲ್ಲದೆ ಹೃದಯ ಬಡಿಯುವುದಿಲ್ಲ. ನಂಬಿಕೆ ಇಲ್ಲದೆ ಪ್ರೀತಿ ಬದುಕುವುದಿಲ್ಲ.

ಹಾಗಾದರೆ ನಂಬಿಕೆ ಎಂದರೆ ಏನು? ನಂಬಿಕೆ ಎಂದರೆ ಬೇರೆಯವರ ಮೇಲೆ ಕುರುಡಾಗಿ ವಿಶ್ವಾಸ ಇಡುವುದು ಅಲ್ಲ. ನಂಬಿಕೆ ಎಂದರೆ ನೀನು ನನಗೆ ಮೋಸ ಮಾಡುವುದಿಲ್ಲ ಎಂಬ ಧೈರ್ಯ. ನಾನು ಬಿದ್ದರೆ ನೀನು ಕೈ ಹಿಡಿದು ಎತ್ತುವೆ ಎಂಬ ಭರವಸೆ. ನನ್ನ ಬೆನ್ನ ಹಿಂದೆ ನೀನು ನನ್ನ ಬಗ್ಗೆ ಕೆಟ್ಟದಾಗಿ ಮಾತನಾಡುವುದಿಲ್ಲ ಎಂಬ ನೆಮ್ಮದಿ, ಇದು ಲೇಖಕರ ಅನುಭವ ಕೂಡ.

ಇಲ್ಲಿ ಒಂದು ಸುಂದರ ಸಣ್ಣ ಕಥೆ ಹೇಳುತ್ತೇನೆ ಒಬ್ಬ ಮುದುಕ ಇದ್ದ. ಅವನಿಗೆ ಇಬ್ಬರು ಮಕ್ಕಳು. ಒಬ್ಬ ಮಗ ಪ್ರತಿದಿನ ಅಪ್ಪ, ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ ಎಂದು ಹೇಳುತ್ತಿದ್ದ. ಇನ್ನೊಬ್ಬ ಮಗ ಏನೂ ಮಾತನಾಡುತ್ತಿರಲಿಲ್ಲ. ಆದರೆ ಅಪ್ಪನ ಊಟದ ತಟ್ಟೆ ಖಾಲಿಯಾದರೆ ಸದ್ದಿಲ್ಲದೆ ಅನ್ನ ಹಾಕುತ್ತಿದ್ದ. ಅಪ್ಪನ ಕೋಲು ಎಲ್ಲೋ ಬಿದ್ದಿದ್ದರೆ ತೆಗೆದುಕೊಡುತ್ತಿದ್ದ. ಅಪ್ಪನ ಮದ್ದಿನ ಡಬ್ಬಿ ಖಾಲಿಯಾದರೆ ಮರುದಿನ ಹೊಸದು ತಂದು ಇಡುತ್ತಿದ್ದ. ಒಂದು ದಿನ ಮುದುಕನಿಗೆ ಜ್ವರ ಬಂತು. ಮಾತಾಡುವ ಮಗ "ಅಪ್ಪ, ಚಿಂತೆ ಮಾಡಬೇಡ" ಎಂದು ಹೇಳಿ ಸಿನಿಮಾಗೆ ಹೋದ. ಮಾತಾಡದ ಮಗ ರಾತ್ರಿ ಪೂರ್ತಿ ಅಪ್ಪನ ಹಣೆ ಮೇಲೆ ಬಟ್ಟೆ ಹಾಕಿ ಕೂತ. ಮುದುಕನಿಗೆ ಆಗ ಅರ್ಥವಾಯಿತು. ಪ್ರೀತಿಯನ್ನು ಹೇಳಬಹುದು, ಆದರೆ ನಂಬಿಕೆಯನ್ನು ತೋರಿಸಬೇಕು. ಹಾಗೆಯೇ ಸಂಸಾರದಲ್ಲಿ ನಂಬಿಕೆ ಒಡೆದರೆ ಏನಾಗುತ್ತದೆ? ಗೀತಾ ಎಂಬ ಹೆಂಡತಿಯ ಗುಣದ ಬಗ್ಗೆ ಗಂಡ ತಮಾಷೆ ಮಾಡಿದಾಗ ಅವಳ ನಂಬಿಕೆ ಒಡೆಯಿತು. ಇಷ್ಟು ವರ್ಷ ನನ್ನನ್ನು ಹೀಗೆ ನೋಡುತ್ತಿದ್ದನಾ? ನನ್ನ ಮರ್ಯಾದೆಗೆ ಬೆಲೆ ಇಲ್ಲವಾ? ಎಂಬ ಪ್ರಶ್ನೆ ಹುಟ್ಟಿತು. ಪ್ರೀತಿ ಇದ್ದರೂ ನಂಬಿಕೆ ಇಲ್ಲದ ಮನೆ, ತಳಪಾಯ ಒಡೆದ ಮನೆ ಇದ್ದಂತೆ. ಅದಕ್ಕಾಗಿಯೇ ಒಬ್ಬರನ್ನು ಒಬ್ಬರು ಅರ್ಥ ಮಾಡಿಕೊಂಡು ಬದುಕುವುದೇ ನಿಜವಾದ ಪ್ರೀತಿ ಮತ್ತು ನಂಬಿಕೆ ಅಷ್ಟೇ.

> **ತಪ್ಪು ಮಾಡಿದಾಗ "Sorry" ಎಂಬ ಒಂದು ಪದ ಸಾಕು. ಅಹಂಕಾರ ಬಿಟ್ಟು ಕ್ಷಮೆ ಕೇಳಿ. ಬೇರೆಯವರು ತಪ್ಪು ಮಾಡಿದಾಗ ಸೇಡು ತೀರಿಸಿಕೊಳ್ಳುವ ಬದಲು ಕ್ಷಮಿಸಿ. ಕ್ಷಮೆ ಎಂದರೆ ಸೋಲು ಅಲ್ಲ. ಕ್ಷಮೆ ಎಂದರೆ "ನಮ್ಮ ಸಂಬಂಧ ನಿನ್ನ ತಪ್ಪಿಗಿಂತ ದೊಡ್ಡದು" ಎಂದು ತೋರಿಸುವುದು. ಅದು ಪ್ರೀತಿಯನ್ನು ಬೆಳೆಸುತ್ತದೆ, ನಂಬಿಕೆಯನ್ನು ಗಟ್ಟಿ ಮಾಡುತ್ತದೆ.**

ಪ್ರೀತಿ ಇಲ್ಲದೆ ನಂಬಿಕೆ ಇದ್ದರೆ ಹೇಗೆ? ನಂಬಿಕೆ ಇಲ್ಲದೆ ಪ್ರೀತಿ ಇದ್ದರೆ ಹೇಗೆ?

ಒಬ್ಬ ಬ್ಯಾಂಕ್ ಮ್ಯಾನೇಜರ್ ಇದ್ದಾನೆ ಎಂದುಕೊಳ್ಳಿ. ಅವನು ತುಂಬಾ ಪ್ರಾಮಾಣಿಕ. ನಿಮ್ಮ ದುಡ್ಡನ್ನು ಕದಿಯುವುದಿಲ್ಲ ಎಂಬ ನಂಬಿಕೆ ನಿಮಗೆ ಇದೆ. ಆದರೆ ಅವನಿಗೆ ನಿಮ್ಮ ಮೇಲೆ ಪ್ರೀತಿ ಇಲ್ಲ. ನೀವು ಕಷ್ಟದಲ್ಲಿ ಇದ್ದಾಗ ಅವನು ನಿಯಮ ಪುಸ್ತಕ ತೆಗೆದು ಕ್ಷಮಿಸಿ, ನಿಯಮ ಒಪ್ಪುವುದಿಲ್ಲ ಎನ್ನುತ್ತಾನೆ. ಅಲ್ಲಿ ನಂಬಿಕೆ ಇದೆ, ಪ್ರೀತಿ ಇಲ್ಲ. ಅದು ಕೇವಲ ವ್ಯವಹಾರ.

ಇನ್ನೊಂದು ಕಡೆ, ಒಬ್ಬ ಗೆಳೆಯ ಇದ್ದಾನೆ. ಅವನು ನಿಮ್ಮನ್ನು ತುಂಬಾ ಪ್ರೀತಿಸುತ್ತಾನೆ. ನಿನಗಾಗಿ ಪ್ರಾಣ ಕೊಡ್ತೀನಿ ಎನ್ನುತ್ತಾನೆ. ಆದರೆ ಅವನಿಗೆ ಜೂಜಾಟದ ಚಟ. ನಿಮ್ಮ ಬಳಿ ಸಾಲ ತಗೊಂಡು ವಾಪಸ್ ಕೊಡುವುದಿಲ್ಲ. ಅವನ ಮಾತು ನಂಬಲು ಆಗುವುದಿಲ್ಲ. ಅಲ್ಲಿ ಪ್ರೀತಿ ಇದೆ, ನಂಬಿಕೆ ಇಲ್ಲ. ಅದು ಕೇವಲ ಭಾವನೆ, ಬದುಕಿಗೆ ಆಧಾರ ಆಗುವುದಿಲ್ಲ.

ಬದುಕಿಗೆ ಬೇಕಾಗಿರುವುದು ಎರಡೂ. ತಂದೆ, ಮಗಳು, ಗುರು, ಶಿಷ್ಯ, ಗೆಳೆಯ, ಗೆಳತಿ, ಗಂಡ, ಹೆಂಡತಿ ಮಧ್ಯ ವಯಸ್ಸಿನ ಪ್ರೇಮಿಗಳು ಯಾವ ಸಂಬಂಧವೇ ಆಗಲಿ, ಈ ಎರಡು ಸ್ತಂಭಗಳು ಬೇಕು. ಒಂದು ಸ್ತಂಭ ಚಿಕ್ಕದಾದರೂ ಮನೆ ಓರೆಯಾಗುತ್ತದೆ.

ತಪ್ಪು ಮಾಡಿದಾಗ ಈ ಸ್ತಂಭಗಳು ಹೇಗೆ ಪರೀಕ್ಷೆಗೆ ಒಳಗಾಗುತ್ತವೆ

ಮನುಷ್ಯ ತಪ್ಪು ಮಾಡದೇ ಇರುವುದಿಲ್ಲ. ಮಾತಿನಲ್ಲಿ, ಕೃತ್ಯದಲ್ಲಿ, ಯೋಚನೆಯಲ್ಲಿ ತಪ್ಪು ಆಗುತ್ತದೆ. ಹುಟ್ಟುಹಬ್ಬದ ದಿನ ಹೆಂಡತಿಯ ಮನಸ್ಸು ನೋಯುವಂತೆ ಮಾತನಾಡುವುದು ತಪ್ಪು. ತಮಾಷೆಗೆ ಹೇಳಿದೆ ಎಂಬ ಸಮಜಾಯಿಷಿ ನೀಡುವುದು ಇನ್ನೂ ದೊಡ್ಡ ತಪ್ಪು. ಯಾಕೆಂದರೆ ಅದು ನೋವನ್ನು ಹಗುರ ಮಾಡುವ ಪ್ರಯತ್ನ.

ಆಗ ಪ್ರೀತಿಯ ಸ್ತಂಭ ಅಲುಗಾಡುತ್ತದೆ. "ಇವನು ನನ್ನನ್ನು ಪ್ರೀತಿಸುವುದೇ ಇಲ್ಲವೇನೋ" ಎಂಬ ಅನುಮಾನ ಹೆಂಡತಿಗೆ ಬರುತ್ತದೆ. ನಂಬಿಕೆಯ ಸ್ತಂಭವೂ ಬಿರುಕು ಬಿಡುತ್ತದೆ. "ನಾಳೆ ಇನ್ನೂ ದೊಡ್ಡ ತಮಾಷೆ ಮಾಡಿ ನನ್ನ ಮರ್ಯಾದೆ ತೆಗೆಯುತ್ತಾನಾ?" ಎಂಬ ಭಯ ಬರುತ್ತದೆ.

ಆದರೆ ಇಲ್ಲೇ ಈ ಸ್ತಂಭಗಳ ಶಕ್ತಿ ಗೊತ್ತಾಗುವುದು. ನಿಜವಾದ ಪ್ರೀತಿ ಇದ್ದರೆ, ಅದು ಕ್ಷಮೆ ಕೇಳಿಸುತ್ತದೆ. ನಾನು ತಪ್ಪು ಮಾಡಿದೆ, ನಿನ್ನ ಕ್ಷಮೆ ಬೇಡುತ್ತೇನೆ ಎಂದು ಮಂಡಿಯೂರಿ ಕೂರಿಸುತ್ತದೆ. ಕಣ್ಣೀರು ತರಿಸುತ್ತದೆ. ನಿಜವಾದ ನಂಬಿಕೆ ಇದ್ದರೆ, ಅದು ಎರಡನೇ ಅವಕಾಶ ಕೊಡುತ್ತದೆ. ಸರಿ, ಮತ್ತೆ ಹೀಗೆ ಆಗದಂತೆ ನೋಡಿಕೋ ಎಂದು ಹೇಳಿ ಕೈ ಹಿಡಿಯುತ್ತದೆ.

ಒಂದು ಗಾಜಿನ ಲೋಟ ಒಡೆದರೆ ಮತ್ತೆ ಕೂಡಿಸಲು ಆಗುವುದಿಲ್ಲ. ಆದರೆ ನಂಬಿಕೆ ಎಂಬುದು ಚಿನ್ನ ಇದ್ದಂತೆ. ಬಿರುಕು ಬಿಟ್ಟರೆ ಕರಗಿಸಿ ಮತ್ತೆ ಹೊಸ ಆಕಾರ ಕೊಡಬಹುದು. ಕಷ್ಟ, ಆದರೆ ಅಸಾಧ್ಯವಲ್ಲ. ಅದಕ್ಕೆ ಬೇಕಾಗಿರುವುದು ಪ್ರೀತಿಯ ಬೆಂಕಿ. ಪ್ರೀತಿಯ ಶಾಖದಲ್ಲಿ ಕರಗಿದ ನಂಬಿಕೆ ಮೊದಲಿಗಿಂತ ಗಟ್ಟಿಯಾಗುತ್ತದೆ.

ಸಮಾಜವೆಂಬ ದೊಡ್ಡ ಮನೆಗೆ ಈ ಸ್ತಂಭಗಳು ಹೇಗೆ ಆಧಾರ

ನಮ್ಮ ಮನೆ ಮಾತ್ರ ಅಲ್ಲ, ನಮ್ಮ ಊರು, ದೇಶ, ಸಮಾಜ ಎಲ್ಲಕ್ಕೂ ಈ ಎರಡು ಸ್ತಂಭಗಳು ಬೇಕು. ನೆರೆ ಹೊರೆ ಯವರ ಮೇಲೆ ನಂಬಿಕೆ ಇಲ್ಲದಿದ್ದರೆ ನಾವು ನೆಮ್ಮದಿಯಿಂದ ಮಲಗಲು ಆಗುವುದಿಲ್ಲ. ಅಂಗಡಿಯವನ ಮೇಲೆ ನಂಬಿಕೆ ಇಲ್ಲದಿದ್ದರೆ ಒಂದು ತರಕಾರಿ ಕೊಳ್ಳಲು ಆಗುವುದಿಲ್ಲ. ಬಸ್ ಡ್ರೈವರ್ ಮೇಲೆ ನಂಬಿಕೆ ಇಲ್ಲದಿದ್ದರೆ ಪ್ರಯಾಣ ಮಾಡಲು ಆಗುವುದಿಲ್ಲ.

ಪ್ರೀತಿ ಇಲ್ಲದ ಸಮಾಜ ಕಲ್ಲುಬಂಡೆ ಇದ್ದಂತೆ. ನಿಯಮ ಇರುತ್ತದೆ, ಕಾನೂನು ಇರುತ್ತದೆ, ಆದರೆ ಮಾನವೀಯತೆ ಇರುವುದಿಲ್ಲ. ರಸ್ತೆಯಲ್ಲಿ ಅಪಘಾತವಾಗಿ ಬಿದ್ದವನನ್ನು ಎಲ್ಲರೂ ನೋಡುತ್ತಾ ಹೋಗುತ್ತಾರೆ, ಯಾರೂ ಆಸ್ಪತ್ರೆಗೆ ಸೇರಿಸುವುದಿಲ್ಲ. ಯಾಕೆ? "ನನಗೇನು ಸಂಬಂಧ" ಎಂಬ ಭಾವ. ಅಲ್ಲಿ ನಂಬಿಕೆ ಇದ್ದರೂ ಪ್ರೀತಿ ಸತ್ತಿದೆ.

ಪ್ರೀತಿ ಇರುವ, ನಂಬಿಕೆ ಇರುವ ಸಮಾಜ ಹೇಗಿರುತ್ತದೆ? 2004ರ ಸುನಾಮಿ ಬಂದಾಗ ನೆನಪಿದೆಯಾ? ಯಾರು ಯಾರೋ, ಯಾವ ಜಾತಿ, ಯಾವ ಧರ್ಮ ಎಂದು ನೋಡದೆ ಜನ ಒಬ್ಬರಿಗೊಬ್ಬರು ಸಹಾಯ ಮಾಡಿದರು. ಮನೆ ಕೊಟ್ಟರು, ಊಟ ಕೊಟ್ಟರು, ಹೆಣವನ್ನು ಹೆಗಲ ಮೇಲೆ ಹೊತ್ತರು. ಅದು ಪ್ರೀತಿ. ಅಪರಿಚಿತನಾದರೂ ಇವನು ನನ್ನವನು ಎಂಬ ನಂಬಿಕೆ. ಆ ಎರಡು ಸ್ತಂಭಗಳ ಮೇಲೆ ಮತ್ತೆ ಊರಿಗೆ ಊರೇ ಎದ್ದು ನಿಂತಿತು.

ಈ ಸ್ತಂಭಗಳನ್ನು ಹೇಗೆ ಗಟ್ಟಿ ಮಾಡಿಕೊಳ್ಳುವುದು?

1. ಮಾತಿನಲ್ಲಿ ಜಾಗೃತಿ: ಬಾಯಿ ತಪ್ಪಿ ಬಂದ ಮಾತು ಕತ್ತಿಯ ಅಲಗಿಗಿಂತ ಹರಿತ. ಹೆಂಡತಿ, ಮಕ್ಕಳು, ಗೆಳೆಯರ ಕ್ಯಾರೆಕ್ಟರ್, ಮಾನ, ನಂಬಿಕೆ ಬಗ್ಗೆ ತಮಾಷೆ ಮಾಡಬೇಡಿ. ತಮಾಷೆಗೆ ಒಂದು ಗಡಿ ಇದೆ. ಆ ಗಡಿ ದಾಟಿದರೆ ಅದು ತಮಾಷೆ ಅಲ್ಲ, ಅಪಮಾನ. ನಾಲಿಗೆಯನ್ನು ಕಾಯುವುದು ಪ್ರೀತಿಯ ಮೊದಲ ಪಾಠ.

2. ಚಿಕ್ಕ ಚಿಕ್ಕ ಭರವಸೆ ಉಳಿಸಿಕೊಳ್ಳಿ: ಸಂಜೆ 6 ಗಂಟೆಗೆ ಬರುತ್ತೇನೆ ಅಂದರೆ 6 ಗಂಟೆಗೆ ಬನ್ನಿ. ನಾಳೆ ಫೋನ್ ಮಾಡುತ್ತೇನೆ ಅಂದರೆ ಮಾಡಿ. ಸುಳ್ಳು ಹೇಳುವುದು, ಮಾತು ತಪ್ಪುವುದು ನಂಬಿಕೆಯ ಸ್ತಂಭಕ್ಕೆ ಗೆದ್ದಲು ಹಿಡಿಯುವಂತೆ. ದಿನಾ ಸ್ವಲ್ಪ ಸ್ವಲ್ಪ ತಿನ್ನುತ್ತಾ ಒಂದು ದಿನ ಇಡೀ ಸ್ತಂಭವನ್ನೇ ಉರುಳಿಸುತ್ತದೆ.

3. ಕ್ಷಮೆ ಕೇಳಿ, ಕ್ಷಮಿಸಿ: ತಪ್ಪು ಮಾಡಿದಾಗ "Sorry" ಎಂಬ ಒಂದು ಪದ ಸಾಕು. ಅಹಂ ಕಾರ ಬಿಟ್ಟು ಕ್ಷಮೆ ಕೇಳಿ. ಬೇರೆಯವರು ತಪ್ಪು ಮಾಡಿದಾಗ ಸೇಡು ತೀರಿಸಿಕೊಳ್ಳುವ ಬದಲು ಕ್ಷಮಿಸಿ. ಕ್ಷಮೆ ಎಂದರೆ ಸೋಲು ಅಲ್ಲ. ಕ್ಷಮೆ ಎಂದರೆ "ನಮ್ಮ ಸಂಬಂಧ ನಿನ್ನ ತಪ್ಪಿಗಿಂತ ದೊಡ್ಡದು" ಎಂದು ತೋರಿಸುವುದು. ಅದು ಪ್ರೀತಿಯನ್ನು ಬೆಳೆಸುತ್ತದೆ, ನಂಬಿಕೆಯನ್ನು ಗಟ್ಟಿ ಮಾಡುತ್ತದೆ.

4. ಕಷ್ಟದಲ್ಲಿ ಜೊತೆಯಾಗಿ ನಿಲ್ಲಿ: ಸುಖದಲ್ಲಿ ಎಲ್ಲರೂ ಜೊತೆ ಇರುತ್ತಾರೆ. ಜ್ವರ ಬಂದಾಗ, ಸಾಲ ಆದಾಗ, ಕೆಲಸ ಹೋದಾಗ, ಮನಸ್ಸು ನೋವಾದಾಗ ಯಾರು ಜೊತೆಯಲ್ಲಿ ಇರುತ್ತಾರೋ ಅವರೇ ನಿಜವಾದವರು. ಆ ಸಮಯದಲ್ಲಿ ಬರೀ ಮಾತು ಸಾಲದು. ಕೈ ಹಿಡಿದು "ನಾನು ಇದೀನಿ" ಎನ್ನಬೇಕು. ಅದು ನಂಬಿಕೆಗೆ ನೀರು ಎರೆಯುತ್ತದೆ.

5. ನಿಮ್ಮನ್ನು ನೀವು ಪ್ರೀತಿಸಿ, ನಂಬಿಸಿ: ಇದು ಬಹಳ ಮುಖ್ಯ. ನಮ್ಮ ಮೇಲೆ ನಮಗೆ ನಂಬಿಕೆ ಇಲ್ಲದಿದ್ದರೆ ಬೇರೆಯವರನ್ನು ಹೇಗೆ ನಂಬುತ್ತೇವೆ? ನಾನು ಹೇಡಿ, ನಾನು ಸೋತವನು ಎಂದು ಕೊಂಡರೆ ಬದುಕಲು ಆಗುವುದಿಲ್ಲ. ನಾನು ತಪ್ಪು ಮಾಡಿದೆ, ಆದರೆ ನಾನು ಸರಿಪಡಿಸಿ ಕೊಳ್ಳಬಲ್ಲೆ ಎಂಬ ನಂಬಿಕೆ ಮೊದಲು ನಮ್ಮ ಮೇಲೆ ಇರಬೇಕು. ನಾನು ಪ್ರೀತಿಗೆ ಅರ್ಹನು ಎಂದು ನಮ್ಮನ್ನು ನಾವು ಒಪ್ಪಿಕೊಳ್ಳಬೇಕು. ಆಗ ಮಾತ್ರ ನಾವು ಬೇರೆಯವರಿಗೆ ಪ್ರೀತಿ ಕೊಡಲು, ಅವರ ನಂಬಿಕೆ ಗಳಿಸಲು ಸಾಧ್ಯ.

ಉಬಾಮ ಲಾಸ್ಟ್ ಲೈನ್ಸ್ : ಈ ಸ್ತಂಭಗಳು ಇದ್ದರೆ ಸಾವು ಕೂಡ ಸುಂದರ

ಮನುಷ್ಯ ಸಾಯುವಾಗ ದುಡ್ಡು, ಬಂಗಲೆ, ಕಾರು ಏನೂ ಜೊತೆಯಲ್ಲಿ ಬರುವುದಿಲ್ಲ. ಬರುವುದು ಎರಡೇ. ಒಂದು, ನಾವು ಕೊಟ್ಟ ಪ್ರೀತಿ. ಎರಡು, ನಾವು ಗಳಿಸಿದ ನಂಬಿಕೆ. "ಅಪ್ಪ ನನ್ನನ್ನು ತುಂಬಾ ಪ್ರೀತಿಸುತ್ತಿದ್ದರು" ಎಂದು ಮಗಳು ಕಣ್ಣೀರಿಡುವುದು. ಅವನು ಮಾತು ತಪ್ಪಿದವನಲ್ಲ ಎಂದು ಗೆಳೆಯ ನೆನೆಯುವುದು. ಇದೇ ಬದುಕಿನ ಸಂಪಾದನೆ.

ಹಾಗೆಯೇ ಗೀತಾ ಎಂಬ ಮಹಿಳೆ ಇವತ್ತು ತನ್ನ ಗಂಡನ ಮೇಲೆ ಕೋಪ ಮಾಡಿಕೊಂಡಿರಬಹುದು. ಆದರೆ 30 ವರ್ಷದ ಸಂಸಾರ ಸುಳ್ಳಲ್ಲ. ಆ 30 ವರ್ಷದಲ್ಲಿ ಕಟ್ಟಿದ ಪ್ರೀತಿಯ ಸ್ತಂಭ, ನಂಬಿಕೆಯ ಸ್ತಂಭ ಸುಲಭವಾಗಿ ಬೀಳುವುದಿಲ್ಲ. ಒಂದು ತಪ್ಪು ಮಾತು ಬಿರುಕು ತಂದಿರಬಹುದು. ಆದರೆ ಈಗ ಕ್ಷಮೆಯ ಸಿಮೆಂಟಿನಿಂದ, ಪ್ರೀತಿಯ ನೀರಿನಿಂದ ಅದನ್ನು ಮತ್ತೆ ಗಟ್ಟಿ ಮಾಡಬಹುದು.

ಪ್ರೀತಿ ಇಲ್ಲದ ಬದುಕು ಮರುಭೂಮಿ. ನಂಬಿಕೆ ಇಲ್ಲದ ಬದುಕು ಚಂಡಮಾರುತ. ಎರಡೂ ಇದ್ದರೆ ಮಾತ್ರ ಬದುಕು ತೋಟವಾಗುತ್ತದೆ, ಮನೆಯಾಗುತ್ತದೆ, ದೇಗುಲವಾಗುತ್ತದೆ. ಸುಂದರ ಸಮಾಜ ನಿರ್ಮಾಣವಾಗುತ್ತದೆ. ಏನಂತೀರಾ!?

ಡಾ. ಉಮೇಶ್ ಬಾಬು ಮಠದ್ (ಉಬಾಮ)
ಸಾಹಿತಿ ಹಾಗೂ ಸಾಮಾಜಿಕ ಚಿಂತಕರು
ಮೊ: 9606363449

ವಾರಭವಿಷ್ಯ

28.06.2026 ರಿಂದ 4.07.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಿಥುನ, ಚಂದ್ರ- ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ-ವೃಷಭ, ಬುಧ-ಕಟಕ, ಗುರು-ಕಟಕ, ಶುಕ್ರ-ಕಟಕ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)
ವ್ಯಾಪಾರ ವ್ಯವಹಾರಗಳು ನಿರೀಕ್ಷಿತ ಹಾದಿಯಲ್ಲಿ ಸಾಗುತ್ತಿಲ್ಲ. ನಿಮ್ಮ ಆತ್ಮ ವಿಶ್ವಾಸದಲ್ಲಿ ಕೊರತೆ ಉಂಟಾಗಿದೆ. ಹೂಡಿಕೆಗಳಲ್ಲಿ ಸಾಧಾರಣ ಲಾಭವನ್ನು ಕಾಣಬಹುದು. ಪುಣ್ಯವಶಾತ್ ಗುರು-ಹಿರಿಯರ, ಅನುಭವಿಗಳ ಮಾರ್ಗದರ್ಶನ ದೊರೆಯುವುದು. ವ್ಯಯಭಾವದಲ್ಲಿರುವ ಶನಿದೇವ ನಿಮ್ಮನ್ನು ಹಲವು ರೀತಿಯ ಪರೀಕ್ಷೆಗೆ ಗುರಿಪಡಿಸುವನು. ಮಡದಿ ಮಕ್ಕಳ ಜೊತೆ ವಾದ-ವಿವಾದಗಳಿಗೆ ಆಸ್ಪದ ಕೊಡಬೇಡಿ. ವಿಕೋಪಕ್ಕೆ ಹೋಗಬಹುದು.
ಶ್ರೀ ಶನ್ಯಾಷ್ಟೋತ ಪಠಿಸಿ. ಶುಭ ಸಂಖ್ಯೆ-5

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ವಾರದ ಆರಂಭಕ್ಕೆ ಶುಭ ಸುದ್ದಿ ಬರುವುದು. ಇಷ್ಟಪಟ್ಟ ವಸ್ತುಗಳನ್ನು ಖರೀದಿಸುವಿರಿ. ಯುವಕರಿಗೆ ಹೆಂಗೆಳೆಯರ ಸ್ನೇಹವಾಗುವುದು. ಗೋವು ಪಾಲಕರಿಗೆ ಹೆಚ್ಚಿನ ಹಣ ಸಂಪಾದನೆ ಆಗುವುದು. ವಾರ ಮಧ್ಯೆ ಮಿತ್ರರ ಸಮಾಗಮ, ಸಂತೋಷ ಕೂಟಗಳು ಜರುಗುವುದು. ಸರ್ಕಾರಿ ನೌಕರರಿಗೆ ಮೇಲು ಅಧಿಕಾರಿಗಳ ಕಾಕದೃಷ್ಟಿ ನಿಮ್ಮ ಬುದ್ಧಿ ನಿಮ್ಮ ಕೈಯ್ಯಲ್ಲಿ ಇರಲಿ. ನಿಮ್ಮ ಆರೋಗ್ಯವನ್ನು ಅಲಕ್ಷಿಸಬೇಡಿ.
ಶ್ರೀ ನಿಮಿಷಾಂಬದೇವಿ ದರ್ಶನ. ಶುಭ ಸಂಖ್ಯೆ-3

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಇದೀಗ ಶುಭ ಸ್ಥಾನಕ್ಕೆ ಬಂದಿರುವ ಉಚ್ಚ ಗುರುವಿನ ರಕ್ಷಣೆ ನಿಮ್ಮನ್ನು ಸರ್ವ ವಿಧದಲ್ಲೂ ಕಾಪಾಡಲಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ಜರುಗಬಹುದು. ಕೆಲವು ಕಷ್ಟಕರ ಸನ್ನಿವೇಶಗಳು ಎದುರಾದರೂ ಗುರುಕೃಪೆಯಿಂದ ಸೂರ್ಯನೆದುರಲಿ ಮಂಜು ಕರಗಿದಂತೆ ಮಾಯವಾಗುವುದು. ಬಂದ ಅವಕಾಶಗಳು ಕೈ ಬಿಟ್ಟು ಹೋಗದಂತೆ ನಡೆದುಕೊಳ್ಳಿ, ಇದಕ್ಕೆ ಪೂರಕವೆಂಬಂತೆ ಬಂಧು-ಮಿತ್ರರ ಸಮಯೋಚಿತ ಸಹಾಯ ದೊರಕುವುದು.
ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ-8

ಕಟಕ (ಹಿ,ಹು,ಹೆ,ಹೊ,ಡ,ಡಿ,ಡು)
ಕುಟುಂಬ ನಿರ್ವಹಣಾ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಬಹುದು. ದಂತ ಹೋದರೂ ಪಂಥ ಬಿಡೆ ಎಂಬಂತೆ ನಡೆದು ಸಂಕಷ್ಟಕ್ಕೆ ಗುರಿಯಾಗುವಿರಿ. ಬುದ್ಧಿವಂತರಾದ ನೀವು ಜಾಣ್ಮೆಯಿಂದ ನಿಭಾಯಿಸುವಿರಿ. ಕೈಗೆ ಹಣ ಬಂದರೂ ಅನಾವಶ್ಯಕ ಖರ್ಚುಗಳು ಎದುರಾಗುತ್ತವೆ. ಶ್ರೀಮತಿಯ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಬಹುದು. ಉದ್ಯಮ ನಡೆಸುವವರಿಗೆ ಕಾರ್ಮಿಕರ ಅಸಹಕಾರದಿಂದ ನಷ್ಟವಾದೀತು. ಮಂಡಿ ನೋವು ಕಾಡಿಸುವುದು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವಾರದಾರಂಭಕ್ಕೆ ಅನಾವಶ್ಯಕ ಜಗಳಗಳಿಂದ ಜೀವನದ ಸರಸ ಸಮಯ ಹಾಳಾಗದಂತೆ ಎಚ್ಚರ ವಹಿಸಿ. ಇದಕ್ಕಾಗಿ ನೀವು ಸ್ವಪ್ರತಿಷ್ಠೆಯನ್ನು ತ್ಯಾಗ ಮಾಡಿದರೆ ಮನಃಕ್ಲೇಷಗಳು ದೂರವಾಗುತ್ತವೆ. ವಾರದ ಉತ್ತರಾರ್ಧಕ್ಕೆ ದೇಹ ಸುಖ, ಮಿತ್ರರ ಸಮಾಗಮ ಧನಲಾಭಗಳು ಉಂಟಾಗುವುದು. ಅಧಿಕಾರಿ ವರ್ಗದವನ ಕೃಪಾದೃಷ್ಟಿಯಿಂದ ಕಾರ್ಯಸಾಧನೆ. ಕಾನೂನು ಮೀರಿ ವರ್ತಿಸಿ ಸರ್ಕಾರಕ್ಕೆ ದಂಡ ತೆರಬೇಕಾದೀತು.
ಶ್ರೀ ಗುರುಸ್ತೋತ್ರ ಪಠಿಸಿ. ಶುಭ ಸಂಖ್ಯೆ-2

ಕನ್ಯಾ (ಟೊ,ಪ,ಪಿ,ಪು,ಘ,ಣ,ಠ,ಪೆ,ಪೊ)
ಗುರು ಲಾಭ ಸ್ಥಾನಕ್ಕೆ ಪಲ್ಲಟವಾಗಿದೆ. ಸಪ್ತಾಹದ ಪೂರ್ವಾರ್ಧಕ್ಕೆ ಧನಲಾಭ, ದೇಹ ಸೌಖ್ಯ, ಸಾರ್ವಜನಿಕ ವ್ಯವಹಾರಗಳಲ್ಲಿ ಪ್ರಗತಿ. ನ್ಯಾಯಾಲಯ ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆಗಳು ಉಂಟಾದರೆ, ಉತ್ತರಾರ್ಧಕ್ಕೆ ಕೆಲಸ ಸ್ಥಳದಲ್ಲಿ ಒತ್ತಡಗಳು. ಶುಭ … ಗುರುವಿನ ಪರಿಣಾಮ ಸಾಮಾಜಿಕವಾಗಿ ಗೌರವಾದರಗಳ ಪ್ರಾಪ್ತಿ. ಮನೆಯಲ್ಲಿ ಉಂಟಾಗಿದ್ದ ತಪ್ಪು ತಿಳುವಳಿಕೆಗಳು ನಿವಾರಣೆಯಾಗಿ ಮನಸ್ಸಿಗೆ ಹರ್ಷ.
ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-7

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ವಾರದಾರಂಭ ಆಶಾದಾಯಕವಾಗಿದೆ. ಮಿತ್ರರ ಮಿಲನ, ಸುಖ, ಸಂತೋಷಗಳು, ಮನಸ್ಸಿಗೆ ಮುದ ನೀಡುವ ಪ್ರಸಂಗಗಳು, ಗುರುಗಳ ಭೇಟಿಯಿಂದ ಅನುಮಾನ ಪರಿಹಾರ, ಹಿರಿಯರ ಒತ್ತಾಸೆಯಿಂದ ಪ್ರಮುಖ ಕೆಲಸಗಳು ಸುಖಾಂತ್ಯವಾಗುವುದು. ನಿಮ್ಮ ರಾಶ್ಯಾಧಿಪತಿಯ ಶುಭ ಸಂಚಾರದಿಂದ ಧೈರ್ಯಶಾಲಿಗಳೆನಿಸಿ ಸಮಾಜದಲ್ಲಿ ಮನ್ನಣೆ ಗಳಿಸುವಿರಿ. ಶುಭ ಕಾರ್ಯಕ್ಕೆ ಧನ ವಿನಿಯೋಗ. ಸಣ್ಣ ಪುಟ್ಟ ಆರೋಗ್ಯ ಸಮಸ್ಯೆ ಎದುರಾಗುವುದು.
ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-9

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ನಿಮ್ಮ ಆತ್ಮ ವಿಶ್ವಾಸದಲ್ಲಿ ವೃದ್ಧಿ ಉಂಟಾಗಿದೆ. ವ್ಯಾಪಾರ ವ್ಯವಹಾರಗಳು ನಿಮ್ಮ ನಿರೀಕ್ಷೆಯಂತೆ ಸಾಗಿದೆ. ನಿಮ್ಮ ರಾಶಿಯಲ್ಲಿ ಹಾಗೂ ದ್ವಿತೀಯದಲ್ಲಿ ಸಂಚರಿಸುವ ಚಂದ್ರನಿಂದ ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ಗುರು-ಹಿರಿಯ ಮಾರ್ಗದರ್ಶನ ದೊರೆತು ಮನದ ಬೇಗುದಿ ನಿವಾರಣೆ ಆಗುವುದು. ಆಕಸ್ಮಾತ್ ಧನ ಲಾಭವಾಗುವ ಸಂಭವವಿದೆ. ವಾರದ ಕಡೆಗೆ ಲಘು ಪ್ರವಾಸಗಳು, ಫುಡ್ ಪಾಯ್ಸನ್ ಬಗ್ಗೆ ಎಚ್ಚರವಿರಲಿ.
ಶ್ರೀ ಸುಬ್ರಹ್ಮಣ್ಯ ಆರಾಧನೆ, ಶುಭ ಸಂಖ್ಯೆ-7

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಕೈಗೊಂಡ ಕೆಲಸ ಕಾರ್ಯಗಳು ಪರಿಶ್ರಮದಿಂದ ಸಿದ್ಧಿಸುತ್ತವೆ. ವಿಫಲತೆಯೇ ಸಫಲತೆಯೇ ಸೋಪಾನ ನಿಮಗೆ ನೆರೆಹೊರೆಯವರ ಸಹಾಯಹಸ್ತದ ಅಗತ್ಯವಿದೆ. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರದಿಂದ ನಷ್ಟ ಉಂಟಾದೀತು. ಬ್ಲೇಡ್ ಕಂಪನಿಗಳ ಸಹವಾಸದಿಂದ ದೂರವಿರಿ. ಅಷ್ಟಮ ಗುರುವಿನ ಕಾರಣ ಮನೆಯಲ್ಲಿ ತಪ್ಪು ತಿಳುವಳಿಕೆಯ ಕಾರಣ ಮನಃಶಾಂತಿ ಕೆಡುವುದು. ಶುಭ ಸಮಯ ಬರುವವರೆಗೆ ಕಾಯುವುದು ಜಾಣತನ.
ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ-1


ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ವಾರಪೂರ್ತಿ ಶುಭ ಚಂದ್ರನ ಸಂಚಾರದಿಂದ ಮನೋಲ್ಲಾಸ, ಆತ್ಮೀಯರ ಮಿಲನ, ಮೃಷ್ಟಾನ್ನ ಭೋಜನ. ಬುದ್ಧಿ ಕುಶಲತೆಯಿಂದ ಇಷ್ಟ ಸಿದ್ಧಿ. ಸರ್ಕಾರಿ ನೌಕರರಿಗೆ ಬಡ್ತಿ ದೊರೆಯುವ ಸಾಧ್ಯತೆ. ಸಿಮೆಂಟ್, ಆಟೋ ಮೊಬೈಲ್ ಬಿಸಿನೆಸ್ ಹೆಚ್ಚಿನ ಧನ ಲಾಭವಾಗುವುದು. ಉಚ್ಚ ಗುರುವಿನ ಕೃಪೆಯಿಂದ ಪ್ರಭಾವಿ ವ್ಯಕ್ತಿಗಳ ಸಂಪರ್ಕ ಉಂಟಾಗಿ ಸುದೀರ್ಘ ಸಮಯದ ಸಮಸ್ಯೆಗಳು ಬಗೆಹರಿಯುವ ಸೂಚನೆ ಇರುತ್ತದೆ.
ಶ್ರೀ ಸತ್ಯನಾರಾಯಣ ವ್ರತ ಕಥೆ ಓದಿ. ಶುಭ ಸಂಖ್ಯೆ-6

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಸಾಡೇಸಾತಿ ಶನಿಪ್ರಭಾವ ಮುಂದುವರೆಯಲಿದೆ. ಸದ್ಯದಲ್ಲೇ ಯತ್ನ ಕಾರ್ಯಗಳು ಸಫಲವಾಗಬೇಕೆಂದರೆ ತಾಳ್ಮೆ ಹಾಗೂ ಪರಿಶ್ರಮದ ಅಗತ್ಯವಿದೆ. ಕೆಲವೊಮ್ಮೆ ವಾಮಮಾರ್ಗದಿಂದ ಧನಲಾಭವಾಗುತ್ತದೆ. ಇಷ್ಟಪಟ್ಟ ವಸ್ತುಗಳನ್ನು ಖರೀದಿಸುವಿರಿ. ಪರೋಪಕಾರಿಗಳೆನಿಸಿ ಜನಾದರಕ್ಕೆ ಪಾತ್ರರಾಗುವಿರಿ. ರಾಹು-ಕೇತುಗಳ ಕರ್ತರಿಯೋಗ ಇರುವ ಕಾಣ ಇಲ್ಲಸಲ್ಲದ ಕೆಲಸಕ್ಕೆ ಕೈ ಹಾಕದಿರಿ. ಸಂಕಷ್ಟಗಳಿಗೆ ಗುರಿಯಾಗುವ ಸಂಭವವಿದೆ.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-3

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಶ್ರೀ ಗುರುವಿನ ರಕ್ಷೆ ಇದ್ದರೂ ಶನಿ ಕಾಟ ತಪ್ಪಿಲ್ಲ. ಹಿಡಿದ ಕಾರ್ಯಗಳು ಮಂದಗತಿಯಲ್ಲಿ ಸಾಗುವುದು. ನಿಮ್ಮ ಬುದ್ಧಿಮತ್ತೆಯಲ್ಲಿ ಚುರುಕುತನ ಕಾಣದು. ವಾರ ಮಧ್ಯೆ ಮನೆಗೆ ನೆಂಟರಿಷ್ಟರ ಆಗಮನ ಅವರ ಸತ್ಕಾರಕ್ಕೆ ಹಣ ವೆಚ್ಚವಾಗುವುದು. ಖರ್ಚು-ವೆಚ್ಚಗಳು ಜಾಸ್ತಿಯಾದರೂ ಇನ್ನೊಂದು ಮೂಲದಿಂದ ಹಣ ಸಂಗ್ರಹವಾಗುವುದು. ಮನೆ ಮಂದಿಯೊಂದಿಗೆ ಸರಸ-ವಿರಸಗಳು ಸಮನಾಗಿ ಘಟಿಸುವುದು. ಡ್ರೈವಿಂಗ್‌ನಲ್ಲಿ ಎಚ್ಚರಿಕೆಯಿಂದ ಇರಿ.
ಶ್ರೀ ದತ್ತಗುರು ದರ್ಶನ. ಶುಭ ಸಂಖ್ಯೆ-9

ಮಕ್ಕಳ ಚಿತ್ರಕಥೆ: ತಕ್ಷಣವೇ ಇವರಿಬ್ಬರನ್ನೂ ಕೊಂದುಬಿಡಿ....!

■ ಹೆಚ್.ಜಿ.ಎನ್.ಪ್ರಸಾದ್ ಮೊ. 98453 76199



ಕೆ.ಆರ್.ನಗರದಲ್ಲಿ ಕೆಂಪೇಗೌಡರ ಜಯಂತಿ ಅದ್ದೂರಿ ಆಚರಣೆ

ಸೂಕ್ತ ಜಾಗ ಸಿಕ್ಕರೆ ಕೆಂಪೇಗೌಡರ ಪುತ್ಥಳಿ ಅನಾವರಣ

ಕೆ.ಆರ್.ನಗರ: ವಿಶ್ವದಲ್ಲಿಯೇ ಸಿಲಿಕಾನ್ ಸಿಟಿಯಾಗಿ ಖ್ಯಾತಿ ಪಡೆದ ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಕರ್ನಾಟಕದಾದ್ಯಂತ ಅದ್ದೂರಿಯಿಂದ ಆಚರಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದ್ದಾರೆ.

ತಾಲೂಕು ಆಡಳಿತ, ತಾಲೂಕು ಪಂಚಾಯಿತಿ ಹಾಗೂ ಪುರಸಭೆ ಕೃಷ್ಣರಾಜನಗರ ಮತ್ತು ಸಾಲಿಗ್ರಾಮ ಇವರ ಸಂಯುಕ್ತ ಆಶ್ರಯದಲ್ಲಿ ತಾಲೂಕು ಕಚೇರಿ ಆವರಣದಲ್ಲಿ ನಡೆದ 517ನೇ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಮಾಜದ ಒಳಿತಿಗಾಗಿ ಮುಂದಿನ ಪೀಳಿಗೆಯನ್ನು ಮುನ್ನಡೆಸಲು ನಾಡಪ್ರಭು ಕೆಂಪೇಗೌಡರು ಹಲವಾರು ಕೊಡುಗೆಗಳನ್ನು ಕೊಟ್ಟಿದ್ದು, ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದಾರೆ. ಇಂತಹ ಮಹನೀಯರ ಆದರ್ಶಗಳನ್ನು ತತ್ವಗಳನ್ನು ಮೈಗೂಡಿಸಿಕೊಂಡಾಗ ನಾವು ಸಹ ನಮ್ಮ ಮುಂದಿನ ಪೀಳಿಗೆಗೆ ಆದರ್ಶಪ್ರಾಯರಾಗಿ ನಿಲ್ಲಲು ಸಾಧ್ಯವಾಗುತ್ತದೆ ಎಂದ ಅವರು ಇಂತಹ ಮಹನೀಯರ ಜಯಂತಿಗೆ ಯಾವುದೇ ಜಾತಿ, ಸಮುದಾಯ, ಸಂಘ, ಧರ್ಮಗಳ ತಾರತಮ್ಯ ಇರಬಾರದು. ಇಂತಹ ಮಹನೀಯರು ಯಾವುದೇ ಧರ್ಮ, ಪಕ್ಷಕ್ಕೆ ಸೀಮಿತವಾಗಿರುವುದಿಲ್ಲ ಎಂದರು.

ಸಮುದಾಯದವರು ಕೆಂಪೇಗೌಡರ ಪ್ರತ್ಥಳಿ ನಿರ್ಮಾಣಕ್ಕೆ ಯೋಗ್ಯವಾದ ಸ್ಥಳವನ್ನು ಗುರುತಿಸಿ ಕೊಟ್ಟರೆ ಅಲ್ಲಿ ಪುತ್ಥಳಿ ನಿರ್ಮಿಸಿ ಕೊಡುವ ಕೆಲಸವನ್ನು ನಾನು ಮಾಡುತ್ತೇನೆ. ಅಲ್ಲದೆ ಪುರಸಭೆಯ ವ್ಯಾಪ್ತಿಯಲ್ಲಿ ನಗರದ ಯಾವುದಾದರೂ ಮುಖ್ಯ ರಸ್ತೆಗೆ ಕೆಂಪೇಗೌಡರ ಹೆಸರನ್ನು ಇಡಲು ಮುಂದಿನ ದಿನಗಳಲ್ಲಿ ಚರ್ಚಿಸಲಾಗುವುದು ಎಂದು ಸಹ ಅವರು ಈ ಸಂದರ್ಭದಲ್ಲಿ ತಿಳಿಸಿದರು.

ತಹಸೀಲ್ದಾರ್ ಸುರೇಂದ್ರ ಮೂರ್ತಿ ಮಾತನಾಡಿ ಬೆಂಗಳೂರು ಇಂದು ಅಭಿವೃದ್ಧಿಯಾಗಿ ವಿಶ್ವದಲ್ಲಿ ಗುರುತಿಸಿಕೊಂಡಿದೆ ಎಂದರೆ ಅದಕ್ಕೆ ಮೂಲ ಕಾರಣ ನಾಡಪ್ರಭು ಕೆಂಪೇಗೌಡ ಅವರು ಅವರ ಸಾಧನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಇಂತಹ ಜಯಂತಿಗಳಿಗೆ ಅರ್ಥ ನೀಡೋಣ ಎಂದರು.

ಬೆಂಗಳೂರು ಸಿಲಿಕಾನ್ ಸಿಟಿಯಾಗಿ ರೂಪುಗೊಳ್ಳಲು ಪ್ರಮುಖ ರೂವಾರಿ ನಾಡಪ್ರಭು ಕೆಂಪೇಗೌಡ ಅವರು. ಅವರ ದೂರದೃಷ್ಟಿಕೋನ ಬೆಂಗಳೂರು ಇಂದು ಮಹಾನಗರಿಯಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಕೃಷಿಗೆ ಆದ್ಯತೆ ನೀಡಿ ಸಾವಿರಾರು ಕೆರೆಗಳನ್ನು ನಿರ್ಮಾಣ ಮಾಡುವ ಜೊತೆಗೆ 56 ಪೇಟೆಗಳನ್ನು ನಿರ್ಮಾಣ ಮಾಡಿದ್ದಲ್ಲದೆ, ಸಮಾಜದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಶ್ರಮಿಸಿದವರು ಕೆಂಪೇಗೌಡ ಅವರು ಎಂದರು.

ಕಾರ್ಯಕ್ರಮದ ಪ್ರಧಾನ ಭಾಷಣಕಾರರಾಗಿ ಆಗಮಿಸಿದ್ದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಪ್ರಭು ಮಾತನಾಡಿ ಒಂದು ನಾಡನ್ನು ಕಟ್ಟಲು ಬೇಕಾದ ಎಲ್ಲಾ ರೀತಿಯ ಆಲೋಚನೆಗಳನ್ನು ಹೊಂದಿದವರು ನಾಡಪ್ರಭು ಕೆಂಪೇಗೌಡ ಅವರು. ಅದಕ್ಕೆ ನಿದರ್ಶನವಾಗಿ ಇಂದು ಬೆಂಗಳೂರು ನಮ್ಮ ಮುಂದಿದೆ ಬೆಂಗಳೂರಿನ ಸೌಂದರ್ಯವನ್ನು ಮುಕ್ಕಾಗದಂತೆ ನಿರ್ಮಿಸಿದ ಇವರ ವ್ಯಕ್ತಿತ್ವವನ್ನು ನೆನೆಯುವುದಲ್ಲದೆ ಯಾವುದೇ ನಾಡನ್ನು ಕಟ್ಟುವ ನಿಟ್ಟಿನಲ್ಲಿ ಇವರ ಸಾಧನೆಯನ್ನು ಪರಿಗಣಿಸಬೇಕಾದ ಅಗತ್ಯತೆ ಇದೆ ಎಂದರು.

ಕಾರ್ಯಕ್ರಮದ ಆರಂಭಕ್ಕೂ ಮೊದಲು ಕೆಂಪೇಗೌಡರ ಭಾವಚಿತ್ರವನ್ನು ಬೆಳ್ಳಿರಥದಲ್ಲಿರಿಸಿ ಪಟ್ಟಣದ ಕಾಲೇಜು ಆವರಣದಿಂದ ವಿವಿ ರಸ್ತೆ ಮೂಲಕ 101 ಕಳಶಗಳ ಪೂರ್ಣ ಕುಂಭದೊಂದಿಗೆ ಹಾಗೂ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮೂಲಕ ತರಲಾಯಿತು.

ಕಾರ್ಯಕ್ರಮದಲ್ಲಿ ಸಾಲಿಗ್ರಾಮ ತಾಲೂಕಿನ ತಹಸೀಲ್ದಾರ್ ರುಕೀಯ ಬೇಗಂ, ತಾ.ಪ..ಇಓ ರವಿ ಎ.ಎನ್, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ಆರ್, ಪುರಸಭೆ ಮುಖ್ಯಾಧಿಕಾರಿ ರಮೇಶ್ ಜಿ.ಎಸ್, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಡಿಂ.ಡಿಂ.ಶಂಕರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಸಾಲಿಗ್ರಾಮ ತಾಲೂಕಿನ ಅಧ್ಯಕ್ಷ ಉದಯ ಶಂಕರ್, ಕೆ.ಆರ್.ನಗರ ತಾಲೂಕಿನ ಅಧ್ಯಕ್ಷ ಎಂ ಎಸ್ ಮಹದೇವ್, ಹಿರಿಯ ವಕೀಲ ರಾಮೇಗೌಡ, ಕಾಂಗ್ರೆಸ್ ಮುಖಂಡ ನಂದೀಶ್, ಒಕ್ಕಲಿಗ ಸಮಾಜದ ನಿರ್ದೇಶಕ ಪರಶುರಾಮ್, ಕಾಂಗ್ರೆಸ್ ಪಕ್ಷದ ಅಧ್ಯಕ್ಷ ರಮೇಶ್, ಶಾಲಾ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಜಯಂತ್, ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕ ಕೃಷ್ಣಪ್ಪ, ಮಾಜಿ ಪುರಸಭಾ ಸದಸ್ಯ ಆನಂದ್, ಜಿಪಂ ಮಾಜಿ ಸದಸ್ಯ ಶ್ರೀನಿವಾಸ್, ದೈಹಿಕ ಪರಿವೀಕ್ಷಕ ಸ್ವಾಮಿ ಗೌಡ, ಸಿಆರ್‌ಪಿ ಹರಿಪ್ರಸಾದ್ ಹಾಗೂ ವಿವಿಧ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.



ನಾಡಪ್ರಭು ಕೆಂಪೇಗೌಡ ಅವರ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು.

ಸಿಸಿ ರಸ್ತೆ ನಿರ್ಮಾಣಕ್ಕೆ ಶಾಸಕ ಹರೀಶ್ ಗೌಡ ಭೂಮಿ ಪೂಜೆ



ಹುಣಸೂರು: ತಾಲೂಕಿನ ಹೆಮ್ಮಿಗೆ ಹಾಡಿಯ ಕಾಂಕ್ರೀಟ್ ರಸ್ತೆ ಹಾಗೂ ಮೆಟ್ಲಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಡಿ.ಹರೀಶ್ ಗೌಡ ಚಾಲನೆ ನೀಡಿದರು.

ಹೆಮ್ಮಿಗೆ ಹಾಡಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡರು 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಸಿಸಿ ರಸ್ತೆ ಹಾಗೂ 10 ಲಕ್ಷ ರೂ. ವೆಚ್ಚದ ಮೆಟ್ಲಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ಹೆಮ್ಮಿಗೆ ಹಾಡಿಯಲ್ಲಿನ 50 ಮನೆಗಳಿಗೆ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಿರುವುದರಿಂದ ಹಾಡಿ ಅಭಿವೃದ್ಧಿಯತ್ತ ಮಹತ್ವದ ಹೆಜ್ಜೆ ಇರಿಸಿದೆ. ಇದರೊಂದಿಗೆ ರಸ್ತೆ ಸೇರಿದಂತೆ ಇನ್ನಿತರ ಮೂಲ ಸೌಕರ್ಯಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಅಪರಿಚಿತ ವಾಹನ ಡಿಕ್ಕಿ: ಐದು ವರ್ಷದ ಚಿರತೆ ಸಾವು

ಹುಣಸೂರು, ಜೂ.27–ತಾಲೂಕಿನ ಹುಣಸೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ 275ರ ಅರಬ್ಬಿತಿಟ್ಟು ವನ್ಯಧಾಮದ ಬಳಿ ಶುಕ್ರವಾರ ರಾತ್ರಿ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಐದು ವರ್ಷದ ಗಂಡು ಚಿರತೆ ಮೃತಪಟ್ಟಿದೆ.

ಈ ಸಂಬಂಧ ಪ್ರಕರಣ ದಾಖಲಾಗಿದೆ. ಈ ಚಿರತೆಯನ್ನು ಇಂದು ಶನಿವಾರ ಕಲ್‌ಬೆಟ್ಟ ಅರಣ್ಯದಲ್ಲಿ ಶವ ಪರೀಕ್ಷೆ ಮಾಡಲಾಯಿತು ಎಂದು ಆರ್.ಎಫ್.ಓ ಸಂತೋಷ್ ಹೂಗಾರ್ ತಿಳಿಸಿದ್ದಾರೆ.



ವಿದ್ಯಾರ್ಥಿಗಳಿಗೆ ಅಭಿನಂದನೆ



ಹೆಚ್.ಡಿ.ಕೋಟೆ ತಾಲೂಕಿನ ತುಂಬಸೋಗೆ ಗ್ರಾಮದಲ್ಲಿರುವ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಂದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಅಭಿನಂದನೆ ಸಮಾರಂಭದಲ್ಲಿ ತಾಲೂಕಿನಲ್ಲಿ ಅತಿ ಹೆಚ್ಚು ಅಂಕಗಳಿಸಿದ ಹಾಗೂ ಅತ್ಯುನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ತಿಮ್ಮಮ್ಮ ನಿಧನ



ಪಿರಿಯಾಪಟ್ಟಣ: ತಾಲೂಕು ಹಳ್ಳೂರು ಗ್ರಾಮದ ಲೇಟ್ ಪಟೇಲ್ ಹಲಗೆ ಗೌಡರ ಧರ್ಮಪತ್ನಿ ತಿಮ್ಮಮ್ಮ(80) ಶುಕ್ರವಾರ ಮಧ್ಯಾಹ್ನ ನಿಧನ ಹೊಂದಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಹಳ್ಳೂರು ಗ್ರಾಮದ ಅವರ ಜಮೀನಿನಲ್ಲಿ ನೆರವೇರಿತು. ಇವರು ಪುತ್ರ ಜೆಡಿಎಸ್ ಮುಖಂಡ ಮಹದೇವ್ ಹಾಗೂ ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಗ್ರಾಮೀಣ ಕ್ರೀಡೆಗಳು ಸಂಸ್ಕೃತಿ, ಕೃಷಿ ಜೀವನದ ಅವಿಭಾಜ್ಯ ಅಂಗ

ತಿ.ನರಸೀಪುರ, ಜೂ.27– ಆಧುನಿಕತೆ ಮತ್ತು ಯಾಂತ್ರೀಕರಣದ ಭರಾಟೆಯಲ್ಲಿ ಗ್ರಾಮೀಣ ಜೀವನ ಪದ್ಧತಿ ಹಾಗೂ ಸಾಂಪ್ರದಾಯಿಕ ಕ್ರೀಡೆಗಳು ಒಂದೊಂದಾಗಿ ಮರೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ, ಗ್ರಾಮೀಣ ಮಟ್ಟದಲ್ಲಿ ಇಂತಹ ಕ್ರೀಡೆಗಳನ್ನು ಉಳಿಸಿ ಬೆಳೆಸುವ ಪ್ರಯತ್ನಗಳು ನಿಜಕ್ಕೂ ಶ್ಲಾಘನೀಯ ಎಂದು ಮೈಮುಲ್ ಮಾಜಿ ಅಧ್ಯಕ್ಷ ಆರ್. ಚಲುವರಾಜು ಹೇಳಿದರು.

ತಾಲೂಕಿನ ಕೇತುಪುರ ಗ್ರಾಮದಲ್ಲಿ ಶ್ರೀ ಕೆಂಡಗಣ್ಣೇಶ್ವರ ಹಾಗೂ ಮಹದೇಶ್ವರಸ್ವಾಮಿ ದೇವಸ್ಥಾನದ ಉದ್ಘಾಟನೆ ಮತ್ತು ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಗ್ರಾಮದ ಕೆಂಪೇಗೌಡ ಯುವಕರ ಬಳಗ ಶನಿವಾರ ಆಯೋಜಿಸಿದ್ದ ಜೋಡೆತ್ತಿನ ಚಕ್ಕಡಿ ಓಟದ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಕ್ರೀಡೆಗಳು ಕೇವಲ ಮನರಂಜನೆಗೆ ಸೀಮಿತವಾಗಿಲ್ಲ. ಅವು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಕೃಷಿ ಜೀವನದ ಅವಿಭಾಜ್ಯ ಅಂಗವಾಗಿವೆ. ಹಿಂದೆ ಪ್ರತಿಯೊಂದು ರೈತರ ಮನೆಯಲ್ಲೂ ಜೋಡೆತ್ತುಗಳು ಮತ್ತು ಎತ್ತಿನಗಾಡಿಗಳು ಸಾಮಾನ್ಯವಾಗಿದ್ದವು. ಕೃಷಿ ಚಟುವಟಿಕೆಗಳು ಹಾಗೂ ಗ್ರಾಮೀಣ ಕ್ರೀಡೆಗಳಿಗೆ ಅವು ಪ್ರಮುಖ ಆಧಾರವಾಗಿದ್ದವು. ಆದರೆ ಕಾಲ ಬದಲಾದಂತೆ ಯಂತ್ರಗಳ ಬಳಕೆ ಹೆಚ್ಚಾಗಿದ್ದು, ಎತ್ತು ಹಾಗೂ ಎತ್ತಿನಗಾಡಿಗಳ ಬಳಕೆ ಗಣನೀಯವಾಗಿ ಕಡಿಮೆಯಾಗಿದೆ. ಪರಿಣಾಮ ವಾಗಿ ಇಂತಹ ಕ್ರೀಡೆಗಳು ನಿಧಾನವಾಗಿ ಕಣ್ಮರೆಯಾಗುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.



ಜೋಡೆತ್ತಿನ ಚಕ್ಕಡಿ ಓಟದ ಸ್ಪರ್ಧೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚಲುವರಾಜು ಮಾತನಾಡಿದರು.

ಇಂತಹ ಸಂದರ್ಭದಲ್ಲಿ ಗ್ರಾಮೀಣ ಕ್ರೀಡೆಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಕೆಂಪೇಗೌಡ ಯುವಕರ ಬಳಗ ಜೋಡೆತ್ತಿನ ಚಕ್ಕಡಿ ಓಟದಂತಹ ಸ್ಪರ್ಧೆಗಳನ್ನು ಆಯೋಜಿಸಿರುವುದು ಅಭಿನಂದನಾರ್ಹ. ಇಂತಹ ಕಾರ್ಯಕ್ರಮಗಳಿಗೆ ಸಮಾಜದ ಎಲ್ಲ ವರ್ಗದ ಜನರು ಬೆಂಬಲ ನೀಡಿದರೆ ಗ್ರಾಮೀಣ ಕ್ರೀಡೆಗಳಿಗೆ ಹೊಸ ಜೀವ ದೊರೆಯಲಿದೆ ಎಂದು ಹೇಳಿದರು.

ಸ್ಪರ್ಧೆಯಲ್ಲಿ ಭಾಗವಹಿಸಿರುವ ಸ್ಪರ್ಧಿಗಳು ಕ್ರೀಡಾಸ್ಫೂರ್ತಿಯಿಂದ ಪಾಲ್ಗೊಂಡು ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು. ತೀರ್ಪುಗಾರರ ನಿರ್ಧಾರವನ್ನು ಗೌರವಿಸಬೇಕು. ಯಾವುದೇ ರೀತಿಯ ಗೊಂದಲ ಅಥವಾ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಶಿಸ್ತಿನಿಂದ ಸ್ಪರ್ಧೆಯನ್ನು ಯಶಸ್ವಿಗೊಳಿಸಬೇಕು ಎಂದು ಅವರು ಕರೆ ನೀಡಿದರು.

ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಾದ ಹಾಸನ, ಮಂಡ್ಯ, ಮೈಸೂರು ಸೇರಿದಂತೆ ಹಲವು ಭಾಗಗಳಿಂದ ಆಗಮಿಸಿದ್ದ ಒಟ್ಟು 89 ಜೋಡೆತ್ತುಗಳು ಭಾಗವಹಿಸಿದ್ದವು. ವೇಗವಾಗಿ ಚಕ್ಕಡಿ ಎಳೆಯುತ್ತಾ ಜೋಡೆತ್ತುಗಳು ಪ್ರದರ್ಶಿಸಿದ ಸಾಮರ್ಥ್ಯ ನೆರೆದಿದ್ದ ಸಾವಿರಾರು ಕ್ರೀಡಾಭಿಮಾನಿಗಳ ಗಮನ ಸೆಳೆಯಿತು. ಪ್ರತಿಯೊಂದು ಸುತ್ತಿನಲ್ಲೂ ಪ್ರೇಕ್ಷಕರು ಹರ್ಷೋದ್ಗಾರಗಳೊಂದಿಗೆ ಸ್ಪರ್ಧಿಗಳಿಗೆ ಉತ್ತೇಜನ ನೀಡಿದ ದೃಶ್ಯಗಳು ಕಂಡುಬಂದವು. ಗ್ರಾಮೀಣ ಸೊಗಡನ್ನು ಬಿಂಬಿಸಿದ ಈ ಸ್ಪರ್ಧೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಯೋಜಕರು ಹಾಗೂ ಸ್ಪರ್ಧಿಗಳಿಗೆ ಶುಭ ಹಾರೈಸಿದರು.

ಮೈಮುಲ್ ಮಾಜಿ ನಿರ್ದೇಶಕ ಪ್ರಭಾಕರ್, ಡೈರಿ ಅಧ್ಯಕ್ಷ ಸಂದೀಪ್, ಉದ್ಯಮಿ ಪ್ರಕಾಶ್, ಸಿದ್ದೇಗೌಡ, ಗ್ರಾ.ಪಂ. ಮಾಜಿ ಸದಸ್ಯ ಚನ್ನಸ್ವಾಮಿ, ನಾಗರಾಜು, ಕುಂತನಹಳ್ಳಿ ಚೆಲುವರಾಜು ಅತ್ತಹಳ್ಳಿ ರವಿ, ಕೆಂಪೇಗೌಡ ಯುವಕರ ಬಳಗದ ಅಧ್ಯಕ್ಷ ಸುನೀಲ್‌ಕುಮಾರ್, ಸಂಘಟಕ ಮಹೇಶ್ ಮೂರ್ತಿ, ನವೀನ್, ವಿನಯ್, ಆದರ್ಶ, ನಾಗರಾಜು, ರಾಜೇಶ್, ಮನು ಸೇರಿದಂತೆ ಯುವಕರ ಬಳಗದ ಪದಾಧಿಕಾರಿಗಳು, ಗ್ರಾಮಸ್ಥರು ಹಾಗೂ ಅಪಾರ ಸಂಖ್ಯೆಯ ಕ್ರೀಡಾಭಿಮಾನಿಗಳಿದ್ದರು

ಮೂರನೇ ಪುಟದಿಂದ

ಸಿದ್ದರಾಮಯ್ಯನವರಿಗೆ ಅದ್ದೂರಿ ಸ್ವಾಗತ

ಈ ವೇಳೆ ಅವರನ್ನು ನಿಯಂತ್ರಿಸಲು ಪೊಲೀಸರು ಮುಂದಾದರೂ ಅದು ಸಾಧ್ಯವಾಗಲಿಲ್ಲ. ಹರ್ಷೋದ್ಗಾರ ಹಾಗೂ ಜೈಕಾರದೊಂದಿಗೆ ಮುನ್ನುಗ್ಗಿದ ಭಾರೀ ಸಂಖ್ಯೆಯ ಕಾರ್ಯಕರ್ತರಲ್ಲಿ ಬಹುತೇಕ ಮಂದಿ, ಪೊಲೀಸರನ್ನು ಭೇದಿಸಿ ಸಿದ್ದರಾಮಯ್ಯನವರನ್ನು ಸ್ವಾಗತಿಸಿ, ಹೂಗುಚ್ಛ ನೀಡಿ ಬರಮಾಡಿಕೊಂಡರು. ಅಲ್ಲದೆ, ಹಾರಹಾಕಿ, ಪೇಟ ತೊಡಿಸಿ ಅಭಿನಂದಿಸಿದರು.

ಅಲಂಕೃತ ತೆರೆದ ವಾಹನದಲ್ಲಿ ಮೆರವಣಿಗೆ: ಮೈಸೂರು ನಗರಕ್ಕೆ ರಸ್ತೆ ಮೂಲಕ ಆಗಮಿಸಿದ ಸಿದ್ದರಾಮಯ್ಯ ಅವರನ್ನು ಅಲಂಕೃತ ತೆರೆದ ವಾಹನದಲ್ಲಿ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು. ವಾಹನ ಹತ್ತುವ ಮುನ್ನ ಅವರಿಗೆ ಆರತಿ ಬೆಳಗಿ ಪೂರ್ಣಕುಂಭ ಸ್ವಾಗತ ಕೋರಲಾಯಿತು. ವಾಹನ ಏರುತ್ತಿದ್ದಂತೆ ಭಾರೀ ಸಂಖ್ಯೆಯ ಜನರ ಕಂಡು ಹರ್ಷಚಿತ್ತರಾದ ಸಿದ್ದರಾಮಯ್ಯ, ಕೈ ಎತ್ತಿ ವಂದಿಸಿದರು.

ತೆರೆದ ವಾಹನದಲ್ಲಿ ಸಿದ್ದರಾಮಯ್ಯ ಅವರೊಂದಿಗೆ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಮೊದಲಾದವರು ಕಂಡುಬಂದರು.

ಲವಲವಿಕೆಯಿಂದ ಕಂಡು ಬಂದ ಸಿದ್ದರಾಮಯ್ಯ, ಎಲ್ಲರತ್ತ ಕೈ ಬೀಸಿ, ನಮಸ್ಕರಿಸಿ ಕೃತಜ್ಞಾತಾ ಭಾವ ವ್ಯಕ್ತಪಡಿಸಿದರು. ನೆಲ್ಸನ್ ಮಂಡೇಲಾ ರಸ್ತೆಯಿಂದ ಹೈವೇ ವೃತ್ತದ ಮೂಲಕ ಸಯ್ಯಾಜಿರಾವ್ ರಸ್ತೆ ಸೇರಿದಂತೆ ಸುಮಾರು 500 ಮೀಟರ್‌ವರೆಗೆ ತೆರೆದ ವಾಹನದಲ್ಲಿ ಸಿದ್ದರಾಮಯ್ಯ ಮೆರವಣಿಗೆಯಲ್ಲಿ ಸಾಗಿದರು.

ಮೆರವಣಿಗೆಗೆ ಕಲಾತಂಡಗಳ ಮೆರಗು: ಮೆರವಣಿಗೆ ಉದ್ದಕ್ಕೂ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಸಿದ್ದರಾಮಯ್ಯನವರಿಗೆ ಜೈಕಾರ ಮೊಳಗಿಸಿದರು. ಸಂಭ್ರಮದ ಸೂಚಕವಾಗಿ ಒಂದೆಡೆ ಪಟಾಕಿ ಸಿಡಿಸಿದರೆ, ಇತ್ತ ಮೆರವಣಿಗೆಯಲ್ಲಿ ಕಲಾತಂಡಗಳ ಪ್ರದರ್ಶನ ಹಾಗೂ ಬ್ಯಾಂಡ್ ಮತ್ತು ಮಂಗಳವಾದ್ಯಗಳ ನಾದ ಮತ್ತಷ್ಟು ಮೆರಗು ನೀಡಿದವು. ಪೂಜಾ ಕುಣಿತ, ಡೊಳ್ಳು ಕುಣಿತ, ಗಾರುಡಿ ಗೊಂಬೆಗಳ ಕಲಾ ಪ್ರದರ್ಶನ ಈ ಸಂಭ್ರಮದ ಕ್ಷಣಗಳಿಗೆ ಸಾಕ್ಷಿಯಾದವು.

ಬೃಹತ್ ಸೇಬಿನ ಹಾರ: ಹೈವೇ ವೃತ್ತ ಸಮೀಪದ ಸಯ್ಯಾಜಿರಾವ್ ರಸ್ತೆಯ ಬಸ್ ಪ್ರಯಾಣಿಕರ ತಂಗುದಾಣದ ಬಳಿ ಮೆರವಣಿಗೆ ಮುಕ್ತಾಯಗೊಂಡಿತು. ಈ ವೇಳೆ ಕ್ರೇನ್ ಮೂಲಕ ಸಿದ್ದರಾಮಯ್ಯನವರಿಗೆ ಬೃಹತ್ ಸೇಬಿನ ಹಾರ ಹಾಕಿ ಅಭಿಮಾನ ಮೆರೆಯಲಾಯಿತು. ಮೆರವಣಿಗೆಯ ಸಂಭ್ರಮದ ಕ್ಷಣಗಳನ್ನು ಕಾರ್ಯಕರ್ತರು ಹಾಗೂ ಅಭಿಮಾನಿಗಳು ತಮ್ಮ ಮೊಬೈಲ್‌ಗಳಲ್ಲಿ ಚಿತ್ರೀಕರಿಸಿ ಸಂಭ್ರಮಿಸಿದರು. ಹಲವರು ಸಿದ್ದರಾಮಯ್ಯನವರು ಕಾಣುವಂತೆ ಸೆಲ್ಫಿ ಕೂಡ ತೆಗೆದುಕೊಂಡರು. ಮೆರವಣಿಗೆ ಬಳಿಕ ಸಿದ್ದರಾಮಯ್ಯನವರು ಸ್ಥಳದಿಂದ ಬೆಂಗಾವಲು ವಾಹನಗಳೊಂದಿಗೆ ತಮ್ಮ ವಾಹನದಲ್ಲಿ ಮುಂದೆ ಸಾಗಿದರು.

ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ.ರಾಜೀವ್, ಕೆ.ಮರೀಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷರಾದ ಕೂರ್ಗಳ್ಳಿ ಮಹದೇವು, ಬಿ.ಎಂ.ರಾಮು, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ, ಪಕ್ಷದ ಮುಖಂಡರಾದ ಕೆ.ವಿ.ಮಲ್ಲೇಶ್, ಈಶ್ವರ್ ಚಕ್ಕಡಿ ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು, ಸಿದ್ದರಾಮಯ್ಯನವರ ಅಭಿಮಾನಿಗಳು ಉಪಸ್ಥಿತರಿದ್ದರು.

ರೈತನ ಮೇಲೆರಗಿದ ಹುಲಿ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಂಡೀಪುರ ಅರಣ್ಯ ಪ್ರದೇಶ ವ್ಯಾಪ್ತಿಯ ನುಗು ವನ್ಯಜೀವಿ ವಲಯ ಅರಣ್ಯ ಪ್ರದೇಶದ ಬೆಣ್ಣೆಗೆರೆ ಗ್ರಾಮದ ರವಿ ಎಂಬುವರ ಬಾಳೆತೋಟದಲ್ಲಿ ಕಿರಣ್ ಐದಾರು ಕಾರ್ಮಿಕರೊಂದಿಗೆ ಕಳೆ ಕೀಳುವ ಕೆಲಸ ಮಾಡುತ್ತಿದ್ದರು. ಆಗ ಎಂಟು ತಿಂಗಳ ಹಿಂದೆ ದಾಳಿ ನಡೆಸಿ ವ್ಯಕ್ತಿಯೋರ್ವನನ್ನು ಕೊಂದಿದ್ದ ಸ್ಥಳದಲ್ಲಿಯೇ ಹುಲಿ ಕಿರಣ್ ಮೇಲೆ ಏಕಾಏಕಿ ದಾಳಿ ನಡೆಸಿದೆ.

ಈ ವೇಳೆ ಪಕ್ಕದಲ್ಲೇ ಕೆಲಸ ಮಾಡುತ್ತಿದ್ದ ಇತರ ಕಾರ್ಮಿಕರು ಹುಲಿ ಕಂಡು ಭಯಕ್ಕೆ ದಿಕ್ಕಾಪಾಲಾಗಿ ಓಡಲಾರಂಭಿಸಿದ್ದಾರೆ. ನಂತರ ಸಾವರಿಸಿಕೊಂಡು ಬಂದು ನೋಡಿದರೆ ಹುಲಿ ಕಿರಣ್‌ನ ಕುತ್ತಿಗೆಯ ಮೇಲೆ ಕುಳಿತಿರುವುದನ್ನು ಕಂಡು ಜೋರಾಗಿ ಚೀರಾಡಿದ್ದಾರೆ. ಆ ಶಬ್ಧಕ್ಕೆ ಹುಲಿ ಗಾಬರಿಗೊಂಡು ಕಿರಣ್‌ನನ್ನು ಬಿಟ್ಟು ಮತ್ತೆ ಪೊದೆಯತ್ತ ಪರಾರಿಯಾಗಿದೆ. ಇದರಿಂದ ಕಿರಣ್ ಎದೆ, ಹೊಟ್ಟೆ ಹಾಗೂ ಬೆನ್ನಿನ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ವಿಷಯವನ್ನು ಗ್ರಾಮಸ್ಥರು, ಅರಣ್ಯ ಇಲಾಖೆಯ ಗಮನಕ್ಕೆ ತಂದಿದ್ದಾರೆ. ಕೂಡಲೇ ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿ ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖಾಧಿಕಾರಿಗಳಿಗೆ ಹುಲಿ ಸೆರೆಗೆ ಒತ್ತಾಯಿಸಿದರು.

ಜನರ ಪ್ರೀತಿಗೆ ಸಿದ್ದರಾಮಯ್ಯ ಮೂಕವಿಸ್ಮಿತ...!



ಮೈಸೂರು: ಮುಖ್ಯಮಂತ್ರಿ ಪದತ್ಯಾಗದ ಬಳಿಕವೂ ಜನತೆಯ ಪ್ರೀತಿ, ಅಭಿಮಾನ ನೋಡಿದರೆ ಅಧಿಕಾರವನ್ನು ಬಳಸಿಕೊಂಡು ನಾನು ಜಗಮೆಚ್ಚುವ ರೀತಿಯಲ್ಲಿ ಜನಸೇವೆ ಮಾಡಿದ್ದೇನೆ ಎಂಬ ಸಾರ್ಥಕ್ಯದ ಭಾವನೆ ಮೂಡಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.


ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಬಳಿಕ ಮೊದಲ ಬಾರಿಗೆ ತವರು ಜಿಲ್ಲೆ ಮೈಸೂರಿಗೆ ಶನಿವಾರ ಭೇಟಿ ನೀಡಿದ ಅವರು, ಇಲ್ಲಿನ ಮುಖಂಡರು, ಕಾರ್ಯಕರ್ತರು ಆತ್ಮೀಯವಾಗಿ ಬರಮಾಡಿಕೊಂಡ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹೀಗೆ ಭಾವನಾತ್ಮಕ ಸಾಲುಗಳನ್ನು ಹಂಚಿಕೊಂಡಿದ್ದಾರೆ. ರಾಜಕೀಯ ಅಧಿಕಾರ ಎನ್ನುವುದು ಜನರ ಸೇವೆ ಮಾಡಲು ಒದಗಿಬಂದ ಅವಕಾಶದ ಭಾಗ್ಯ ಎಂದು ನಾನು ತಿಳಿದುಕೊಂಡವನು. ಮುಖ್ಯಮಂತ್ರಿಯ ಪದತ್ಯಾಗ ಮಾಡಿದ ದಿನದಿಂದ ಹೋದಲ್ಲಿ, ಬಂದಲ್ಲಿ ಜನತೆ ವ್ಯಕ್ತಪಡಿಸುತ್ತಿರುವ ಪ್ರೀತಿ, ಅಭಿಮಾನ, ವಿಶ್ವಾಸವನ್ನು ನೋಡಿದರೆ ಅಧಿಕಾರವನ್ನು ಬಳಸಿಕೊಂಡು ಜಗಮೆಚ್ಚುವ ರೀತಿಯಲ್ಲಿ ಜನಸೇವೆ ಮಾಡಿದ್ದೇನೆ ಎಂಬ ಸಾರ್ಥಕ್ಯದ ಭಾವನೆ ಮೂಡಿದೆ.

ಪದತ್ಯಾಗದ ನಂತರ ಇಂದು ಮೊದಲ ಬಾರಿಗೆ ಹುಟ್ಟೂರಿಗೆ ಆಗಮಿಸಿದಾಗ ಇದೇ ಅನುಭವವಾಯಿತು. ಸೇರಿದ್ದ ಜನಸಾಗರ, ಅವರು ತೋರಿದ ಪ್ರೀತಿ–ಅಭಿಮಾನ ಕಂಡು ಮೂಕವಿಸ್ಮಿತನಾಗಿದ್ದೇನೆ. ಅಧಿಕಾರ, ಸಂಪತ್ತು ಕಾಲ ಬದಲಾದಂತೆ ಕಳೆದು ಹೋಗಬಹುದು, ಜನರ ಪ್ರೀತಿ ನಿರಂತರ. ನನ್ನ ಸಾರ್ವಜನಿಕ ಬದುಕಿನಲ್ಲಿ ನನ್ನನ್ನು ಪ್ರೀತಿಸುವ ದೊಡ್ಡ ಜನಸಮೂಹವನ್ನೇ ಸಂಪಾದಿಸಿದ್ದೇನೆ ಎನ್ನುವ ಹೆಮ್ಮೆ ನನ್ನದು.

ಮುಖ್ಯಮಂತ್ರಿಯ ಸಿಂಹಾಸನ ನಶ್ವರ, ಜನತೆಯ ಹೃದಯಸಿಂಹಾಸನ ಶಾಶ್ವತ. ಅಲ್ಲಿಂದ ನನ್ನನ್ನು ಯಾರೂ ಕೆಳಗಿಳಿಸಲಾರರು. ಅದು ನನ್ನ ಮತ್ತು ನಾನು ನಂಬುವ ಜನತಾ ಜನಾರ್ಧನರ ನಡುವಿನ ಶಾಶ್ವತ ಒಪ್ಪಂದ. ನಾಡಿನ ಉದ್ದಗಲಕ್ಕೂ ಯಾವ ನಿರೀಕ್ಷೆಯೂ ಇಲ್ಲದೆ ಪ್ರೀತಿ–ಅಕ್ಕರೆ ತೋರುತ್ತಿರುವ ಪ್ರೀತಿಯ ಬಂಧುಗಳ ಸೇವೆಗೆ ನಾನು ಸದಾ ಬದ್ಧ. ಮತ್ತೊಮ್ಮೆ ಎಲ್ಲರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು ಎಂದು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ದೇಶಾದ್ಯಂತ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ: 12 ರಾಜ್ಯಗಳಲ್ಲಿ ಬರೋಬ್ಬರಿ 5.18 ಕೋಟಿ ಮತದಾರರ ಹೆಸರು ಡಿಲೀಟ್

ದೆಹಲಿ, ಜೂ.27– ಭಾರತೀಯ ಚುನಾವಣಾ ಆಯೋಗವು ದೇಶಾದ್ಯಂತ ಹಮ್ಮಿಕೊಂಡಿರುವ 'ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ' ಪ್ರಕ್ರಿಯೆಯು ಭಾರೀ ರಾಜಕೀಯ ಜಟಾಪಟಿ ಮತ್ತು ಚರ್ಚೆಗಳಿಗೆ ಕಾರಣವಾಗಿದೆ.



ಇತ್ತೀಚಿನ ವರದಿಗಳ ಪ್ರಕಾರ, 2ನೇ ಹಂತದ ಪರಿಷ್ಕರಣೆಯಲ್ಲೇ ದೇಶದ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಬರೋಬ್ಬರಿ 5 ಕೋಟಿಗೂ ಅಧಿಕ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ಕಳೆದ ವರ್ಷ ಅ.27ರಂದು ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ತಮಿಳುನಾಡು, ರಾಜಸ್ಥಾನ, ಛತ್ತೀಸ್‌ಗಢ, ಕೇರಳ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಗುಜರಾತ್, ಮಧ್ಯಪ್ರದೇಶ ಮತ್ತು ಗೋವಾ ಸೇರಿದಂತೆ 12 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಎರಡನೇ ಹಂತದ ಎಸ್‌ಐಆರ್ ಪ್ರಕ್ರಿಯೆಯನ್ನು ಘೋಷಿಸಲಾಗಿತ್ತು. ಈ ರಾಜ್ಯಗಳಲ್ಲಿ ಪರಿಷ್ಕರಣೆಗೆ ಮುನ್ನ ಒಟ್ಟು ಮತದಾರರ ಸಂಖ್ಯೆ 50.99 ಕೋಟಿಯಷ್ಟಿತ್ತು. ಆದರೆ, ಪ್ರಕ್ರಿಯೆಯ ನಂತರ ಈ ಸಂಖ್ಯೆ 45.81 ಕೋಟಿಗೆ ಕುಸಿದಿದೆ. ಅಂದರೆ, ಒಟ್ಟಾರೆಯಾಗಿ ಶೇಕಡಾ 10.2 ರಷ್ಟು (ಸುಮಾರು 5.18 ಕೋಟಿಗೂ ಹೆಚ್ಚು) ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ.

ಈ ಪ್ರಕ್ರಿಯೆಯಲ್ಲಿ ದೇಶಾದ್ಯಂತ ಒಟ್ಟು 66,88,636 ಮೃತ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆಯಲಾಗಿದೆ. ಇದರಲ್ಲಿ ಉತ್ತರ ಪ್ರದೇಶದಿಂದ ಅತೀ ಹೆಚ್ಚು ಅಂದರೆ 25.47 ಲಕ್ಷ ಮತ್ತು ಪಶ್ಚಿಮ ಬಂಗಾಳದಿಂದ 24.16 ಲಕ್ಷ ಮೃತ ವ್ಯಕ್ತಿಗಳ ಹೆಸರುಗಳನ್ನು ಕೈಬಿಡಲಾಗಿದೆ. ಸಾರ್ವಜನಿಕ ಆಕ್ಷೇಪಣೆಗಳು ಮತ್ತು ನ್ಯಾಯಾಂಗ ತೀರ್ಪಿನ ಪ್ರಕ್ರಿಯೆಗಳ ನಂತರ ಹೆಚ್ಚುವರಿಯಾಗಿ 63.16 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ. ಈ 12 ರಾಜ್ಯಗಳ ಪೈಕಿ ಉತ್ತರ ಪ್ರದೇಶವು ತನ್ನ ಅಂತಿಮ ಮತದಾರರ ಪಟ್ಟಿಯ ದತ್ತಾಂಶವನ್ನು ಕೊನೆಯದಾಗಿ ಬಿಡುಗಡೆ ಮಾಡಿದೆ.

ಕಳೆದ ವರ್ಷ ಜೂನ್ 24 ರಂದು ಬಿಹಾರ ವಿಧಾನಸಭಾ ಚುನಾವಣೆಗೂ ಮುನ್ನ ಈ ಪ್ರಾಯೋಗಿಕ ಎಸ್‌ಐಆರ್ ಪ್ರಕ್ರಿಯೆಯನ್ನು ಅಲ್ಲಿ ಮೊದಲ ಬಾರಿಗೆ ಆರಂಭಿಸಲಾಗಿತ್ತು. ಆ ಸಂದರ್ಭದಲ್ಲಿ ಸೂಕ್ತ ದಾಖಲೆಗಳಿಲ್ಲದ ಕಾರಣಕ್ಕಾಗಿ ಚುನಾವಣಾ ಆಯೋಗವು ಬಿಜೆಪಿಯ ಮಾತಿನಂತೆ ನಾಗರಿಕರ ಮತದಾನದ ಹಕ್ಕನ್ನು ಕಸಿದುಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ಮತ್ತು ಕಾರ್ಯಕರ್ತರು ಭಾರೀ ಆರೋಪ ಮಾಡಿದ್ದರು. ಬಿಹಾರದಲ್ಲಿ ಸುಮಾರು 65 ಲಕ್ಷ ಮತಗಳನ್ನು ಕಡಿತಗೊಳಿಸಲಾಗಿತ್ತು. ಆದರೆ, ಈ ವರ್ಷದ ಮಾರ್ಚ್ ತಿಂಗಳಲ್ಲಿ ಸುಪ್ರೀಂ ಕೋರ್ಟ್ ಚುನಾವಣಾ ಆಯೋಗದ ಈ 'ಎಸ್‌ಐಆರ್' ಪ್ರಕ್ರಿಯೆಯ ಸಾಂವಿಧಾನಿಕ ಸಿಂಧುತ್ವವನ್ನು ಸರ್ವಾನುಮತದಿಂದ ಎತ್ತಿಹಿಡಿದು ಇದಕ್ಕೆ ಗ್ರೀನ್ ಸಿಗ್ನಲ್ ನೀಡಿತ್ತು. ಮತದಾರರ ಪಟ್ಟಿಯ ಈ ಶುದ್ಧೀಕರಣ ಪ್ರಕ್ರಿಯೆಯು ಈಗ ಕೇವಲ ಮತದಾನಕ್ಕೆ ಮಾತ್ರ ಸೀಮಿತವಾಗಿಲ್ಲ. ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಇತ್ತೀಚಿನ ವಿಧಾನಸಭಾ ಚುನಾವಣೆಗಳ ನಂತರ ಎರಡೂ ಸರ್ಕಾರಗಳು ಮಹತ್ವದ ಆದೇಶ ಹೊರಡಿಸಿವೆ. ಅದರಂತೆ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಿಂದ ಹೆಸರು ಕಳೆದುಕೊಂಡಿರುವ ವ್ಯಕ್ತಿಗಳನ್ನು ರಾಜ್ಯದ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಯೋಜನೆಗಳ ಸೌಲಭ್ಯಗಳಿಂದಲೂ ಹೊರಗಿಡಲಾಗುತ್ತಿದೆ.

ಸಿದ್ದರಾಮಯ್ಯ ಅಭಿಮಾನಿ ಮೇಲೆ ಪೊಲೀಸರ ಹಲ್ಲೆ ಆರೋಪ!

ನಾನು ಸಿದ್ದರಾಮಯ್ಯರ ಮನೆಯಲ್ಲಿ ಕೆಲಕಾಲ ಅಡುಗೆ ಮಾಡಿದ್ದೆ ; ಭೇಟಿ ಮಾಡಲು ಅವಕಾಶಕ್ಕೆ ಪರಿ-ಪರಿ ಮನವಿ ಮಾಡಿದರೂ ಅಮಾನವೀಯವಾಗಿ ವರ್ತಿಸಿದರು ; ಡಿಸಿಸಿ ಕಾರ್ಯದರ್ಶಿ ಬೆಲವತ್ತ ಶಿವಕುಮಾರ್

ಮೈಸೂರು,ಜೂ.27(ಪಿಎಂ)– ನಗರದ ಹೈವೆ ವೃತ್ತದಲ್ಲಿ ಶನಿವಾರ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸ್ವಾಗತಿಸುವ ವೇಳೆ ಕಾಂಗ್ರೆಸ್‌ನ ಮುಖಂಡರೊಬ್ಬರ ಮೇಲೆ ಪೊಲೀಸರು ಹಲ್ಲೆ ಮಾಡಿರುವ ಆರೋಪ ಕೇಳಿಬಂದಿದೆ.

ಇಬ್ಬರು ಪೊಲೀಸ್ ಪೇದೆಗಳು ಕ್ಷುಲ್ಲಕ ಕಾರಣಕ್ಕೆ ತಮ್ಮ ಮೇಲೆ ಹಲ್ಲೆ ನಡೆಸಿದರು ಎಂದು ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಬೆಲವತ್ತ ಶಿವಕುಮಾರ್ ದೂರಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಹೈವೇ ವೃತ್ತದ ನೆಲ್ಸನ್ ಮಂಡೇಲಾ ರಸ್ತೆಯ ಖಾಸಗಿ ಹೋಟೆಲ್ ಎದುರು ಮಿಲಿಟರಿ ಮಾದರಿ ಸಮವಸ್ತ್ರ ಧರಿಸಿದ್ದ ಇಬ್ಬರು ಪೊಲೀಸರು ನನ್ನ ಮೇಲೆ ಹಲ್ಲೆ ಮಾಡಿದ್ದಾರೆ. ಸಿದ್ದರಾಮಯ್ಯನವರ ಬಳಿ ಹೋಗಬೇಕೆಂದು ಅವರಲ್ಲಿ ವಿನಂತಿಸಿದೆ. ಆದರೆ ಅವಕಾಶ ನೀಡದೇ ದೌರ್ಜನ್ಯ ಮಾಡಿದರು.

ತಮ್ಮ ಮೊಳಸಂಧಿಯಿಂದ ನನ್ನ ಎದೆ ಮೇಲೆ ಗುದ್ದಿದರು. ಆ ಕೂಡಲೇ ನಾನು ನೆಲಕ್ಕೆ ಬಿದ್ದೆ. ನಂತರವೂ ಬಿಡದೇ ತಮ್ಮ ಕಾಲುಗಳಿಂದ ನನ್ನ ಹೊಟ್ಟೆ ಮೇಲೆ ತುಳಿದರು. ಇದರ ಪರಿಣಾಮ ನನ್ನ ನಡು ಉಳುಕಿದ್ದು, ಇದರಿಂದ ಸಹಜವಾಗಿ ನಾನು ನಡೆದಾಡಲು ಸಾಧ್ಯವಾಗುತ್ತಿಲ್ಲ. ಇದೀಗ ಕೆಆರ್ ಆಸ್ಪತ್ರೆಗೆ ಬಂದಿದ್ದು, ವೈದ್ಯರು ಎಕ್ಸ್‌ರೇ ತೆಗೆಯಬೇಕೆಂದು ಹೇಳಿದ್ದಾರೆ ಎಂದು ತಮ್ಮ ನೋವು ತೋಡಿಕೊಂಡರು. ನನ್ನ ಎಡಭಾಗದ ಎದೆ ಮೇಲೆಯೂ ಒಬ್ಬ ಪೊಲೀಸ್ ಪೇದೆ ಗುದ್ದಿದ್ದು, ಸ್ಥಳದಿಂದ ಹೋಗು ಎಂದೂ ಅಲ್ಲೇ ನಿಂತಿದ್ದ ಸಿಟ್ಟಿನಿಂದ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ. ಇದನ್ನು ಕೆಲ ಹಿರಿಯ ಪೊಲೀಸ್ ಅಧಿಕಾರಿಗಳು ಸಹ ನೋಡಿದ್ದಾರೆ ಸಿಎಂ ಆಗಿದ್ದಾಗಲೂ ಭೇಟಿ ಮಾಡಿಲ್ಲ. ಈಗಲಾದರೂ ಮಾತನಾಡಿಸಬೇಕು ಅವಕಾಶ ಮಾಡಿಕೊಡಿ ಅಣ್ಣ ಎಂದೆ ಅಷ್ಟೆ ಎಂದು ಅವರು ಬೇಸರ ವ್ಯಕ್ತಪಡಿಸಿದರು. ಪಕ್ಷದ ಕಾರ್ಯಕರ್ತರು ಸಹ ಅಮ್ಮೊಬ್ಬನ್ನಾ ಬಿಡಿ ಹೋಗಲಿ ಎಂದರು. ಅವರು ಅವಕಾಶ ನೀಡದಿದ್ದಾಗ, ನಾನು 'ಯಾಕ್ರಿ ಬಿಡಿ' ಎಂದು ಪ್ರಶ್ನಿಸಿದ್ದಕ್ಕೆ ಸಿಟ್ಟಾದರು. ಹಲ್ಲೆ ಮಾಡಿ ಕಾಲಿನಿಂದ ಒದ್ದರು. ಅದಾಗ್ಯೂ ಎದ್ದುನಿಂತು ಮತ್ತೆ ಹೋಗಲು ಪ್ರಯತ್ನಿಸಿದಾಗ, ಕೆಳಗಡೆ ಹಾಕಿಕೊಂಡು ತುಳಿದರು. ಈ ವೇಳೆಗೆ ಸಿದ್ದರಾಮಯ್ಯನವರು ತೆರೆದ ವಾಹನದಲ್ಲಿ ಮುಂದೆ ಸಾಗಿದ್ದರು. ಆ ಬಳಿಕ ಅಲ್ಲಿ ಜನದಟ್ಟಣೆ ಇರಲಿಲ್ಲ. ಆಗ ಸುಸ್ತಿನಿಂದ ಅಲ್ಲೇ ಬಿದ್ದಿದ್ದೆ. ಆ ನಂತರ ಯಾರೋ ಸಾರ್ವಜನಿಕರು ಹೈವೇ ವೃತ್ತಕ್ಕೆ ಕರೆತಂದು ಕೂರಿಸಿ ಆಂಬುಲೆನ್ಸ್‌ಗೆ ಕರೆ ಮಾಡಿ ಕರೆಸಿದರು.



ಕೆಆರ್ ಆಸ್ಪತ್ರೆಯಲ್ಲಿ ಬೆಲವತ್ತ ಶಿವಕುಮಾರ್ ಚಿಕಿತ್ಸೆ ಪಡೆಯುತ್ತಿರುವುದು.

ಈಗ ಕೆಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 2006ರಲ್ಲಿ ಸಿದ್ದರಾಮಯ್ಯನವರ ಮನೆ ಮೈಸೂರಿನ ಅರವಿಂದ ನಗರದಲ್ಲಿದ್ದಾಗ ಅವರ ಮನೆಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದೆ. ಅವರು ಬೆಂಗಳೂರಿನಿಂದ ಮೈಸೂರಿಗೆ ಬಂದು ವಾಸ್ತವ್ಯ ಇರುತ್ತಿದ್ದ ಸಂದರ್ಭದಲ್ಲಿ ನಾನೇ ಅವರಿಗಾಗಿ ಅಡುಗೆ ಮಾಡುತ್ತಿದ್ದೆ. ಸಿದ್ದರಾಮಯ್ಯನವರ ಅಭಿಮಾನಿಯಾಗಿ ಹಲವು ಕಾರ್ಯಕ್ರಮ ಮಾಡಿದ್ದೇನೆ. ನನಗೆ ಈಗ 54 ವರ್ಷ ವಯಸ್ಸು. ನಾನು ಹುಟ್ಟಿದಾಗಿನಿಂದ ಯಾರೂ ನನಗೆ ಹಲ್ಲೆ ಮಾಡಿಲ್ಲ. ಈ ಘಟನೆ ನನಗೆ ಅತೀವ ಬೇಸರ ತಂದಿದೆ ಎಂದು ತಮ್ಮ ದುಃಖ ವ್ಯಕ್ತಪಡಿಸಿದರು.

ಕೆಲ ಸಮಯದ ನಂತರ ಅವರನ್ನು ಸಂಪರ್ಕಿಸಿದಾಗ, ಅಡ್ಮಿಟ್ ಆಗಿಲ್ಲ. ಮನೆಗೆ ಹೊರಟಿದ್ದೇನೆ. ಎಕ್ಸ್‌ರೇ ನಾರ್ಮಲ್ ಇದೆ ಎಂದು ವೈದ್ಯರು ತಿಳಿಸಿದ್ದು, ದೇಹದ ಕೆಲ ಭಾಗದಲ್ಲಿ ಸ್ನಾಯುಗೆ ನೋವು ಉಂಟಾಗಿದೆ ಎಂದಿದ್ದಾರೆ. ನಾಳೆ ತಲೆಗೆ ಸಂಬಂಧಿಸಿದಂತೆ ಸಿಟಿ ಸ್ಕ್ಯಾನ್ ವರದಿ ಬರಲಿದೆ ಎಂದರು.

ಕೋತಿಗಳ ಹಿಂಡು ನೋಡಿ ಹೆದರಿದ ನವ ವಿವಾಹಿತೆ ಗುಡ್ಡದಿಂದ ಬಿದ್ದು ಸಾವು

ತೂತುಕುಡಿ: ದೇವಸ್ಥಾನದ ಬಳಿ ಕೋತಿಗಳ ಹಿಂಡು ಸುತ್ತುವರೆದಿದ್ದರಿಂದ ಹೆದರಿ ನವವಿವಾಹಿತೆಯೊಬ್ಬರು ಕಾಲು ಜಾರಿ ಕೆಳಕ್ಕೆ ಬಿದ್ದು ಮೃತಪಟ್ಟಿರುವ ಘಟನೆ ತಮಿಳುನಾಡಿನ ತೂತುಕುಡಿ ಜಿಲ್ಲೆಯಲ್ಲಿ ಶನಿವಾರ ನಡೆದಿದೆ.

ಮೃತ ಮಹಿಳೆಯನ್ನು ತೂತುಕುಡಿಯ ದಕ್ಷಿಣ ತಿಟ್ಟಂಕುಳಂ ನಿವಾಸಿ ಅನಿತಾ(24) ಎಂದು ಗುರುತಿಸಲಾಗಿದೆ. ಕಳೆದ ತಿಂಗಳಷ್ಟೇ ಸುರೇಶ್ ಎಂಬುವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು. ಕಜುಗುಮಲೈನಲ್ಲಿರುವ ಕಲುಗಸಲಮೂರ್ತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ದಂಪತಿಗಳು ಬೆಟ್ಟದ ತುದಿಯಲ್ಲಿರುವ ಉಚಿಪ್ಪಿಲ್ಲಯಾರ್ ದೇವಸ್ಥಾನಕ್ಕೆ ಹೋಗಿದ್ದರು. ಅಲ್ಲಿ ಕೋತಿಗಳಿಗೆ ಹಣ್ಣು ತಿನ್ನಿಸುತ್ತಿದ್ದಾಗ ಇದ್ದಕ್ಕಿದ್ದಂತೆ ಹಲವಾರು ಕೋತಿಗಳು ಅವರನ್ನು ಸುತ್ತುವರೆದವು. ಕೋತಿಗಳನ್ನು ಕಂಡ ಅನಿತಾ ಭಯಭೀತಳಾಗಿ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಕಾಲು ಜಾರಿ ಕೆಳಕ್ಕೆ ಬಿದ್ದು, ಸಾವನ್ನಪ್ಪಿದ್ದಾರೆ.

ಕಣ್ಣೆದುರೇ ಪತ್ನಿ ಕಳೆದುಕೊಂಡ ಪತಿ ತೀವ್ರ ಆಘಾತಕ್ಕೊಳಗಾಗಿದ್ದು, ಪತ್ನಿಯ ದೇಹದ ಬಳಿ ಕುಳಿತು ರೋದಿಸಿದ್ದು ಕರುಳ ಹಿಂಡುವಂತಿತ್ತು.

ಬುದ್ಧ ವಿಹಾರಗಳು ಭಗವಾನ್ ಬುದ್ಧರ ತತ್ವ ಬೋಧನೆಗಳ ಸಾರುವ ಜ್ಞಾನ ಕೇಂದ್ರಗಳು

ಡಾ.ಬಿ.ಆರ್.ಅಂಬೇಡ್ಕರ್ ಮೊಮ್ಮಗ ಡಾ.ಭೀಮ್‌ರಾವ್ ಯಶವಂತರಾವ್ ಅಂಬೇಡ್ಕರ್ ಅಭಿಮತ

ಮೈಸೂರು, ಜೂ.27(ವಿವಿಹೆಚ್)– ಬುದ್ಧ ವಿಹಾರಗಳು ಯುವ ಪೀಳಿಗೆಗೆ ಮಾರ್ಗದರ್ಶನ ನೀಡುವ ಹಾಗೂ ಭಗವಾನ್ ಬುದ್ಧರ ಬೋಧನೆಗಳನ್ನು ಸಾರುವ ಜ್ಞಾನ ಕೇಂದ್ರಗಳಾಗಿ ಕಾರ್ಯ ನಿರ್ವಹಿಸಬೇಕು ಎಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೊಮ್ಮಗ ಹಾಗೂ ಅಂಬೇಡ್ಕರ್ ಅವರ ಭಾರತೀಯ ಬೌದ್ಧ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಡಾ.ಭೀಮ್‌ರಾವ್ ಯಶವಂತರಾವ್ ಅಂಬೇಡ್ಕರ್ ಅಭಿಪ್ರಾಯಿಸಿದರು.

ನಗರದ ಬಲ್ಲಾಳ ವೃತ್ತದ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಶನಿವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಭವಿಷ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬೌದ್ಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಬೇಕು. ಬುದ್ಧ ವಿಹಾರಗಳು ಧಮ್ಮದ ನಿಜವಾದ ಕೇಂದ್ರಗಳಾಗಿವೆ. ಧಮ್ಮದ ಪ್ರಚಾರ ಮತ್ತು ಪ್ರಸಾರ ವಿಹಾರಗಳ ಮೂಲಕವೇ ನಡೆಯಬೇಕು ಎಂದು ತಿಳಿಸಿದರು.

ಕರ್ನಾಟಕದ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಮಹಾರಾಷ್ಟ್ರ ಗಡಿ ಭಾಗಗಳಾದ ಬೀದರ್ ಮತ್ತು ಭಾಲ್ಕಿ ಪ್ರದೇಶಗಳಲ್ಲಿ ಬೌದ್ಧ ಚಳವಳಿ ಬಲಿಷ್ಠವಾಗಿದೆ. ಅಲ್ಲಿನ ಬೌದ್ಧ ಸಮುದಾಯ ಸಕ್ರಿಯವಾಗಿ, ಸಂಘಟಿತವಾಗಿ ಮತ್ತು ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ. ಇದೇ ರೀತಿಯ ಬೆಳವಣಿಗೆ ಕರ್ನಾಟಕದ ಇತರ ಭಾಗ ಹಾಗೂ ದೇಶದಾದ್ಯಂತ ವಿಸ್ತರಿಸಬೇಕು ಎಂದರು.

ಬೌದ್ಧ ಧರ್ಮ ಸ್ವೀಕರಿಸಿದ ನಂತರ ಸಾಮ್ರಾಟ್ ಅಶೋಕರು ಭಾರತದೆಲ್ಲೆಡೆ ಸಾವಿರಾರು ಸ್ತೂಪಗಳು ಮತ್ತು ವಿಹಾರಗಳನ್ನು ನಿರ್ಮಿಸಿದ್ದರು. ಸನ್ನತಿ ಕೂಡ ಭಾರತದ ಬೌದ್ಧ ಪರಂಪರೆಯ ಪ್ರಮುಖ ಕೇಂದ್ರವಾಗಿದ್ದು, ಸುಮಾರು 25 ಎಕರೆ ಪ್ರದೇಶದ ಈ ಸ್ಥಳದಲ್ಲಿ ಹಲವು ಬುದ್ಧ ಮೂರ್ತಿಗಳು ಹಾಗೂ ಪುರಾತನ ಅವಶೇಷಗಳು ಪತ್ತೆಯಾಗಿವೆ. ಈ ಪ್ರದೇಶದಲ್ಲಿ ವೈಜ್ಞಾನಿಕ ಸಂಶೋಧನೆ ನಡೆಸಬೇಕು. ಈ ಅಮೂಲ್ಯ ಪರಂಪರೆಯನ್ನು ಸಂರಕ್ಷಿಸಬೇಕು ಎಂದರು.



ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಕಾರ್ಯಕ್ರಮ ಉದ್ದೇಶಿಸಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೊಮ್ಮಗ ಹಾಗೂ ಭಾರತೀಯ ಬೌದ್ಧ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಡಾ.ಭೀಮ್‌ರಾವ್ ಯಶವಂತರಾವ್ ಅಂಬೇಡ್ಕರ್ ಮಾತನಾಡಿದರು.

ಭಾರತ ಬುದ್ಧನ ನಾಡು: ಭಾರತ ಭಗವಾನ್ ಬುದ್ಧನ ನಾಡಾಗಿದ್ದು, ಪ್ರತಿವರ್ಷ ಬೋಧಗಯಾ, ಸಾರನಾಥ, ಕುಶಿನಗರ ಸೇರಿದಂತೆ ಹಲವು ಬೌದ್ಧ ಪವಿತ್ರ ಕ್ಷೇತ್ರಗಳಿಗೆ ವಿದೇಶಗಳಿಂದ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಭಾರತಕ್ಕೆ ಶೇ.60ಕ್ಕೂ ಅಧಿಕ ಮಂದಿ ಬುದ್ಧನ ಸ್ಥಳಗಳ ವೀಕ್ಷಣೆಗಾಗಿಯೇ ಪ್ರವಾಸಕ್ಕಾಗಿ ಬರುತ್ತಾರೆ ಎಂದರು.

ಮಹಾಬೋಧಿ ಮಹಾವಿಹಾರ ಸೇರಿದಂತೆ ಪ್ರಮುಖ ಬೌದ್ಧ ಪರಂಪರೆ ಸ್ಥಳಗಳ ನಿರ್ವಹಣೆ ಮತ್ತು ರಕ್ಷಣೆಯ ಹೊಣೆ ಕೇಂದ್ರ ಸರ್ಕಾರದ್ದು. ಈ ಪವಿತ್ರ ಸ್ಥಳಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಿ, ಬುದ್ಧನ ತತ್ವ ಸಿದ್ಧಾಂತಗಳನ್ನು ಮತ್ತಷ್ಟು ಪ್ರಚಾರಪಡಿಸುವ ಕೆಲಸ ಆಗಬೇಕಿದೆ. ಜೊತೆಗೆ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆಯು ಬುದ್ಧರಿಗೆ ಸಂಬಂಧಿಸಿದ ಪವಿತ್ರ ಸ್ಥಳಗಳನ್ನು ಗುರುತಿಸಿ, ಸಂರಕ್ಷಿಸಿ, ಅಭಿವೃದ್ಧಿಪಡಿಸಬೇಕು ಎಂದು ಮನವಿ ಮಾಡಿದ್ದಾರೆ.

ಜನಗಣತಿಯಲ್ಲಿ ಬೌದ್ಧ ಧರ್ಮ ಎಂದು ಹೆಸರಿಸಿ: 16ನೇ ಜನಗಣತಿಯಲ್ಲಿಯೂ ಪ್ರತಿಯೊಬ್ಬ ಬೌದ್ಧರು ತಮ್ಮ ಧರ್ಮವನ್ನು ಬೌದ್ಧ ಧರ್ಮವೆಂದು ಸರಿಯಾಗಿ ದಾಖಲಿಸಬೇಕು. ಅಗತ್ಯವಿದ್ದಲ್ಲಿ ಸಾಮಾಜಿಕ ವರ್ಗದ ಮಾಹಿತಿಯನ್ನು ಹಾಗೂ ಪಾಳಿ ಭಾಷೆಯ ಜ್ಞಾನವಿದ್ದರೆ ಅದನ್ನೂ ನಮೂದಿಸಬೇಕು ಎಂದು ಕರೆ ನೀಡಿದರು.

ಭಗವಾನ್ ಬುದ್ಧರ ಬೋಧನೆಗಳು ಉಳಿದಿರುವ ಪ್ರಮುಖ ಭಾಷೆ ಪಾಳಿಯಾಗಿದ್ದು, ಸಂಸ್ಕೃತಕ್ಕೆ ನೀಡಿದಂತೆ ಪಾಳಿ ಭಾಷೆಯ ಅಧ್ಯಯನ ಮತ್ತು ಪ್ರಚಾರಕ್ಕೂ ಉತ್ತೇಜನ ನೀಡಬೇಕು ಎಂದು ಹೇಳಿದರು.

> “ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬೆಂಗಳೂರಿನ ಸದಾಶಿವ ನಗರದಲ್ಲಿ ಡಾ.ಅಂಬೇಡ್ಕರ್ ಅವರಿಗೆ 5 ಎಕರೆ ಭೂಮಿ ನೀಡಿದ್ದರು. ಆದರೆ ಅದನ್ನು ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿ ಕಾಲೇಜು ನಡೆಸುತ್ತಿದ್ದಾರೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದು, ಜಾಗವನ್ನು ವಾಪಸ್ ಪಡೆದು, ಬೌದ್ಧ ಸಮುದಾಯಕ್ಕೆ ವಿನಿಯೋಗಿಸುತ್ತೇನೆ.
>
> -ಡಾ.ಭೀಮ್‌ರಾವ್ ಯಶವಂತರಾವ್ ಅಂಬೇಡ್ಕರ್, ಡಾ.ಬಿ.ಆರ್.ಅಂಬೇಡ್ಕರ್ ಅವರ ಮೊಮ್ಮಗ.

1920ರಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಆರಂಭಿಸಿದ ಮೂಕನಾಯಕ ಪತ್ರಿಕೆಯಿಂದ ಆರಂಭವಾದ ಸಾಮಾಜಿಕ ಜಾಗೃತಿ, 1956ರ ಧಮ್ಮ ದೀಕ್ಷೆಯ ನಂತರ ಮತ್ತಷ್ಟು ಬಲವಾಯಿತು. ಶಿಕ್ಷಣ, ಸಂಘಟನೆ ಮತ್ತು ಸ್ವಾಭಿಮಾನದಿಂದ ಸಮಾಜ ಮುನ್ನಡೆಯುತ್ತಿದ್ದು, ಈ ಪಯಣ ಮುಂದುವರಿಯಬೇಕು ಎಂದು ಆಶಿಸಿದರು.

ಅದೇ ವೇಳೆ ಮೀಸಲಾತಿ ಸೇರಿದಂತೆ ಸಂವಿಧಾನಾತ್ಮಕ ಹಕ್ಕುಗಳ ವಿಚಾರದಲ್ಲಿ ಎಚ್ಚರಿಕೆಯಿಂದ ಇರಬೇಕು. ಸಾಮಾಜಿಕ ನ್ಯಾಯಕ್ಕೆ ಧಕ್ಕೆ ತರುವ ಯಾವುದೇ ಬದಲಾವಣೆಗಳನ್ನು ಪರಿಶೀಲಿಸಬೇಕು. ಎಲ್ಲರೂ ಒಗ್ಗಟ್ಟಾಗಿ ಸಂವಿಧಾನಾತ್ಮಕ ಹಕ್ಕುಗಳನ್ನು ರಕ್ಷಿಸಿ, ಶಾಂತಿಯುತ ಹಾಗೂ ಪ್ರಜಾಸತ್ತಾತ್ಮಕ ಹೋರಾಟದ ಮೂಲಕ ಸಮಾನತೆ, ನ್ಯಾಯ ಮತ್ತು ಎಲ್ಲರ ಕಲ್ಯಾಣಕ್ಕಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಈ ವೇಳೆ ಮನೋರಕ್ಖಿತ ಭಂತೇಜಿ, ಕಲ್ಯಾಣಸಿರಿ ಭಂತೇಜಿ, ಗೌತಮ ಭಂತೇಜಿ, ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ನಿವೃತ್ತ ನ್ಯಾಯಾಧೀಶ ಮಿಲಿಂದ್ ಡಾಂಗೆ, ಮಾಜಿ ಮೇಯರ್ ಪುರುಷೋತ್ತಮ, ನಿವೃತ್ತ ಡಿಸಿಪಿ ಸಿದ್ದರಾಜು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಅಂಗಿಕಾರನ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಬಲರಾಮನ ಆ ದಿನಗಳು (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವೆಲ್‌ಕಮ್ ಟು ದಿ ಜಂಗಲ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬಲರಾಮ(ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾನ್ ಸಿಟಿ (ತ)	4 ಪ್ರದರ್ಶನಗಳು
ಸಂಗಂ	
ವೆಲ್‌ಕಮ್ ಟು ದಿ ಜಂಗಲ್ (ಹಿ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ) + ಒಕ್ಕಡು (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರೈತರ ಮಕ್ಕಳಿಗೆ ಹೆಣ್ಣು ಕೊಡಿ (ಕ) + ಕಾಲಘಟ್ಟ (ಕ)	2+2 ಪ್ರದರ್ಶನಗಳು

‘ಹಾಡುವ ಬನ್ನಿ ಜನಪದವ’ ಗಾಯನ ಕಾರ್ಯಕ್ರಮ



‘ಹಾಡುವ ಬನ್ನಿ ಜನಪದವ’ ಕಾರ್ಯಕ್ರಮದಲ್ಲಿ ಗಾಯನ ಪ್ರಸ್ತುತಪಡಿಸಿದ ಕಲಾವಿದರು.

ಮೈಸೂರು,ಜೂ.27– ಮೈಸೂರಿನ ಅನಿಕೇತನ ಕಲಾಬಳಗದ ವತಿಯಿಂದ ಆಲನಹಳ್ಳಿಯ ಶಾಶ್ವತ ಸೇವಾ ಶಾಲೆ ಆವರಣದಲ್ಲಿ ‘ಹಾಡುವ ಬನ್ನಿ ಜನಪದವ’ ಗಾಯನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಲೆಯ ಕಾರ್ಯದರ್ಶಿ ಎಂ.ಆರ್.ಚೌದರಿ, ಬೆಂಗಳೂರು ಕಟ್ಟಿದ ಮಾಗಡಿ ಕೆಂಪೇಗೌಡರ ಜನ್ಮದಿನದಂದು ಈ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸ್ತುತ್ಯಾರ್ಹವಾಗಿದೆ. ಅನಿಕೇತನ ಕಲಾ ಬಳಗದವರು ಸಾದರ ಪಡಿಸಿದ ಮೂಲ ಜನಪದ ಗೀತೆಗಳು, ಪರಿಸರ ಗೀತೆಗಳು ಕೆಂಪೇಗೌಡರ ಜಯಂತಿಯ ಸಂಭ್ರಮ ಹೆಚ್ಚಿಸಿವೆ ಎಂದರು.

ಕಲೆ, ಸಂಸ್ಕೃತಿ, ಸಾಹಿತ್ಯಕ್ಕೆ ಸಂಬಂಧಿಸಿದ ಇಂತಹ ಕಾರ್ಯಕ್ರಮಗಳು ಮಕ್ಕಳಲ್ಲಿ ಸಾಮಾಜಿಕ ಸಾಂಸ್ಕೃತಿಕ ಅರಿವು ಮೂಡಿಸುತ್ತವೆ. ಇದು ಅಭಿಯಾನವಾಗಿ ಮುಂದುವರೆಯಲಿ. ಎಲ್ಲಾ ಶಾಲೆ–ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವ ಮೂಲಕ ವಿದ್ಯಾರ್ಥಿಗಳಿಗೆ ನಮ್ಮ ನೆಲಮೂಲ ಸಂಸ್ಕೃತಿಯನ್ನು ಪರಿಚಯಿಸುವಂತಾಗಲಿ ಎಂದು ಆಶಿಸಿದರು.

ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಹೆಚ್.ಪಿ.ಪವಿತ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಮೇಶ್ ತಾಯೂರು ಸೇರಿದಂತೆ ಶಾಲೆಯ ಶಿಕ್ಷಕರು, ಆಡಳಿತ ಮಂಡಳಿಯವರು, ಗಾಯಕರಾದ ಸಲ್ಮಾ, ಚೆಲುವರಾಜು, ಕಾಂತರಾಜು, ಮಹದೇವ್ ಮತ್ತಿತರರು ಉಪಸ್ಥಿತರಿದ್ದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಕಾರ್ಯಕ್ರಮದಡಿ ಬೀದಿ ನಾಟಕ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನವಿಕಾಸ ಕಾರ್ಯಕ್ರಮದಡಿ ಕುಪ್ಪೆಗಾಲ ಗ್ರಾಮದಲ್ಲಿ ಬೀದಿ ನಾಟಕ ಹಮ್ಮಿಕೊಳ್ಳಲಾಗಿತ್ತು.

ಮೈಸೂರು,ಜೂ.27– ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ತಾಲೂಕಿನ ಎಸ್‌ಆರ್ ಹುಂಡಿ ವಲಯದ ಕುಪ್ಪೆಗಾಲ ಗ್ರಾಮದಲ್ಲಿಂದು ಬೀದಿ ನಾಟಕದ ಮೂಲಕ ವಿವಿಧ ವಿಚಾರಗಳ ಬಗ್ಗೆ ಅರಿವು ಮೂಡಿಸಲಾಯಿತು.

ಧರ್ಮಸ್ಥಳದ ಧರ್ಮಾಧ್ಯಕ್ಷರಾದ ಡಾ.ವೀರೇಂದ್ರ ಹೆಗ್ಗಡೆ ಅವರ ಪತ್ನಿ ಡಾ.ಹೇಮಾವತಿ ಅವರ ಆಶಯದಂತೆ ಜ್ಞಾನವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ನಾಟಕ ಪ್ರದರ್ಶನ ನೆರೆದ್ದವರ ಮನಮುಟ್ಟಿತು.

ಇದೇ ವೇಳೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಸದಸ್ಯರಿಗೆ ಸಾಲಸೌಲಭ್ಯ ಕಲ್ಪಿಸುವ ಮೂಲಕ ಕುಟುಂಬಗಳನ್ನು ಆರ್ಥಿಕವಾಗಿ ಸದೃಢಗೊಳಿಸುವುದರ ಜೊತೆಗೆ ಜ್ಞಾನವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಬೀದಿ ನಾಟಕ, ಆರೋಗ್ಯ ತಪಾಸಣಾ ಶಿಬಿರ, ಪೌಷ್ಟಿಕ ಆಹಾರ, ಉಚಿತ ಟೈಲರಿಂಗ್, ಮಕ್ಕಳಿಗೆ ಟ್ಯೂಷನ್ ಇನ್ನಿತರ ಚಟುವಟಿಕೆಗಳನ್ನು ನಡೆಸಿಕೊಂಡು ಬರಲಾಗುತ್ತಿದೆ ಎಂದು ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿದರು. ಸ್ನೇಹಜೀವಿ ಕಲಾತಂಡದ ಮುಖ್ಯಸ್ಥ ನಾಗರಾಜು, ಬೀದಿ ನಾಟಕದ ಪ್ರಯೋಜನ, ಪರಿಣಾಮದ ಬಗ್ಗೆ ತಿಳಿಸಿಕೊಟ್ಟರು. ನೀರಿನ ಮೌಲ್ಯ, ಮದ್ಯಪಾನ ವ್ಯವಸನದ ದುಷ್ಪರಿಣಾಮ, ಶಿಕ್ಷಣದ ಮಹತ್ವ ಸೇರಿದಂತೆ ಹಲವು ಮಹತ್ವದ ವಿಚಾರಗಳ ಕುರಿತ ಮಾಹಿತಿಯನ್ನು ಬಿತ್ತರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಗೌರಿ, ಒಕ್ಕೂಟದ ಅಧ್ಯಕ್ಷೆ ನಾಗಮ್ಮ, ವಲಯದ ಮೇಲ್ವಿಚಾರಕರಾದ ಪಾಟೀಲ್, ಜ್ಞಾನವಿಕಾಸ ಸಮನ್ವಯಾಧಿಕಾರಿ ಮಂಜುಳ, ತಾಲೂಕಿನ ಸೇವಾಪ್ರತಿನಿಧಿ ಗೀತಾ, ಗ್ರಾಮದ ಮುಖಂಡರು, ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.

ಕಾಡಲ್ಲಿರುವ ನೂರಾಳೇಶ್ವರ ದರ್ಶನಕ್ಕೆ ಅವಕಾಶ ಕಲ್ಪಿಸಲು ರೈತ ಕಲ್ಯಾಣ ಸಂಘ ಆಗ್ರಹ

ಸ್ಥಳೀಯರೊಂದಿಗೆ ಸಭೆ ನಡೆಸಿದ ಸಂಘದ ಅಧ್ಯಕ್ಷ ಚಂದನ್ ಗೌಡ ಮನವಿಗೆ ಅರಣ್ಯಾಧಿಕಾರಿಗಳ ಸಕಾರಾತ್ಮಕ ಸ್ಪಂದನೆ

ಸರಗೂರು, ಜೂ.27– ಕಾಡಿನೊಳಗೆ ನೆಲೆಸಿರುವ ಹಾಗೂ ಸುತ್ತಮುತ್ತಲ ಗ್ರಾಮಗಳ ಜನ ಅತ್ಯಂತ ನಂಬಿಕೆ–ನಿಷ್ಠೆಯಿಂದ ಪೂಜಿಸುವ ನೂರಾಳೇಶ್ವರ ದೇಗುಲಕ್ಕೆ ತೆರಳಲು ಭಕ್ತರಿಗೆ ಅವಕಾಶ ಮಾಡಿಕೊಡಬೇಕು ಎಂದು ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್ ಗೌಡ ಒತ್ತಾಯಿಸಿದ್ದಾರೆ.

ದೇಗುಲಕ್ಕೆ ತೆರಳಲು ಅರಣ್ಯಾಧಿಕಾರಿಗಳು ಅವಕಾಶ ನೀಡುತ್ತಿಲ್ಲ ಎಂಬ ಸ್ಥಳೀಯರ ಅಳಲಿಗೆ ಸ್ಪಂದಿಸಿದ ಚಂದನ್ ಗೌಡ, ಈ ಸಂಬಂಧ ಸಭೆ ನಡೆಸಿ ಜನರಿಂದ ಮಾಹಿತಿ ಪಡೆದುಕೊಂಡದಲ್ಲದೇ ಅರಣ್ಯಾಧಿಕಾರಿಗಳೊಂದಿಗೆ ಚರ್ಚಿಸಿ, ಸಮಸ್ಯೆ ಪರಿಹಾರಕ್ಕೆ ಸೂಕ್ತ ಕ್ರಮ ವಹಿಸುವಂತೆ ಆಗ್ರಹಿಸಿದರು.



ಕಾಡಿನಲ್ಲಿರುವ ನೂರಾಳೇಶ್ವರ ದೇಗುಲಕ್ಕೆ ತೆರಳದಂತೆ ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್ ಗೌಡ, ಸ್ಥಳೀಯರೊಂದಿಗೆ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಚಂದನ್ ಗೌಡ, ಐತಿಹಾಸಿಕ ನೂರಾಳೇಶ್ವರ ದೇಗುಲ ಅಪಾರ ಭಕ್ತರ ಪುಣ್ಯ ಸನ್ನಿಧಿಯಾಗಿದೆ. ಬಂಡೀಪುರ ಮತ್ತು ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ನಡುವೆ ಮೈಸೂರು ಜಿಲ್ಲೆ, ಸರಗೂರು ತಾಲೂಕಿನ ದಟ್ಟ ಅರಣ್ಯದಲ್ಲಿರುವ ಪವಿತ್ರ ಹಾಗೂ ಪರಂಪರೆಯ ಪ್ರಸಿದ್ಧ ಧಾರ್ಮಿಕ ತಾಣವಾಗಿದೆ. ರಾಜ ಮಹಾರಾಜರ ಕಾಲದಿಂದಲೂ ಲೋಕ ಕಲ್ಯಾಣಕ್ಕಾಗಿ, ಉತ್ತಮ ಮಳೆ– ಬೆಳೆಗಾಗಿ, ನಾಡಿನ ರೈತರ ಸಮೃದ್ಧಿಗಾಗಿ ನೂರಾಳೇಶ್ವರ ಸನ್ನಿಧಿಯಲ್ಲಿ ಪ್ರಾರ್ಥನೆ ಮಾಡುವ ಸಂಪ್ರದಾಯವಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಸರಗೂರು ತಾಲೂಕಿನ ಪವಿತ್ರ ಕ್ಷೇತ್ರ ಬೆಲ್ಲದಕುಪ್ಪೆ ಮಹಾದೇಶ್ವರನ ದೇವರ ದರ್ಶನಕ್ಕೂ ಅರಣ್ಯ ಇಲಾಖೆಯವರು ನಿರ್ಬಂಧಿಸಿದ್ದರು. ಹಾಗೆಯೇ ನೂರಾಳೇಶ್ವರ ಸನ್ನಿಧಿಗೆ ಹೋಗುವುದಕ್ಕೂ ಅಡ್ಡಿ ಮಾಡುತ್ತಿದ್ದಾರೆ. ಬರಗಾಲದ ಭೀತಿ ಇರುವ ಹಿನ್ನೆಲೆಯಲ್ಲಿ ಉತ್ತಮ ಮಳೆ–ಬೆಳೆ ಕರುಣಿಸುವಂತೆ ದೇವರಲ್ಲಿ ಪ್ರಾರ್ಥಿಸಿ, ಸಂಕಲ್ಪ ಮಾಡಿಕೊಳ್ಳಲು ಬರುವ ಭಕ್ತರನ್ನು ತಡೆಯುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸರಗೂರು ಹುಸ್ಕೂರು, ದಡದಹಳ್ಳಿ ಹಳೆಯೂರು, ಹಂಚಿಪುರ, ಬೆಲ್ಲದಪುರ, ಬಿರುವಾಳು, ಹೊಸ ಬಿರುವಾಳು ಸೇರಿದಂತೆ ಹತ್ತಾರು ಗ್ರಾಮಗಳ ರೈತ ಬಾಂಧವರಿಗೆ ನೂರಾಳೇಶ್ವರರ ಸನ್ನಿಧಿಯಲ್ಲಿ ಹರಕೆ ಹೊತ್ತು ಪೂಜೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕು. ರಾಜ್ಯ ಸರ್ಕಾರ ಹಾಗೂ ಅರಣ್ಯ ಅಧಿಕಾರಿಗಳಿಗೆ ಸಂಘದ ವತಿಯಿಂದ ಮನವಿ ಮಾಡುತ್ತೇವೆ ಎಂದರು. ರೈತ ಕಲ್ಯಾಣ ಸಂಘದ ಒತ್ತಾಯಕ್ಕೆ ಮಣಿದ ವನ್ಯಜೀವಿ ಸಂರಕ್ಷಣೆ ಮುಖ್ಯ ಅರಣ್ಯಾಧಿಕಾರಿಗಳು ಭಕ್ತರನ್ನು ದೇವಾಲಯಕ್ಕೆ ತೆರಳಲು ಅವಕಾಶ ನೀಡುವುದಾಗಿ ಭರವಸೆ ನೀಡಿದರು.

ಇಂದು ಬೆಳವಾಡಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ಕೆ ಜಿಟಿಡಿ ಚಾಲನೆ



ಮೈಸೂರು,ಜೂ.27– ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಬೆಳವಾಡಿ ಗ್ರಾಮದಲ್ಲಿ ಭಾನುವಾರ(ಜೂ.28) ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.

ಗ್ರಾಮಕ್ಕೆ ಬೆಳಗ್ಗೆ 7.30ಕ್ಕೆ ಆಗಮಿಸುವ ಶಾಸಕರು, ಶ್ರೀ ದೊಡ್ಡಮ್ಮ ತಾಯಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆದ ಬಳಿಕ ರಸ್ತೆ ಅಭಿವೃದ್ಧಿ, ಮಳೆ ನೀರು ಚರಂಡಿ ಹಾಗೂ ಒಳಚರಂಡಿ ಕಾಮಗಾರಿ, ಕೆರೆ ಅಭಿವೃದ್ಧಿ, ಎಸ್‌ಟಿಪಿ ಘಟಕ, ಅಡ್ಡ ರಸ್ತೆಗಳ ಅಭಿವೃದ್ಧಿ ಸೇರಿದಂತೆ ಕೋಟ್ಯಾಂತರ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ವಿವಿಧ ಸ್ಥಳಗಳಲ್ಲಿ ಗುದ್ದಲಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಲಿದ್ದು, ಈ ವೇಳೆ ಹಲವು ಮುಖಂಡರು, ಅಧಿಕಾರಿಗಳು, ಗ್ರಾಮಸ್ಥರು ಉಪಸ್ಥಿತರಿರಲಿದ್ದಾರೆ.

ಅಭಿನಂದನೆ



ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಬಳಿಕ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿರುವ ಸಿದ್ದರಾಮಯ್ಯ ಅವರಿಗೆ ಕೆಪಿಸಿಸಿ ಓಬಿಸಿ ವಿಭಾಗದ ಕಾರ್ಯದರ್ಶಿ ಹರೀಶ್ ಮೊಗಣ್ಣ ಪುಸ್ತಕ ನೀಡಿ, ಅಭಿನಂದಿಸಿದರು. ಈ ವೇಳೆ ಮುಖಂಡರಾದ ವಾಸು, ಶಿವಣ್ಣ, ನಾಗರಾಜು, ದಿನೇಶ್, ಸುಜಿತ್, ಅನಿಲ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಹೆಸರಾಂತ ನಿರ್ಮಾಪಕ ಭಾಮಾ ಹರೀಶ್ ಪುತ್ರ ಉಲ್ಲಾಸ್ ಗೌಡ ಹೃದಯಾಘಾತದಿಂದ ನಿಧನ



ಬೆಂಗಳೂರು: ಮೆಜೆಸ್ಟಿಕ್ ಸೇರಿದಂತೆ ಹಲವಾರು ಕನ್ನಡ ಚಲನಚಿತ್ರಗಳನ್ನು ನಿರ್ಮಿಸಿರುವ ನಿರ್ಮಾಪಕ ಭಾಮಾ ಹರೀಶ್ ಪುತ್ರ ಉಲ್ಲಾಸ್ ಗೌಡ(28) ಶಿವಮೊಗ್ಗ ಜಿಲ್ಲೆಯ ಕೊಡಚಾದ್ರಿಗೆ ಟ್ರೆಕ್ಕಿಂಗ್‌ಗೆ ತೆರಳಿದ್ದಾಗ ಹೃದಯಾಘಾತದಿಂದ ನಿಧನರಾದರು. ಉಲ್ಲಾಸ್ ಗೌಡ ಇತ್ತೀಚೆಗೆ ಚಂದನ ಗೌಡ ಅವರೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದರು. ಈ ವರ್ಷದ ಕೊನೆಯಲ್ಲಿ ಅವರ ವಿವಾಹ ನಡೆಯಬೇಕಿತ್ತು. ಮದುವೆಗೆ ಮುನ್ನ ಅವರ ಹಠಾತ್ ಸಾವು ಕುಟುಂಬಕ್ಕೆ ದೊಡ್ಡ ಆಘಾತವನ್ನುಂಟು ಮಾಡಿದೆ. ಉಲ್ಲಾಸ್ ಗೌಡ ಒಬ್ಬ ಉದ್ಯಮಿಯಾಗಿದ್ದು, ಸ್ನೇಹಪರ ಸ್ವಭಾವಕ್ಕೆ ಹೆಸರುವಾಸಿಯಾಗಿದ್ದರು. ಅವರು ಇತ್ತೀಚೆಗೆ ತಮ್ಮ ನಿಶ್ಚಿತಾರ್ಥದ ಫೋಟೋಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದರು.

ಪದವಿ ಪ್ರದಾನ; ಪ್ರತಿಭಾ ಪುರಸ್ಕಾರ ಕಾರ್ಯಕ್ರಮ



ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ವತಿಯಿಂದ ಪದವಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸುತ್ತೂರು ಶ್ರೀಗಳು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ಮೈಸೂರು, ಜೂ.27– ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ವತಿಯಿಂದ ಮೈಸೂರಿನ ಶ್ರೀರಾಂಪುರದ ಶಿವ ಭವನದಲ್ಲಿ ಪದವಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಇಂತಹ ಸಂಘಗಳು ಸಮಾಜದ ಉನ್ನತಿಗಾಗಿ ಶ್ರಮಿಸುತ್ತಿವೆ. ಈ ಮುಖೇನ ಸಮಾಜದಲ್ಲಿ ಶಾಂತಿ, ಸಹಬಾಳ್ವೆ, ನೆಮ್ಮದಿಯ ಜೀವನಕ್ಕೆ ಸಹಕಾರಿಯಾಗಿವೆ. ಅನೇಕ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳಿಗೆ ಶಿಸ್ತು, ತಾಳ್ಮೆ, ಸಂಸ್ಕೃತಿ, ಹಿರಿಯರಿಗೆ ಗೌರವ ಕೊಡುವ ಮೌಲ್ಯಗಳನ್ನು ಕಲಿಸಿಕೊಡುತ್ತಿವೆ. ಉಚಿತ ಆರೋಗ್ಯ ತಪಾಸಣೆ, ವಧು–ವರರ ಸಮಾವೇಶ, ಉದ್ಯೋಗ ಮೇಳ, ವಿವಿಧ ಪರೀಕ್ಷೆಗಳಿಗೆ ತರಬೇತಿ, ಇಂತಹ ಹತ್ತಾರು ಸಮಾಜಮುಖಿ ಸೇವಾಕಾರ್ಯಗಳ ನಡೆಸುವುದರ ಮೂಲಕ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಬೇಕು. ಇಂತಹ ಸಂದರ್ಭದಲ್ಲಿ ಸುತ್ತೂರು ಮಠವು ಸಂಪೂರ್ಣ ಸಹಕಾರವನ್ನು ನೀಡುತ್ತದೆ ಎಂದು ನುಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಗಣೇಶ್ ಪ್ರಸಾದ್, ಈ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನಗೆ ತುಂಬಾ ಸಂತೋಷವಾಗಿದೆ. ಸಮಾಜದ ಹಿತದೃಷ್ಟಿಯಿಂದ ಸಂಘಗಳು ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಮಾಜ ಸೇವೆಯಲ್ಲಿ ನಿಸ್ವಾರ್ಥತೆಯಿಂದ ದುಡಿಯುವವರನ್ನು ಗುರುತಿಸಿ ಅವರನ್ನು ಗೌರವಿಸುವ ಕಾರ್ಯಗಳನ್ನು ಮಾಡುತ್ತಾ ಬರುತ್ತಿವೆ. ಇತ್ತೀಚಿನ ದಿನಗಳಲ್ಲಿ ಎಐ ಉದ್ಯಮದಿಂದ ಉದ್ಯೋಗಗಳು ಯುವಕರಿಗೆ ಸಿಗುವುದು ತುಂಬಾ ಕಷ್ಟವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಕಷ್ಟಪಟ್ಟು ಓದಿ ಉದ್ಯೋಗವನ್ನು ಗಿಟ್ಟಿಸಿಕೊಳ್ಳಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಬಿ.ಆರ್.ಶಿವಕುಮಾರ್ ಮಾತನಾಡಿ, ಸಮಾಜದ ಶ್ರೇಯೋಭಿವೃದ್ಧಿಗಾಗಿ ಶಕ್ತಿ ಮೀರಿ ಕೆಲಸವನ್ನು ಮಾಡುತ್ತೇನೆ ಎಲ್ಲರ ಸಹಕಾರ ಬಹಳ ಮುಖ್ಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮಾಜದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಅಂಕ ಗಳಿಸಿದ 30 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ನಡೆಯಿತು ಹಾಗು ಕರ್ನಾಟಕ ರಾಜ್ಯ ವಕೀಲರ ಪರಿಷತ್ ಚುನಾವಣೆಯಲ್ಲಿ ಆಯ್ಕೆಯಾದ ಕೆ.ಎಸ್.ಮಹಾದೇವ ಪ್ರಸಾದ್ ಅವರನ್ನು ಅಭಿನಂದಿಸಿ ಗೌರವಿಸಿ ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ ನವದೆಹಲಿಯ ರೈಲ್ವೆ ಸಚಿವಾಲಯದ ಆರ್ಥಿಕ ಮತ್ತು ತಾಂತ್ರಿಕ ಸೇವಾ ಸಂಸ್ಥೆಯ ವ್ಯವಸ್ಥಾಪಕ ಸುದೀಪ್ ಎಂ.ಜಿ, ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಸಂಘದ ಬೆಂಗಳೂರಿನ ಅಧ್ಯಕ್ಷ ಸೋಮಶೇಖರಯ್ಯ ಭಾಗವಹಿಸಿದ್ದರು.

ಮೈಸೂರು ಜಿಲ್ಲಾ ಘಟಕದ ಕ.ರಾ.ವೀ.ಲಿ.ನೌ.ಕ್ಷೇ. ಸಂಘದ ಗೌರವಾಧ್ಯಕ್ಷ ಆಲೂರು ಬಸವರಾಜು, ಬೆಂಗಳೂರು ಕ.ರಾ.ವೀ.ಲಿ.ನೌ.ಕ್ಷೇ. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್, ಶ್ರೀರಾಂಪುರದ ಶಿವ ದೇವಾಲಯದ ಅಧ್ಯಕ್ಷ ಸುರೇಶ್ ವಾಲಿ ಉಪಸ್ಥಿತರಿದ್ದರು.

ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿ ಎರಡನೇ ಹಂತ

ಶಿವಮೊಗ್ಗ ಯೋಧಾಸ್ ಮಣಿಸಿದ ಬೆಂಗಳೂರು ಬ್ಲಾಸ್ಟರ್ಸ್

ಹುಬ್ಬಳ್ಳಿ, ಜೂ.27(ವಿವಿಹೆಚ್)– ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡ, ಶಿವಮೊಗ್ಗ ಯೋಧಾಸ್ ವಿರುದ್ಧ ನಡೆದ ಪಂದ್ಯದಲ್ಲಿ ರೋಹನ್ ಪಾಟೀಲ್ ಅವರ ಆಕರ್ಷಕ ಅರ್ಧಶತಕದ ನೆರವಿನಿಂದ 7 ವಿಕೆಟ್‌ಗಳ ಜಯ ದಾಖಲಿಸಿತು.

174 ರನ್‌ಗಳ ಸವಾಲಿನ ಗುರಿ ಬೆನ್ನಟ್ಟಿದ ಬೆಂಗಳೂರು ತಂಡ 19 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 177 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಈ ಗೆಲುವಿನೊಂದಿಗೆ ಬ್ಲಾಸ್ಟರ್ಸ್ ನಾಲ್ಕನೇ ಜಯ ದಾಖಲಿಸಿ 8 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡಿದೆ.

ಆರಂಭಿಕ ಆಟಗಾರ ರೋಹನ್ ಪಾಟೀಲ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿ 46 ಎಸೆತಗಳಲ್ಲಿ 62 ರನ್ ಸಿಡಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 5 ಬೌಂಡರಿ ಹಾಗೂ 2 ಸಿಕ್ಸರ್‌ಗಳು ಸೇರಿದ್ದವು. ಬ್ಲಾಸ್ಟರ್ಸ್ ಪರ ಆರಂಭಿಕ ಜೋಡಿ ರೋಹನ್ ಪಾಟೀಲ್ ಮತ್ತು ಭುವನ್ ಮೋಹನ್ ರಾಜು ಮೊದಲ ವಿಕೆಟ್‌ಗೆ 65 ರನ್‌ಗಳ ಉತ್ತಮ ಜೊತೆಯಾಟ ನೀಡಿದರು. ಭುವನ್ 29 ರನ್ ಗಳಿಸಿದರು.

ನಂತರ ನಾಯಕ ಕೃಷ್ಣನ್ ಶ್ರೀಜಿತ್ ಜೊತೆಗೂಡಿ ಪಾಟೀಲ್ ಮೂರನೇ ವಿಕೆಟ್‌ಗೆ 54 ರನ್ ಸೇರಿಸಿ ತಂಡವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದರು. ಪಾಟೀಲ್ ಔಟಾದ ಬಳಿಕ ಪಂದ್ಯದಲ್ಲಿ ಮತ್ತೆ ರೋಚಕತೆ ಮೂಡಿದರೂ, ಪ್ರವೀಣ್ ದುಬೆ ಅವರ ಸ್ಫೋಟಕ ಬ್ಯಾಟಿಂಗ್ ಪಂದ್ಯವನ್ನು ಬ್ಲಾಸ್ಟರ್ಸ್ ಪರ ತಿರುಗಿಸಿತು.



ಬೆಂಗಳೂರು ಬ್ಲಾಸ್ಟರ್ಸ್‌ನ ರೋಹನ್ ಪಾಟೀಲ್ ಬ್ಯಾಟಿಂಗ್

ದುಬೆ ಕೇವಲ 15 ಎಸೆತಗಳಲ್ಲಿ 39 ರನ್ (3 ಬೌಂಡರಿ, 3 ಸಿಕ್ಸರ್) ಸಿಡಿಸಿದರೆ, ನಾಯಕ ಶುಭಾಂಗ್ ಹೆಗ್ಡೆ 11 ರನ್‌ಗಳೊಂದಿಗೆ ಅಜೇಯರಾಗಿದ್ದರು. ಈ ಜೋಡಿ ನಾಲ್ಕನೇ ವಿಕೆಟ್‌ಗೆ ಕೇವಲ 24 ಎಸೆತಗಳಲ್ಲಿ 60 ರನ್‌ಗಳ ಅಜೇಯ ಜೊತೆಯಾಟ ನೀಡಿ ತಂಡಕ್ಕೆ ಜಯ ತಂದುಕೊಟ್ಟಿತು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ಯೋಧಾಸ್ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 173 ರನ್ ಗಳಿಸಿತು. ಲುವ್ನಿತ್ ಸಿಸೋಡಿಯಾ 32 ಎಸೆತಗಳಲ್ಲಿ 51 ರನ್ ಗಳಿಸಿ ಮಿಂಚಿದರು. ಕೆ.ವಿ. ಅನೀಶ್ 29 ರನ್ ಹಾಗೂ ನಾಯಕ ಸ್ಮರಣ್ ರವಿಚಂದ್ರನ್ ಅಜೇಯ 36 ರನ್ ಗಳಿಸಿ ತಂಡದ ಮೊತ್ತ ಹೆಚ್ಚಿಸಿದರು.

ಬ್ಲಾಸ್ಟರ್ಸ್ ಪರ ರೋಹನ್ ರಾಜು 21 ರನ್ ನೀಡಿ 3 ವಿಕೆಟ್ ಪಡೆದು ಮಿಂಚಿದರು.

ಈ ಸೋಲಿನೊಂದಿಗೆ ಶಿವಮೊಗ್ಗ ಯೋಧಾಸ್ ಐದು ಪಂದ್ಯಗಳಲ್ಲಿ ಮೂರನೇ ಸೋಲು ಅನುಭವಿಸಿದ್ದು, 4 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ಹ್ಯಾಟ್ರಿಕ್ ಗೆಲುವು

ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಎರಡನೇ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ವಿರುದ್ಧ 3 ವಿಕೆಟ್‌ಗಳ ಗೆಲುವು ದಾಖಲಿಸುವ ಮೂಲಕ ಗುಲ್ಬರ್ಗಾ ಮಿಸ್ಟಿಕ್ಸ್ ಹ್ಯಾಟ್ರಿಕ್ ಗೆಲುವು ದಾಖಲಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ಕೆ.ಪಿ.ಕಾರ್ತಿಕೇಯಾ (63ರನ್, 43ಎ) ಸಹಾಯದಿಂದ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 155 ರನ್ ಕಲೆಹಾಕಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಗುಲ್ಬರ್ಗಾ ಮಿಸ್ಟಿಕ್ಸ್ ಬಿ.ಆರ್.ಶರತ್ (49ರನ್, 28 ಎ) ಹಾಗೂ ನಾಯಕ ಮನೀಶ್ ಪಾಂಡೆ (ಅಜೇಯ 43 ರನ್, 31ಎ) ಬ್ಯಾಟಿಂಗ್ ಬಲದಿಂದ 18.5 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 156ರನ್ ಬಾರಿಸಿ ಗೆಲುವಿನ ನಗೆ ಬೀರಿತು.